ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 25 ಮಂಗಳವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 189 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com







SDJ GOLD

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.

ಒಂದು ಗ್ರಾಂ ಚಿನ್ನಕ್ಕೆ 5500

8884304444

GOLD COMPANY

ಗಿರವಿ ಚಿನ್ನಾಭರಣ ಖರೀದಿ

ಒಂದು ಗ್ರಾಂ ಚಿನ್ನಕ್ಕೆ 5100

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)

9964522225

FOR ADVERTISEMENT

STAR OF MYSORE
Please Call: 0821-2496522 / 23
Email: ad@starofmysore.com

ಮೈಸೂರು ಮಿತ್ರ
Please Call: 0821-2496522 / 23
Email: ad@mysurumithra.com

ಹಸಿರು ನಮ್ಮ ಉಸಿರು





ಹಣ, ಹೆಸರು ಸಂಪಾದನೆ ಸುಲಭ; ಆರೋಗ್ಯ ಕಾಪಾಡಿಕೊಳ್ಳುವುದು ಕಷ್ಟ

ಆಯುರ್ವೇದ ದಿನಾಚರಣೆ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಮಂಜೇಗೌಡ ಸತ್ಯ ವಾಕ್ಯ



ಮೈಸೂರು,ಅ.24– ಸರ್ಕಾರ ಆಯುರ್ವೇದಕ್ಕೆ ಆದ್ಯತೆ ನೀಡುವ ಜೊತೆಗೆ ಚಾಮುಂಡಿಬೆಟ್ಟ ಸೇರಿದಂತೆ ನಗರದ ಪ್ರಮುಖ ಉದ್ಯಾನವನದಲ್ಲಿ ಆಯುರ್ವೇದ ಸಸಿಗಳನ್ನು ನೆಟ್ಟು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟರು.

ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಹಾಗೂ ಕರ್ನಾಟಕ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘದ ವತಿಯಿಂದ ಶ್ರೀರಾಂಪುರದ ಆಯುರ್ವೇದ ಆಸ್ಪತ್ರೆ ಆವರಣದಲ್ಲಿ 7ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಇಂದು ಮನುಷ್ಯನಿಗೆ ಹಣ, ಹೆಸರು ಸಂಪಾದನೆ ಮಾಡುವುದು ಸುಲಭವಾಗಿದೆ. ಆದರೆ ಆರೋಗ್ಯ ಕಾಪಾಡಿಕೊಳ್ಳುವುದು ಕಷ್ಟಕರವಾಗಿದೆ. ಏಕೆಂದರೆ ಮನುಷ್ಯ ಹೊಟ್ಟೆ ಕಿಚ್ಚಿನ ವಾತಾವರಣದಲ್ಲಿ ಬದುಕುತ್ತಿದ್ದಾನೆ. ಮೊದಲು ಒಳ್ಳೆಯ ಆಲೋಚನೆಗಳನ್ನು ಮಾಡಬೇಕು. ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ದೊಡ್ಡ ಗಿಡ ಮರಗಳನ್ನು ಬೆಳೆಸಿದರೆ ಆಮ್ಲಜನಕ ಸಿಗುತ್ತದೆ. ಆಯುರ್ವೇದ ಸಸಿಗಳನ್ನು ಬೆಳೆಸುವುದರಿಂದ ಆರೋಗ್ಯ ವೃದ್ಧಿಸುತ್ತದೆ. ಗ್ರಾಮೀಣ ಜನರಲ್ಲಿ ಆಯುರ್ವೇದದ ಬಗ್ಗೆ ನಂಬಿಕೆ ಕಡಿಮೆ ಆಗುತ್ತಿರುವುದರಿಂದ ಸರ್ಕಾರ ಅವರಲ್ಲಿ ಜಾಗೃತಿ ಮೂಡಿಸಬೇಕು. ಇಂದು ಗ್ರಾಮೀಣ ಭಾಗಗಳಲ್ಲಿ ಹೆಚ್ಚು ನಾಟಿ ವೈದ್ಯರು ಯಶಸ್ವಿಯಾಗಿ ಚಿಕಿತ್ಸೆ ನೀಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರೊಟ್ಟಿಗೆ ರಾಜ್ಯದಲ್ಲಿ ನಕಲಿ ಔಷಧಿಗಳ ಹಾವಳಿ ಹೆಚ್ಚಾಗಿದ್ದು ಸರ್ಕಾರ ನಿಯಂತ್ರಣ ಮಾಡಬೇಕು ಎಂದು ಸಲಹೆ ನೀಡಿದರು.


ಈ ಸಂದರ್ಭದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪ, ಔಷಧಿ ಪರಿವೀಕ್ಷಕರಾದ ಡಾ.ವೇದಾವತಿ, ಗ್ರಾ.ಪಂ. ಮಾಜಿ ಅಧ್ಯಕ್ಷ ರಮೇಶ್, ತಾ.ಪಂ. ಮಾಜಿ ಸದಸ್ಯ ಹನುಮಂತು, ಬಾಲಕೃಷ್ಣ, ವಿಜಯ ರಮೇಶ್, ಡಾ.ಯತೀಶ್, ಡಾ.ಲಕ್ಷ್ಮಿಕಾಂತ, ಡಾ.ಕುಮಾರ್, ಡಾ.ಪಿ.ರಾಘವೇಂದ್ರ ಆಚಾರ್ಯ, ಡಾ.ನೇಮಿನಾ ಘೋರ್ಪಡೆ, ಶಿವಕುಮಾರ, ದಿನೇಶ್‌ಗೌಡ, ಡಾ.ಶ್ರೀಧರಮೂರ್ತಿ ಹಾಗೂ ಡಾ.ಅಶೋಕ್ ಇನ್ನಿತರರು ಭಾಗಿಯಾಗಿದ್ದರು.

ದೀಪಾವಳಿ; ಮೈಸೂರು ದೇವರಾಜ ಮಾರುಕಟ್ಟೆಯಲ್ಲಿ ಖರೀದಿ ಜೋರು

ಪಟಾಕಿ ಬದಲು ಆಕಾಶ ಬುಟ್ಟಿಯತ್ತ ಆಸಕ್ತಿ



ಆಕಾಶ ಬುಟ್ಟಿ ಖರೀದಿಸುತ್ತಿರುವ ಜನ.



ದೇವರಾಜ ಮಾರುಕಟ್ಟೆಯಲ್ಲಿ ಹೂವು ಖರೀದಿಸುತ್ತಿರುವುದು.

ಮೈಸೂರು,ಅ.24(ಎಂಟಿವೈ)– ಬೆಳಕಿನ ಹಬ್ಬ ದೀಪಾವಳಿ ಆಚರಣೆಯ ಸಂಭ್ರಮ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕಳೆಗಟ್ಟಿದೆ. ದೀಪಾವಳಿಯ ಮೊದಲ ದಿನವಾದ ಸೋಮವಾರ ಹೂ–ತರಕಾರಿ ಸೇರಿದಂತೆ ಪೂಜಾ ಸಾಮಗ್ರಿ ಖರೀದಿಯಲ್ಲಿ ಜನತೆ ಮಗ್ನರಾಗಿದ್ದರು.

ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷದ ಬಳಿಕ ವಿಜೃಂಭಣೆಯಿಂದ ದೀಪಾವಳಿ ಹಬ್ಬವನ್ನು ಜನರು ಆಚರಿಸಲು ಮುಂದಾಗಿದ್ದಾರೆ. ಕಳೆದ ಎರಡು ದಿನಗಳಿಂದ ಹಬ್ಬದ ಖರೀದಿಯಲ್ಲಿ ತೊಡಗಿಸಿಕೊಂಡಿದ್ದ ಜನ, ಸೋಮವಾರವೂ ಖರೀದಿಯಲ್ಲಿ ತೊಡಗಿದ್ದರು. ಮೈಸೂರಿನ ದೇವರಾಜ ಮಾರುಕಟ್ಟೆ, ಚಿಕ್ಕಗಡಿಯಾರ, ಧನ್ವಂತ್ರಿ ರಸ್ತೆ, ಸಯ್ಯಾಜಿರಾವ್ ರಸ್ತೆ, ಅಗ್ರಹಾರ ವೃತ್ತ, ರಾಮಾನುಜ ರಸ್ತೆ ಸೇರಿದಂತೆ ಇನ್ನಿತರ ರಸ್ತೆಗಳಲ್ಲಿ ಪೂಜಾ ಸಾಮಗ್ರಿ ಮಾರಾಟ ಬಲು ಜೋರಾಗಿತ್ತು.

ದೇವರಾಜ ಮಾರುಕಟ್ಟೆ: ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಪೂಜಾ ಸಾಮಗ್ರಿ, ಹೂವು, ಹಣ್ಣು, ತರಕಾರಿ ವ್ಯಾಪಾರ ಜೋರಾಗಿತ್ತು. ಇಂದು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಮಾರುಕಟ್ಟೆಗೆ ಆಗಮಿಸದೇ ಇದ್ದರೂ, ವ್ಯಾಪಾರ ಉತ್ತಮವಾಗಿತ್ತು. ದೇವರಾಜ ಮಾರುಕಟ್ಟೆಯಲ್ಲಿ ಕೆಜಿ ಮಲ್ಲಿಗೆ ಹೂವಿಗೆ 800 ರೂ., ಮರ್ಲೆಗೆ 600 ರೂ., ಸುಗಂಧರಾಜ 100–150 ರೂ., ಕನಕಾಂಬರ 800 ರೂ., ಗುಲಾಬಿ 200 ರೂ., ಕಾಕಡ 500 ರೂ. ಇದ್ದರೆ, ಸೇವಂತಿಗೆ ಮಾರಿಗೆ 60ರಿಂದ 80 ರೂ.ಗೆ ಮಾರಾಟವಾಗುತ್ತಿತ್ತು.

ಇದರೊಂದಿಗೆ ಮಾರುಕಟ್ಟೆಯಲ್ಲಿರುವ ವಿವಿಧ ಮಳಿಗೆಗಳಲ್ಲಿ ಅಲಂಕಾರಿಕ ದೀಪ, ಪೂಜಾ ಸಾಮಗ್ರಿಗಳ ಖರೀದಿಯಲ್ಲೂ ಜನ ತೊಡಗಿಸಿಕೊಂಡಿದ್ದರು. ಚಿಕ್ಕಗಡಿಯಾರ ವೃತ್ತದ ಬಳಿ ತಳ್ಳುವ ಗಾಡಿಯಲ್ಲಿ ಹಣ್ಣಿನ ವ್ಯಾಪಾರ ಬಲು ಜೋರಾಗಿತ್ತು. ಸಯ್ಯಾಜಿರಾವ್ ರಸ್ತೆ ಬದಿಯಲ್ಲೂ ಹಣ್ಣು ಹಾಗೂ ಹೂವಿನ ವ್ಯಾಪಾರ ಕಳೆಗಟ್ಟಿತ್ತು.

ಎಂ.ಜಿ.ರಸ್ತೆ ಮಾರುಕಟ್ಟೆ: ಮೈಸೂರಿನ ಎಂಜಿ ರಸ್ತೆಯಲ್ಲಿರುವ ಮಾರುಕಟ್ಟೆಯಲ್ಲಿ ಬೆಳಗ್ಗೆ 9ರವರೆಗೆ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿದ್ದರು. 9.30ರ ನಂತರ ವಿರಳವಾಗಿದ್ದರೂ ಹೂವು, ಹಣ್ಣು, ತೆಂಗಿನಕಾಯಿ ಸೇರಿದಂತೆ ಸಾಮಗ್ರಿಗಳ ಖರೀದಿಯಲ್ಲಿ ಗ್ರಾಹಕರ ಉತ್ಸಾಹ ಕಂಡು ಬಂದಿತು.

ರಸ್ತೆಯಲ್ಲೇ ಹೂವಿನ ವ್ಯಾಪಾರ: ವಿವಿಧ ಮಾರುಕಟ್ಟೆಯಲ್ಲಿ ಸೇವಂತಿಗೆ ಹೂವಿನ ದರ ಸ್ವಲ್ಪ ಹೆಚ್ಚಾಗಿತ್ತು. ಆದರೆ, ರಸ್ತೆ ಬದಿಯಲ್ಲಿ ಮಾರುತ್ತಿದ್ದ ಹೂವಿನ ದರ ಕಡಿಮೆ ಇತ್ತು. ಹುಣಸೂರು, ಹೆಚ್.ಡಿ.ಕೋಟೆ, ಬಿಳಿಕೆರೆ, ಹೊಸಕೋಟೆ ಸೇರಿದಂತೆ ವಿವಿಧೆಡೆಯಿಂದ ರೈತರು ಸೇವಂತಿಗೆ ಹೂವನ್ನು ತಂದು ರಸ್ತೆ ಬದಿಯಲ್ಲಿ ಮಾರಾಟ ಮಾಡುತ್ತಿದ್ದರು. ರಸ್ತೆ ಬದಿಯಲ್ಲಿ ಮಾರು ಸೇವಂತಿಗೆ ಹೂವು 50–60 ರೂ.ಗೆ ಸಿಗುತ್ತಿತ್ತು. ಆದರೆ, ಮಾರುಕಟ್ಟೆಯಲ್ಲಿ ಮೀಟರ್‌ಗೆ 60–80 ರೂ. ವರೆಗೆ ದರ ನಿಗದಿ ಮಾಡಲಾಗಿತ್ತು.

ಮಳೆಯಿಂದ ಬೆಲೆಯಲ್ಲಿ ತುಸು ಹೆಚ್ಚಳ: ಕಳೆದ ಕೆಲವು ದಿನಗಳಿಂದ ಸುರಿದ ಧಾರಾಕಾರ ಮಳೆಯಿಂದಾಗಿ ಹೂ ಗಿಡಗಳು ಹಾಳಾಗಿದ್ದು, ಇದರಿಂದ ದೀಪಾವಳಿ ಹಬ್ಬಕ್ಕೆ ಮೈಸೂರಿನ ಜನತೆಗೆ ಬೇಡಿಕೆಗೆ ಅನುಗುಣವಾಗಿ ಈ ಬಾರಿ ಹೂವಿನ ಸರಬರಾಜಾಗಿಲ್ಲ. ಮಾರುಕಟ್ಟೆಗೆ ಕಡಿಮೆ ಪ್ರಮಾಣದ ಹೂವು ಬಂದಿರುವುದರಿಂದ ದರದಲ್ಲಿ ಸ್ವಲ್ಪ ಹೆಚ್ಚಳವಾಗಿದೆ.

ಆಕಾಶ ಬುಟ್ಟಿ: ಚಿಕ್ಕಗಡಿಯಾರದ ವೃತ್ತ ಸೇರಿದಂತೆ ವಿವಿಧೆಡೆ ಪಟಾಕಿ ಮಳಿಗೆಗಳಲ್ಲಿ ಆಕಾಶ ಬುಟ್ಟಿ ಖರೀದಿಸಲು ಜನ ಮುಗಿ ಬೀಳುತ್ತಿದ್ದರು. ಹೆಚ್ಚು ಶಬ್ದ ಬರುವ ಪಟಾಕಿ ನಿಷೇಧಿಸಿರುವುದರಿಂದ ಹಾಗೂ ಪರಿಸರದ ಮೇಲೆ ಆಗುವ ದುಷ್ಪರಿಣಾಮ ತಡೆಗಟ್ಟಲು ಹಲವು ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ ಆಕಾಶ ಬುಟ್ಟಿಗೆ ಬೇಡಿಕೆ ಹೆಚ್ಚಾಗಿರುವುದು ಕಂಡು ಬಂದಿತು.



ಚಿಕ್ಕಗಡಿಯಾರ ವೃತ್ತದ ಬಳಿ ಹಣ್ಣನ್ನು ಖರೀದಿಸಲು ಮುಗಿಬಿದ್ದ ಜನ.

ವಾಣಿ ವಿಲಾಸ ಮಾರುಕಟ್ಟೆಯಲ್ಲಿ ಹಬ್ಬದ ವ್ಯಾಪಾರ

ಮೈಸೂರು,ಅ.24(ಆರ್‌ಕೆಬಿ)–ಮೈಸೂರಿನ ಅಗ್ರಹಾರ ವೃತ್ತದಲ್ಲಿರುವ ವಾಣಿವಿಲಾಸ ಮಾರುಕಟ್ಟೆಯಲ್ಲಿ ದೀಪಾವಳಿ ವ್ಯಾಪಾರ ಅಷ್ಟಕ್ಕಷ್ಟೆ. ಮಾರುಕಟ್ಟೆಯ ಒಳಾವರಣದಲ್ಲಿರುವ ಹಣ್ಣು ಮತ್ತು ತರಕಾರಿ ಮಾರಾಟದ ಬೆರಳೆಣಿಕೆಯಷ್ಟು ಅಂಗಡಿಗಳು ಮಾತ್ರ ಇದ್ದು, ಅಲ್ಲೇ ಗ್ರಾಹಕರೇ ಸುಳಿದಿಲ್ಲ. ವ್ಯಾಪಾರಿಗಳು ಗ್ರಾಹಕರ ನಿರೀಕ್ಷೆಯಲ್ಲಿ ಕುಳಿತಂತಹ ದೃಶ್ಯ ಸ್ಥಳಕ್ಕೆ 'ಮೈಸೂರು ಮಿತ್ರ' ಭೇಟಿ ನೀಡಿದಾಗ ಕಂಡು ಬಂತು.

ಹಬ್ಬದ ಸಂದರ್ಭದಲ್ಲಿ ತರಕಾರಿ ಬೆಲೆ ಸಾಮಾನ್ಯವಾಗಿತ್ತು. ಟೊಮೆಟೊ ರೂ.30, ಕ್ಯಾರೆಟ್ 60, ಬೀನ್ಸ್ ರೂ.50 ಇತ್ತು. ಆದರೆ ಗಿರಾಕಿಗಳೇ ಇಲ್ಲದೆ ಬಿಕೋ ಎನ್ನುತ್ತಿತ್ತು. ತೆಂಗಿನಕಾಯಿ ಬೆಲೆ ಕೆಜಿಗೆ ಹೋಲ್‌ಸೇಲ್ ದರ 20ರಿಂದ 22, ರೀಟೈಲ್ ದರ 20ರಿಂದ 30ರವರೆಗೆ ಇತ್ತು. ಪಾರಂಪರಿಕ ಕಟ್ಟಡವಾದ ಈ ಮಾರುಕಟ್ಟೆಯಲ್ಲಿಯ ಗೌರಿ ಗಣೇಶ, ವರ ಮಹಾಲಕ್ಷ್ಮಿ, ಶಿವರಾತ್ರಿ ಮತ್ತು ಆಯುಧ ಪೂಜೆ ಹಬ್ಬಗಳ ಸಂದರ್ಭದಲ್ಲಿ ಒಂದಷ್ಟು ವ್ಯಾಪಾರ ನಡೆಯುವುದು ಬಿಟ್ಟರೆ, ಬೇರೆ ಹಬ್ಬಗಳಲ್ಲಿ ಅಷ್ಟಾಗಿ ವ್ಯಾಪಾರ ವಹಿವಾಟು ಇರುವುದಿಲ್ಲ ಎಂದು ಅಲ್ಲಿನ ವ್ಯಾಪಾರಿಗಳು ಬೇಸರದಿಂದ ಹೇಳುತ್ತಾರೆ. ಒಂದು ಕಾಲದಲ್ಲಿ ಸದಾ ಗಿಜಿಗುಡುತ್ತಿದ್ದ ವಾಣಿವಿಲಾಸ ಮಾರುಕಟ್ಟೆ ಇಂದು ಗ್ರಾಹಕರ ಕೊರತೆ ಎದುರಿಸುತ್ತಿದೆ. ಕಾರಣ ಕೇಳಿದರೆ ಸಮೀಪದ ಎಂ.ಜಿ ರಸ್ತೆಯಲ್ಲಿ ತರಕಾರಿ ಮಾರುಕಟ್ಟೆ ಇರುವುದರಿಂದ ಗ್ರಾಹಕರು ಅಲ್ಲಿಗೆ ಹೆಚ್ಚಾಗಿ ಹೋಗುವುದರಿಂದ ಇತ್ತಕಡೆ ಬರುವವರು ಕಡಿಮೆ ಎನ್ನುತ್ತಾರೆ ತೆಂಗಿನಕಾಯಿ ವ್ಯಾಪಾರಿ ಲೋಕೇಶ್.

ಮಹಿಳೆಗೆ ಕಪಾಳಮೋಕ್ಷ ಖಂಡಿಸಿ ನಗರಪಾಲಿಕೆ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಪ್ರತಿಭಟನೆ



ಮೈಸೂರು,ಅ.24(ಜಿಎ)–ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದ ಮಹಿಳೆಗೆ ಸಚಿವ ವಿ.ಸೋಮಣ್ಣ ಕಪಾಳಮೋಕ್ಷ ಮಾಡಿರುವುದನ್ನು ಖಂಡಿಸಿ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ನಾಯಕರ ಸಂಘದ ವಾಲ್ಮೀಕಿ ಪುತ್ಥಳಿ ಬಳಿ ಮೈಸೂರು ಮಹಾನಗರ ಪಾಲಿಕೆ ಸದಸ್ಯ ವಿ.ಲೋಕೇಶ್ ಪಿಯಾ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ನಂತರ ಮಾತನಾಡಿದ ಅವರು, ನಾಯಕ ಸಮುದಾಯದ ಮಹಿಳೆ ತನ್ನ ಸಂಕಷ್ಟ ಹೇಳಿಕೊಳ್ಳಲು ಹೋದಾಗ ಸಚಿವ ವಿ.ಸೋಮಣ್ಣ, ಆಕೆ ಕಪಾಳಕ್ಕೆ ಬಾರಿಸಿ ಜಾತಿ ಹೆಸರು ಹಿಡಿದುಕೊಂಡು ಬೈದು ಇಡೀ ನಾಯಕ ಸಮುದಾಯವನ್ನು ಅವಮಾನಿಸಿದ್ದಾರೆ. ಈ ಕೂಡಲೇ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು ಹಾಗೂ ಅವರ ವಿರುದ್ಧ ಅಟ್ರಾಸಿಟಿ ಕೇಸ್ ದಾಖಲಿಸಿ, ಬಂಧಿಸಿ ಜೈಲಿಗಟ್ಟಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಪಿ.ಸತೀಶ್, ಸಿದ್ದಪ್ಪ, ಮೂರ್ತಿ, ಮಂಜು, ಶೇಖರ್, ವಿನೋದ, ಅವಿನಾಶ್ ಸೇರಿದಂತೆ ಇತರರಿದ್ದರು.



ಅಂಧತ್ವದಿಂದ ಬಳಲುತ್ತಿರುವ ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿಗಳಾದ ಒಂದೇ ಕುಟುಂಬದ ಎಲಿಜಬೆತ್ ರಾಣಿ ಮತ್ತು ಹೆನ್ರಿಮೋಸೆಸ್ ಸಹೋದರ–ಸಹೋದರಿಯ ಕಣ್ಣಿನ ಶಸ್ತ್ರಚಿಕಿತ್ಸೆಗಾಗಿ ನಿವೃತ್ತ ಮುಖ್ಯ ಶಿಕ್ಷಕ ವಿ.ರಾಜೇಂದ್ರ, ಟಿ.ಎಸ್.ನಾಗಿಣಿ ದಂಪತಿ ತಮ್ಮ ಜನ್ಮದಿನದ ಪ್ರಯುಕ್ತ ನಿವೃತ್ತ ಶಿಕ್ಷಕಿ ವಿ.ಅನ್ನಪೂರ್ಣ ಅವರೊಂದಿಗೆ ಆರ್ಥಿಕ ಸಹಾಯ ಮಾಡಿದರು. ಶಿಕ್ಷಕಿ ಪೂರ್ಣಿಮಾ, ರಾಜಶೇಖರ್ ಇದ್ದಾರೆ.

ಜಯರಾಜುಗೆ ಪಿಹೆಚ್.ಡಿ ಪದವಿ



ಮೈಸೂರು,ಅ.24–ಡಾ.ಅನಿಲ್‌ಕುಮಾರ್ ಮಾರ್ಗದರ್ಶನದಲ್ಲಿ ಪಿ.ಜಯರಾಜು ರೇಷ್ಮೆ ವಿಜ್ಞಾನದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಜೆಡಬ್ಲ್ಯುಜೆಸಿ ಮಾಜಿ ಅಧ್ಯಕ್ಷ ಡಾ.ಎನ್.ಎಂ.ಕಾವೇರಿಯಪ್ಪ ನಿಧನ



ಮೈಸೂರು, ಅ. 24– ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಮಾಜಿ ಅಧ್ಯಕ್ಷರು ಹಾಗೂ ವಿದ್ಯಾರಣ್ಯಪುರಂ 4ನೇ ಮುಖ್ಯ ರಸ್ತೆ, 3ನೇ ಕ್ರಾಸ್ ನಿವಾಸಿಗಳಾದ ಡಾ. ನಂಬುಡುಮಾಡ ಎಂ. ಕಾವೇರಿಯಪ್ಪ (80) ಸೋಮವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು.

ಶ್ರೀಯುತರು ಪತ್ನಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಪಶುವೈದ್ಯರಾದ ಡಾ. ಕಾವೇರಿಯಪ್ಪ ಅವರು ಪಶು ಸಂಗೋಪನಾ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ, ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ (ಮೈಸೂರು ಸ್ಪೋರ್ಟ್ಸ್ ಕ್ಲಬ್) ಅಧ್ಯಕ್ಷರಾಗಿ, ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷರಾಗಿ ಮತ್ತು ಕುವೆಂಪುನಗರದ ಶ್ರೀ ಕಾವೇರಿ ಎಜುಕೇಷನ್ ಕೌನ್ಸಿಲ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಗಾಲ್ಫರ್ ಆದ ಇವರು ರಾಜ್ಯದಾದ್ಯಂತ ಹಲವಾರು ಗಾಲ್ಫ್ ಪಂದ್ಯಾವಳಿಯಲ್ಲಿ ಸಾಕಷ್ಟು ಟ್ರೋಫಿ ಹಾಗೂ ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.

ಸೋಮವಾರ ಮಧ್ಯಾಹ್ನವೇ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಪಿ.ನಾಗಪ್ಪ

ಮೈಸೂರಿನ ಯಾದವಗಿರಿ ನಿವಾಸಿಯಾದ ನಿವೃತ್ತ ರೈಲ್ವೆ ಇಂಜಿನಿಯರ್ ಪಿ.ನಾಗಪ್ಪ (82) ಅವರು ಇಂದು ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಸಂಜೆ ಹೆಚ್‌ಡಿ ಕೋಟೆ ತಾಲೂಕಿನ ಕೋಡಗಹಳ್ಳಿ ಮಠದ ಬಳಿಯ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಡಿ ಮಾರುಕಟ್ಟೆಯಲ್ಲಿ ಕೈ ಸುಡದ ಹೂ-ತರಕಾರಿ ಬೆಲೆ





ಮೈಸೂರು,ಅ.24(ಪಿಎಂ)– ದೀಪಾವಳಿಯಲ್ಲಿ ಪಟಾಕಿ ಬೆಲೆ ಗ್ರಾಹಕರ ಕೈ ಸುಡುತ್ತಿದೆ. ಈ ನಡುವೆ ಹೂವು–ತರಕಾರಿ ಬೆಲೆ ಹೆಚ್ಚಳಗೊಳ್ಳದೇ ಗ್ರಾಹಕರಲ್ಲಿ ಸಮಾಧಾನ ತಂದಿದೆ. ಸೋಮವಾರ ಮಂಡಿ ಮಾರುಕಟ್ಟೆಯಲ್ಲಿ ಗ್ರಾಹಕರ ತುಸು ದಟ್ಟಣೆ ಕಂಡು ಬಂದರೆ, ಉಳಿದಂತೆ ಇಡೀ ದಿನ ಮಾರುಕಟ್ಟೆಯಲ್ಲಿ ಗ್ರಾಹಕರ ಸಂಖ್ಯೆಯಲ್ಲಿ ತೀರಾ ಹೆಚ್ಚಳವೇನೂ ಇರಲಿಲ್ಲ.

ಆಯುಧಪೂಜೆಯಂದು ಮೈಸೂರಿನ ಬಹುತೇಕ ಕಡೆಗಳಲ್ಲಿ ಮಾರಿಗೆ 200 ರೂ.ವರೆಗೆ ಬೆಲೆ ಕಾಯ್ದುಕೊಂಡಿದ್ದ ಸೇವಂತಿಗೆ ಹೂ, ಬಳಿಕ 50ರಿಂದ 60 ರೂ. ದರದ ಗಡಿಯನ್ನು ಈವರೆಗೆ ದಾಟಿಲ್ಲ. ಅಂತೆಯೇ ಮಾರುಕಟ್ಟೆಯಲ್ಲಿ ಸೇವಂತಿಗೆ ಮಾರಿಗೆ 60 ರೂ. ಇದ್ದರೆ, ಮಲ್ಲಿಗೆ 100 ರೂ., ಕಾಕಡ 70 ರೂ. ಹಾಗೂ ಕನಕಾಂಬರ 100ರಿಂದ 150 ರೂ.ವರೆಗಿನ ದರದಲ್ಲಿ ಮಾರಾಟಗೊಳ್ಳುತ್ತಿದ್ದವು. 'ಪ್ರತಿ ವರ್ಷ ದೀಪಾವಳಿಯಲ್ಲಿ ಅಂತಹ ಬೇಡಿಕೆ ಇರದ ಕಾರಣ ಹೂಗಳ ಬೆಲೆ ದುಬಾರಿ ಆಗುವುದಿಲ್ಲ' ಎಂದು ಇಲ್ಲಿನ ಹೂವಿನ ವ್ಯಾಪಾರಿ ರಾಜು ಹೇಳಿದರು.

ಪೂಜಾ ಸಾಮಗ್ರಿ ಬೆಲೆಯಲ್ಲಿ ಹೆಚ್ಚಳವಿಲ್ಲ: ಮೊನ್ನೆಯಷ್ಟೇ 100 ರೂ. ಇದ್ದ ಒಂದು ಕಟ್ಟು ವೀಳ್ಯದೆಲೆ ಇಂದಿಲ್ಲಿ 120 ರೂ. ಮೂಲಕ ತುಸು ದರ ಹೆಚ್ಚಳಗೊಂಡಿದ್ದರ ಹೊರತಾಗಿ ಉಳಿದಂತೆ ಪೂಜಾ ಸಾಮಗ್ರಿಗಳ ಬೆಲೆಯಲ್ಲಿ ಯಾವುದೇ ಏರಿಕೆ ಕಂಡು ಬರಲಿಲ್ಲ. ಇಲ್ಲಿನ ಪೂಜಾ ಸಾಮಗ್ರಿ ಮಳಿಗೆಯ ಸಮೀರ್ ಮಾತನಾಡಿ, ಈ ಹಬ್ಬಕ್ಕೆ ಅರಿಸಿನ–ಕುಂಕುಮ ಮತ್ತು ಮಣ್ಣಿನ ದೀಪಗಳ ಖರೀದಿ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತದೆ. ಅರಿಸಿನ–ಕುಂಕುಮ 50 ಗ್ರಾಂಗೆ ತಲಾ 10 ರೂ. ಇದ್ದರೆ, 2ರಿಂದ 30 ರೂ. ವರೆಗಿನ ದರದಲ್ಲಿ ಮಣ್ಣಿನ ದೀಪಗಳು ನಮ್ಮಲ್ಲಿ ಮಾರಾಟವಾಗುತ್ತಿವೆ ಎಂದರು.

ಹಿಂದೆಯೇ ತುಸು ಹೆಚ್ಚಳ: ಕಳೆದ 15 ದಿನಗಳ ಹಿಂದೆಯೇ ಈರುಳ್ಳಿ ಮತ್ತು ಆಲೂಗಡ್ಡೆ ದರದಲ್ಲಿ ಸ್ವಲ್ಪ ಹೆಚ್ಚಳವಾಗಿದೆ. ಹಬ್ಬದ ಹಿನ್ನೆಲೆಯಲ್ಲಿ ಇಂದೇನೂ ಏರಿಕೆಯಾಗಿಲ್ಲ ಎನ್ನುತ್ತಾರೆ ಇಲ್ಲಿನ ವ್ಯಾಪಾರಿ ಚೆಲುವರಾಯಸ್ವಾಮಿ. ಕೆಜಿಗೆ 25 ರೂ. ಇದ್ದ ಪೂನಾ ಈರುಳ್ಳಿ 40 ರೂ.ಗೆ ಜಿಗಿದಿದ್ದರೆ, 30 ರೂ. ಇದ್ದ ಕೆಜಿ ಆಲೂಗಡ್ಡೆ, 40 ರೂ.ಗೆ ಏರಿಕೆ ಕಂಡಿದೆ. 15 ದಿನಗಳ ಹಿಂದೆಯೇ ಈ ದರ ಹೆಚ್ಚಳಗೊಂಡಿದೆ ಎಂದರು.

ಏರಿಕೆ ಕಾಣದ ತರಕಾರಿ: ತರಕಾರಿ ಬೆಲೆಯಲ್ಲಿ ಯಾವುದೇ ಹೆಚ್ಚಳ ಮಾರುಕಟ್ಟೆಯಲ್ಲಿ ಕಂಡು ಬರಲಿಲ್ಲ. ಕಳೆದ 15 ದಿನಗಳ ಹಿಂದೆ ಇದ್ದ ಬೆಲೆಯೇ ಮುಂದುವರೆದಿತ್ತು. ಹೆಚ್ಚು ಮಾರಾಟಗೊಳ್ಳುವ ಬೀನ್ಸ್ ಕೆಜಿಗೆ 50 ರೂ. ಇದ್ದರೆ, ಟೋಮೋಟಾ 30 ರೂ. ಬೆಲೆ ಕಾಯ್ದುಕೊಂಡಿತ್ತು. ಕೆಜಿ ಬಟಾಣಿ ಮಾತ್ರ 240 ರೂ.ನಿಂದ 300 ರೂ.ಗೆ ಹೆಚ್ಚಳಗೊಂಡಿತ್ತು. ಮಂಡಿ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷ ಪ್ರೇಮ್ ಕುಮಾರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಬಹುತೇಕ ಮನೆಗಳಲ್ಲಿ ಬುಧವಾರ ದೀಪಾವಳಿ ಹಬ್ಬ ಆಚರಣೆ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ನಾಳೆ ಹೆಚ್ಚಿನ ಗ್ರಾಹಕರು ಮಾರುಕಟ್ಟೆಗೆ ಭೇಟಿ ನೀಡಲಿದ್ದಾರೆ. ಜೊತೆಗೆ ಹಬ್ಬದ ದಿನವಾದ ಬುಧವಾರವೂ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಮಾರುಕಟ್ಟೆಗೆ ಬರುವ ನಿರೀಕ್ಷೆ ಇದೆ ಎಂದರು.

ಮೈಸೂರಿನ ಸಿಸಿಬಿ ಪೊಲೀಸರಿಂದ ಭರ್ಜರಿ ಕಾರ್ಯಾಚರಣೆ

ನಾಲ್ವರ ಸೆರೆ, 23 ಲಕ್ಷ ಮೌಲ್ಯದ 46.7 ಕೆಜಿ ಗಾಂಜಾ ವಶ



ಮೈಸೂರು,ಅ.24(ಆರ್‌ಕೆ)–ಕ್ಷಿಪ್ರ ಕಾರ್ಯಾಚರಣೆ ನಡೆಸಿ ನಾಲ್ವರನ್ನು ಬಂಧಿಸಿರುವ ಮೈಸೂರಿನ ಸಿಸಿಬಿ ಪೊಲೀಸರು, 23 ಲಕ್ಷ ರೂ. ಮೌಲ್ಯದ 46.7 ಕೆಜಿ ಗಾಂಜಾ, 10,000 ರೂ. ನಗದು, 3 ಮೊಬೈಲ್‌ಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನ ಗೌಸಿಯಾನಗರ ನಿವಾಸಿ ಮೆಹಬೂಬ್ ಪಾಷ ಅವರ ಮಗ ರಿಯಾಜ್ ಪಾಷ(24), ವಿಜಯನಗರ 3ನೇ ಹಂತದ ಅಬ್ದುಲ್ ಅವರ ಮಗ ಎಂ.ಎ.ಹ್ಯಾರೀಸ್(28), ಮಂಡಿಮೊಹಲ್ಲಾದ ಸೈಯ್ಯದ್ ಅತೀಕ್ ಅಹಮದ್ ಅವರ ಮಗ ಸೈಯದ್ ಅರ್ಫಾತ್ ಫಹಾದ್(28) ಹಾಗೂ ಬೆಳವಾಡಿ ಗ್ರಾಮದ ವಾಸಿ ಟಿ.ಡಿ. ವರದರಾಜ ದಾಸ್ ಅವರ ಮಗ ಕೆ. ದರ್ಶನ್ ಕುಮಾರ್(26) ಬಂಧಿತ ಆರೋಪಿಗಳು.

ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಮೈಸೂರಿನ ಬನ್ನಿಮಂಟಪದ ಹನುಮಂತನಗರ ರಸ್ತೆಯಲ್ಲಿ ಅಕ್ರಮವಾಗಿ ಕಾರಿನಲ್ಲಿ ಗಾಂಜಾ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ದರ್ಶನ್‌ಕುಮಾರ್, ಸೈಯ್ಯದ್ ಅರ್ಫಾತ್ ಹಾಗೂ ಹ್ಯಾರೀಸ್‌ನನ್ನು ಅ.22ರಂದು ಬಂಧಿಸಿದರು. ಅವರಿಂದ 5 ಕೆಜಿ 691 ಗ್ರಾಂ ಗಾಂಜಾ, ಮಾರುತಿ 800 ಕಾರು, 10,000 ರೂ. ನಗದು ಹಾಗೂ 3 ಮೊಬೈಲ್‌ಗಳನ್ನು ವಶಪಡಿಸಿಕೊಂಡಿರುವ ಇನ್ಸ್‌ಪೆಕ್ಟರ್ ಎ.ಮಲ್ಲೇಶ್ ನೇತೃತ್ವದ ಸಿಸಿಬಿ ಪೊಲೀಸರು, ಮತ್ತೊಂದು ಪ್ರಕರಣದಲ್ಲಿ ಅಕ್ಟೋಬರ್ 23ರಂದು ಮಂಡಿಮೊಹಲ್ಲಾದ ಸಿವಿ ರಸ್ತೆ 7ನೇ ಕ್ರಾಸ್ ಮನೆಯೊಂದರ ಮೇಲೆ ದಾಳಿ ನಡೆಸಿ ಅಕ್ರಮವಾಗಿ ಗಾಂಜಾ ಇರಿಸಿಕೊಂಡು ಮಾರಾಟ ಮಾಡುತ್ತಿದ್ದ ರಿಯಾಜ್ ಪಾಷನನ್ನು ಬಂಧಿಸಿ 41 ಕೆಜಿ ಗಾಂಜಾ ವಶಪಡಿಸಿಕೊಂಡರು.

ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ಮಾರ್ಗದರ್ಶದಂತೆ ಸಿಸಿಬಿ ಎಸಿಪಿ ಸಿ.ಕೆ. ಅಶ್ವಥನಾರಾಯಣ ಮೇಲ್ವಿಚಾರಣೆಯಲ್ಲಿ ನಡೆದ ಈ ಪತ್ತೆ ಕಾರ್ಯಾಚರಣೆಯಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಎಎಸ್‌ಐ ರಾಜು, ಸಿಬ್ಬಂದಿಗಳಾದ ಅನಿಲ್, ಸುಬಾನಲ್ಲಾ ಬಾಲ್‌ದಾರ್, ಶ್ರೀನಿವಾಸಪ್ರಸಾದ್, ಜೋಸೆಫ್ ನೊರೋನಾ, ರವಿ ಕುಮಾರ್, ರಾದೇಶ್, ಜನಾರ್ಧನರಾವ್, ಕೆ.ಜಿ. ಶ್ರೀನಿವಾಸ, ಅರುಣಕುಮಾರ್, ರಘು ಹಾಗೂ ಮಮತ ಪಾಲ್ಗೊಂಡಿದ್ದರು.

ಅ.30ರಂದು ಒಕ್ಕಲಿಗ ವಧು–ವರರ ಸಮಾವೇಶ

ಮೈಸೂರು,ಅ.24–ನೇಗಿಲಯೋಗಿ ಮರುಳೇಶ್ವರ ಒಕ್ಕಲಿಗ ವಧು–ವರರ ವೇದಿಕೆ 11ನೇ ಮತ್ತು 2022ನೇ ಸಾಲಿನ ಒಕ್ಕಲಿಗ ವಧುವರರ ಸಮಾವೇಶವನ್ನು ಅ.30ರಂದು ಬೆಳಗ್ಗೆ 9 ಗಂಟೆಗೆ ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಹೊಸ ನ್ಯಾಯಾಲಯದ ಎದುರು, ಕೆ.ಜಿ. ಕೊಪ್ಪಲು ಇಲ್ಲಿ ಆಯೋಜಿಸಲಾಗಿದೆ ಈಗಾಗಲೇ ನೋಂದಾಯಿಸಿ ಕೊಂಡಿರುವವರು ಹಾಗೂ ಸ್ಥಳದಲ್ಲೇ ನೋಂದಾಯಿಸಿಕೊಳ್ಳಲು ಇಚ್ಛಿಸುವವರು ಈ ಸಮಾವೇಶದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ: ಮೈಸೂರು–948345 3005, 99006 29393, 9731139407, 99003692 77, ಮಂಡ್ಯ–9886842739, 94480 44196, ಬೆಂಗಳೂರು–8105611964, 9845286652. ರಾಮನಗರ–8123802742, 9731318012, ಹಾಸನ–9591990543, 9448466925 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.10.2022 ಮಂಗಳವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ : ಚಿತ್ತ, ರಾಹುಕಾಲ: ಸಂಜೆ 7.30 ರಿಂದ 9ರವರೆಗೆ

■ **ಶ್ರೀ ಉತ್ತರಾದಿ ಮಠ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನ :** ಕೇತುಗ್ರಸ್ತ ಸೂರ್ಯಗ್ರಹಣ, ಗ್ರಹಣಶಾಂತಿ ಹೋಮ, ಸ್ಥಳ: ಶ್ರೀಆಂಜನೇಯಸ್ವಾಮಿ ದೇವಸ್ಥಾನ, ಯಾದವಗಿರಿ, ಬೆಳಗ್ಗೆ 8 ರಿಂದ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, 24ನೇ ವರ್ಷದ ಕುಂಭಾಭಿಷೇಕ, ಹಾಲರವಿ ಸೇವೆ, ಬೆಳಗ್ಗೆ 6 ಗಂಟೆಗೆ ಅಮಾವಾಸ್ಯೆ ಪ್ರಯುಕ್ತ ಶ್ರೀ ಸ್ವಾಮಿಯವರಿಗೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 9 ಗಂಟೆಗೆ ಮಹಾಗೋಪುರದ ಮೇಲೆ ಧ್ವಜಾರೋಹಣ, ಸ್ಥಳ: ದೇವಸ್ಥಾನ, ಲಷ್ಕರ್ ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ – ಬೇಲೂರು ರಾಮಮೂರ್ತಿ, 6.20 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ.ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಕೆ.ಬಿ. ಸುನೀತಾ ಆಚಾರ್ಯ, ಪಿ.ಎಸ್. ರಂಜನಿ, ವ್ಯಾಖ್ಯಾನ– ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್. ಎಸ್., 9.00 ವೃತ್ತಿ ಮಾರ್ಗದರ್ಶನ–ಕಂಪ್ಯೂಟರ್ ಸೈನ್ಸ್ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳು ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಗುರುರಾಜ್ ಹೆಚ್.ಎಲ್. ಅವರೊಡನೆ ಸಂದರ್ಶನ, 10.00 ಗಾನರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ ಸಾಹಿತ್ಯ ಮತ್ತು ನಿರೂಪಣೆ– ಪ್ರೊ. ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್ **ಮಧ್ಯಾಹ್ನ:** 12.05 ವನಿತಾವಿಹಾರ–ದೀಪಾವಳಿ ಬದುಕಿನ ರಂಗಾವಳಿ–ವಿಶೇಷ ಕಾರ್ಯಕ್ರಮ, ಮಾಹಿತಿ– ಪ್ರೇಮಾ ಮಹೇಂದ್ರಕರ್ ಮತ್ತು ಮಾಲತಿ ಹೆಗಡೆ. ಪ್ರಸ್ತುತಿ–ಕೆ.ಬಿ. ಮೀನಾ, 12.30 ದೇವರನಾಮ–ವೃಂದಗಾನ, 12.45 ಹಬ್ಬಗಳು ನಮ್ಮ ಸಂಪತ್ತು, ಮಾತನಾಡುತ್ತಾರೆ ಡಾ. ವಿಜಯಲಕ್ಷ್ಮಿ ಮ.ನಾ.ಪುರ, 1.20 ಭಾವಗೀತೆಗಳು–ವೃಂದಗಾನ, 3.00 ಬಿ. ದೇವೇಂದ್ರಪ್ಪ – ಜಲತರಂಗವಾದನ, 4.00 ಕಥಾ ಕಾಲಕ್ಷೇಪ 'ಕಿರಾತಾರ್ಜುನ' ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ– ಹೈನುರಾಸುಗಳಲ್ಲಿ ಚರ್ಮಗಂಟ್ಟು ರೋಗದ ನಿರ್ವಹಣೆ ಕುರಿತು ಡಾ.ಸಿ.ಪಿ. ತಿಮ್ಮಯ್ಯ ಅವರೊಡನೆ ಸಂದರ್ಶನ, 9.30 ಡಾ. ಆರ್.ಎನ್. ಶ್ರೀಲತಾ – ಹಾಡುಗಾರಿಕೆ, 10.00 ದೀಪಾವಳಿ ಪ್ರಯುಕ್ತ ವಿಶೇಷ ರೂಪಕ "ಬೆಳಕಿನ ಬಳುವಳಿ ಈ ದೀಪಾವಳಿ", ರಚನೆ ಮತ್ತು ಪ್ರಸ್ತುತಿ– ಜಿ. ಪುಷ್ಪಲತಾ, 10.30 ಸವಿನೆನಪು

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 25 ಮಂಗಳವಾರ 2022

ಸಂಪುಟ: 43 | ಸಂಚಿಕೆ: 189 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಇಂದು ದೀಪಾವಳಿಯಂದೇ ಸೂರ್ಯಗ್ರಹಣ

ಬೆಂಗಳೂರು, ಅ.24– ಈ ಬಾರಿ ದೀಪಾವಳಿ ಹಬ್ಬವನ್ನು ಗ್ರಹಣದ ನೆರಳಿನಲ್ಲಿ ಆಚರಿಸಲಾಗುತ್ತಿದೆ. ನಾಳೆ (ಮಂಗಳವಾರ) ವರ್ಷದ ಎರಡನೇ ಮತ್ತು ಕೊನೆಯ ಸೂರ್ಯಗ್ರಹಣ ಸಂಭವಿಸಲಿದೆ. ಸೂರ್ಯಗ್ರಹಣದ ಸೂತಕವು 12 ಗಂಟೆಗಳ ಮೊದಲು ಪ್ರಾರಂಭವಾಗುತ್ತದೆ. ಸೂರ್ಯಗ್ರಹಣ ಯಾವಾಗಲೂ ಅಮಾವಾಸ್ಯೆಯ ತಿಥಿಯಂದು ಸಂಭವಿಸುತ್ತದೆ. ಜ್ಯೋತಿಷ್ಯಶಾಸ್ತ್ರದ ಪ್ರಕಾರ ಸೂರ್ಯ, ಭೂಮಿ ಮತ್ತು ಚಂದ್ರ ಒಂದೇ ಸಾಲಿನಲ್ಲಿ ಬಂದಾಗ ಗ್ರಹಣ ಸಂಭವಿಸುತ್ತದೆ. ಇದು ವರ್ಷದ ಕೊನೆಯ ಸೂರ್ಯಗ್ರಹಣ. ಭಾರತದ ಕೆಲವು ಭಾಗಗಳಲ್ಲಿ ಈ ಗ್ರಹಣವನ್ನು ಕಾಣಬಹುದು ಎಂದು ಹೇಳಲಾಗುತ್ತಿದೆ. ಇದಕ್ಕೂ ಮೊದಲು, ವರ್ಷದ ಮೊದಲ ಸೂರ್ಯಗ್ರಹಣ ಏಪ್ರಿಲ್ 30 ರಂದು ಸಂಭವಿಸಿತ್ತು.

ಗ್ರಹಣ ಸಮಯ: ಧಾರ್ಮಿಕ ದೃಷ್ಟಿಕೋನದಿಂದ ಸೂರ್ಯಗ್ರಹಣಕ್ಕೆ ವಿಶೇಷ ಮಹತ್ವವಿದೆ. ಈ ಗ್ರಹಣವು ವಿಶೇಷ ಸಂದರ್ಭದಲ್ಲಿ ಸಂಭವಿಸಿದರೆ, ಅದರ ಪ್ರಾಮುಖ್ಯತೆಯು ಇನ್ನಷ್ಟು ಹೆಚ್ಚಾಗುತ್ತದೆ. ಅಕ್ಟೋಬರ್ 25 ರಂದು, ಈ ಸೂರ್ಯಗ್ರಹಣವು ಐಸ್‌ಲ್ಯಾಂಡ್‌ನಿಂದ ಮಧ್ಯಾಹ್ನ 2:29ಕ್ಕೆ ಪ್ರಾರಂಭವಾಗಿ ಅರಬ್ಬಿ ಸಮುದ್ರದಲ್ಲಿ ಸಂಜೆ 6.20ಕ್ಕೆ ಕೊನೆಗೊಳ್ಳುತ್ತದೆ. ಭಾರತದಲ್ಲಿ, ಈ ಗ್ರಹಣವು ಸುಮಾರು ಸಂಜೆ 4.29ಕ್ಕೆ ಪ್ರಾರಂಭವಾಗಿ, ಸಂಜೆ 6.20ರವರೆಗೆ ಇರುತ್ತದೆ.

ಸೂತಕದ ಅವಧಿ: ಧಾರ್ಮಿಕ ಗ್ರಂಥಗಳ ಪ್ರಕಾರ, ಸೂರ್ಯಗ್ರಹಣದ ಸೂತಕ ಅವಧಿಯು 12 ಗಂಟೆಗಳ ಮೊದಲು ಪ್ರಾರಂಭವಾಗುತ್ತದೆ. ಭಾರತದಲ್ಲಿ, ಈ ಸೂರ್ಯಗ್ರಹಣವು ಅಕ್ಟೋಬರ್ 25 ರಂದು ಸಂಜೆ 4 ಗಂಟೆಗೆ ಗೋಚರಿಸುತ್ತದೆ. ಆದ್ದರಿಂದ 12 ಗಂಟೆಗಳ ಮೊದಲು ಅಂದರೆ ಅಕ್ಟೋಬರ್ 25 ರಂದು ಬೆಳಗ್ಗೆ 4 ರಿಂದ ಸೂತಕ ಅವಧಿ ಇರುತ್ತದೆ.

ಭಾರತದಲ್ಲಿ ಸಂಜೆ 4.29ರಿಂದ 6.20ರವರೆಗೆ ಗೋಚರ



ಏನು ವಿಶೇಷ: ಗ್ರಹಣದ ಸೂತಕ ಕಾಲದಲ್ಲಿ ದಾನ ಮತ್ತು ಜಪ ಇತ್ಯಾದಿಗಳಿಗೆ ವಿಶೇಷ ಮಹತ್ವವಿದೆ. ಈ ಸಮಯದಲ್ಲಿ, ಪವಿತ್ರ ನದಿಗಳು ಮತ್ತು ಸರೋವರಗಳಲ್ಲಿ ಸ್ನಾನ ಮಾಡಿ ಮಂತ್ರಗಳನ್ನು ಜಪಿಸಲಾಗುತ್ತದೆ. ಈ ಸಮಯದಲ್ಲಿ ಮಂತ್ರ ಸಿದ್ಧಿಯನ್ನು ಸಹ ಮಾಡಲಾಗುತ್ತದೆ.

ಗ್ರಹಣದ ಸಮಯದಲ್ಲಿ ಹೊರಗೆ ಹೋಗುವುದನ್ನು ತಪ್ಪಿಸಿ. ಆದಷ್ಟು ದೇವರನ್ನು ಸ್ಮರಿಸಿ ಮಂತ್ರ ಇತ್ಯಾದಿಗಳನ್ನು ಪಠಿಸಿ. ಗ್ರಹಣದ ಸಮಯದಲ್ಲಿ ಯಾವುದೇ ಶುಭ ಕಾರ್ಯಗಳನ್ನು ಮಾಡಬೇಡಿ. ಈ ಸಮಯದಲ್ಲಿ ದೇವಾಲಯದ ಬಾಗಿಲುಗಳನ್ನು ಮುಚ್ಚಬೇಕು. ಒಂದೇ ಸ್ಥಳದಲ್ಲಿ ಕುಳಿತು ದೇವರ ನಾಮಸ್ಮರಣೆ ಮಾಡಿ. ನಿಮ್ಮ ರಾಶಿಗೆ ಅನುಗುಣವಾಗಿ ದಾನ ಮಾಡಿ. ಈ ಸಮಯದಲ್ಲಿ ಗರ್ಭಿಣಿಯರು ವಿಶೇಷ ಕಾಳಜಿ ವಹಿಸಬೇಕು. ಮನೆಯಿಂದ ಹೊರ ಬರಬಾರದು,

▶ 8ನೇ ಪುಟಕ್ಕೆ

ಇಂದು ಸೂರ್ಯಗ್ರಹಣ
- ವೈಜ್ಞಾನಿಕ ದೃಷ್ಟಿಕೋನ
- ಆಧ್ಯಾತ್ಮಿಕ ವಿಶ್ಲೇಷಣೆ

■ ಪುಟ–4

ಮುಂದಿನ ಅಧಿವೇಶನದಲ್ಲಿ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ: ಸುಗ್ರೀವಾಜ್ಞೆ ಮಂಡನೆ

ಬೆಂಗಳೂರು, ಅ.24 (ಕೆಎಂಶಿ)– ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳಿಗೆ ಮೀಸಲಾತಿ ಹೆಚ್ಚಳಕ್ಕೆ ಅಧ್ಯಾದೇಶ ಹೊರಡಿಸಲು ರಾಜ್ಯಪಾಲರು ಅಂಕಿತ ಹಾಕಿದ್ದು, ಈ ಸುಗ್ರೀವಾಜ್ಞೆಗೆ ಮುಂದಿನ ಅಧಿವೇಶನದಲ್ಲಿ ಎರಡೂ ಸದನಗಳ ಅನುಮೋದನೆಯನ್ನು ಪಡೆಯಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವರ್ಗಗಳಿಗೆ ಕಾನೂನಿನ ರಕ್ಷಣೆಯನ್ನು ನೀಡಲಾಗುತ್ತಿದೆ. ಹಿಂದುಳಿದ ವರ್ಗಗಳ ಮೀಸಲಾತಿ ಬಗ್ಗೆ ಆಯೋಗಗಳ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು ಎಂದರು. ಯಾವುದೇ ವರ್ಗದ ಮೀಸಲಾತಿ ತೆಗೆಯುವುದಾಗಲಿ, ಸೇರ್ಪಡೆ ಮಾಡುವುದರ ಬಗ್ಗೆ ಆಗಲೀ ಪ್ರತಿಕ್ರಿಯೆ ನೀಡಲು ಸಾಧ್ಯವಿಲ್ಲ. ಏಕೆಂದರೆ ಏನೇ ಮಾಡಿದರೂ ಸಂವಿಧಾನ ಹಾಗೂ ಕಾನೂನಿನ ಚೌಕಟ್ಟಿನಲ್ಲಿಯೇ ಮಾಡಬೇಕು. ಮೀಸಲಾತಿ ಅತ್ಯಂತ ಸೂಕ್ಷ್ಮವಾದ ವಿಚಾರವಾಗಿದ್ದು, ಸರ್ಕಾರದ ಮುಖ್ಯಸ್ಥನಾಗಿ ಸಂವಿಧಾನ ಮತ್ತು ಕಾನೂನಿನ ಚೌಕಟ್ಟಿನಲ್ಲಿ ಮುಂದುವರೆಯಬೇಕು ಎಂದು ತಿಳಿಸಿದರು.

ಶಿಂಧೆ ಬಣದಲ್ಲಿ ಬಿರುಕು; ಶೀಘ್ರದಲ್ಲೇ ಬಿಜೆಪಿ ಸೇರಲಿದ್ದಾರೆ 22 ಶಾಸಕರು

ಮುಂಬಯಿ: ಏಕನಾಥ್ ಶಿಂಧೆ ನೇತೃತ್ವದ ಸೇನೆಯ 40 ಶಾಸಕರ ಪೈಕಿ 22 ಶಾಸಕರು ಶೀಘ್ರದಲ್ಲೇ ಬಿಜೆಪಿ ಸೇರಲಿದ್ದಾರೆ ಎಂದು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಬಣ ತನ್ನ ಮುಖವಾಣಿ ಸಾಮ್ನಾದಲ್ಲಿ ಹೇಳಿದೆ. ಏಕನಾಥ್ ಶಿಂಧೆ ಅವರು ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿದ್ದು ಬಿಜೆಪಿ ಮಾಡಿದ ತಾತ್ಕಾಲಿಕ ವ್ಯವಸ್ಥೆ ಎಂದು ತನ್ನ ಸಾಪ್ತಾಹಿಕ ಅಂಕಣದಲ್ಲಿ ಬರೆಯಲಾಗಿದೆ. ಅವರ ಮುಖ್ಯಮಂತ್ರಿ ಸಮವಸ್ತ್ರವನ್ನು ಯಾವಾಗ

▶ 8ನೇ ಪುಟಕ್ಕೆ

ಪ್ರಕೃತಿ ಚಿಕಿತ್ಸೆಗಾಗಿ ಬೆಂಗಳೂರಿಗೆ ಬಂದ ಇಂಗ್ಲೆಂಡ್ ರಾಣಿ ಕ್ಯಾಮಿಲ್ಲಾ



ಬೆಂಗಳೂರು: ಪ್ರಕೃತಿ ಚಿಕಿತ್ಸೆ ಪಡೆಯಲು ಇಂಗ್ಲೆಂಡ್ ರಾಣಿ ಕ್ಯಾಮಿಲ್ಲಾ ಅವರು ಬೆಂಗಳೂರಿಗೆ ಆಗಮಿಸಿದ್ದಾರೆ. ಭಾನುವಾರ ಸಂಜೆ ಅವರು ತಮ್ಮ ಸಿಬ್ಬಂದಿ ಹಾಗೂ ಭದ್ರತಾ ಅಧಿಕಾರಿಗಳ ತಂಡದೊಂದಿಗೆ ಬ್ರಿಟಿಷ್ ಏರ್‌ವೇಸ್ ವಿಮಾನದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದು ಅಲ್ಲಿಂದ ಕಾರಿನಲ್ಲಿ ವೈಟ್‌ಫೀಲ್ಡ್ ನಲ್ಲಿರುವ ಪ್ರಕೃತಿ ಚಿಕಿತ್ಸಾ ಕೇಂದ್ರಕ್ಕೆ ತಲುಪಿದ್ದಾರೆ ಇದೊಂದು ಖಾಸಗಿ ಭೇಟಿಯಾಗಿದ್ದು, ರಾಣಿಯವರು 10 ದಿನದಲ್ಲಿ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ ಮತ್ತು ಯಾರ ಭೇಟಿಗೂ ಅವಕಾಶವಿರುವುದಿಲ್ಲ ಎಂದು ತಿಳಿದು ಬಂದಿದೆ. ಪುನಃಶ್ಚೇತನ (ವೆಲ್‌ನೆಸ್) ಚಿಕಿತ್ಸೆಯನ್ನು ಪಡೆಯಲು 75 ವರ್ಷ ವಯಸ್ಸಿನ ಕ್ಯಾಮಿಲ್ಲಾ ಅವರು ಬೆಂಗಳೂರಿಗೆ ಬಂದಿದ್ದಾರೆ.

ಇನ್ಫೋಸಿಸ್ ನಾರಾಯಣಮೂರ್ತಿ–ಡಾ. ಸುಧಾಮೂರ್ತಿ ಅಳಿಯ

ರಿಷಿ ಸುನಕ್ ಬ್ರಿಟನ್ ಪ್ರಧಾನಿ



- ಕರ್ನಾಟಕದ ಹೆಮ್ಮೆಯ ಅಳಿಯನಿಗೆ ಒಲಿದ ಬ್ರಿಟನ್ ಪ್ರಧಾನಿ ಪಟ್ಟ
- ಇಂದು ಅಧಿಕಾರ ಸ್ವೀಕಾರ; ರಿಷಿ ಕೂಡ ಪಂಜಾಬ್ ಮೂಲದವರು
- 2 ಶತಮಾನ ಭಾರತ ಆಳಿದ ಬ್ರಿಟನ್‌ಗೆ ಈಗ ಭಾರತೀಯ ಆಳುವ ಭಾಗ್ಯ

ಲಂಡನ್, ಅ. 24– ಸುಮಾರು ಎರಡು ಶತಕಗಳಷ್ಟು ಕಾಲ ಭಾರತವನ್ನು ಆಳಿದ ಬ್ರಿಟನ್ ದೇಶಕ್ಕೆ ಇದೇ ಮೊದಲ ಬಾರಿಗೆ ಭಾರತೀಯ ಮೂಲದ ವ್ಯಕ್ತಿಯೊಬ್ಬರು ಪ್ರಧಾನಿಯಾಗಿದ್ದಾರೆ. ಇದೀಗ ಬ್ರಿಟನ್ ಪ್ರಧಾನಿಯಾಗಿರುವ ರಿಷಿ ಸುನಕ್ ಅವರು ಭಾರತದ ಪಂಜಾಬ್ ಮೂಲದವರು. ಮಾತ್ರವಲ್ಲದೇ, ಕರ್ನಾಟಕದ ಇನ್ಫೋಸಿಸ್ ನಾರಾಯಣಮೂರ್ತಿ ಮತ್ತು ಸುಧಾಮೂರ್ತಿ ದಂಪತಿಯ ಅಳಿಯ. ಅದೂ ಕರ್ನಾಟಕದ ಅಳಿಯ.


42 ವರ್ಷದ ರಿಷಿ ಸುನಕ್ ಅವರು ನೂತನ ಪ್ರಧಾನಿಯಾಗಿ ಆಯ್ಕೆಯಾಗಿರುವುದನ್ನು ಇಂದು ಸಂಜೆ 6.30ರ ಸುಮಾರಿಗೆ ಅಧಿಕೃತವಾಗಿ ಘೋಷಣೆ ಮಾಡಲಾಯಿತು. ಅವರು ಅ.25ರಂದು ಬ್ರಿಟನ್ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ರಿಷಿ ಸುನಕ್ ಅವರಿಗೆ 193 ಸಂಸದರು ಬೆಂಬಲ ನೀಡಿದ್ದು, ಅವರ ಪ್ರತಿಸ್ಪರ್ಧಿಯಾಗಿದ್ದ ಸಂಸದೆ ಪೆನ್ನಿ ಮೋರ್ಡಾಂಟ್ ಅವರಿಗೆ ಕೇವಲ 26 ಸಂಸದರ ಬೆಂಬಲ ಮಾತ್ರ ದೊರೆತ ಕಾರಣದಿಂದ ಮೊರ್ಡಾಂಟ್ ಸ್ಪರ್ಧೆಯಿಂದ ಹಿಂದೆ ಸರಿದರು. ಬ್ರಿಟನ್‌ನ ಪ್ರಧಾನಿಯಾಗಿದ್ದ ಲಿಜ್ ಟ್ರಸ್ ಅವರು ಕೇವಲ 45 ದಿನದಲ್ಲೇ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅವರ ಸ್ಥಾನಕ್ಕೆ ಚುನಾವಣೆ ನಡೆಯಿತು. ಲಿಜ್ ಟ್ರಸ್ ಆಯ್ಕೆಯಾಗಿದ್ದ ವೇಳೆ ಪರಾಭವಗೊಂಡಿದ್ದ ರಿಷಿ ಸುನಕ್ ಈ ಬಾರಿ ಪ್ರಧಾನಿಯಾಗುವಲ್ಲಿ ಯಶಸ್ವಿಯಾಗಿದ್ದಾರೆ. ರಿಷಿ ಸುನಿಕ್ ನಾಳೆ (ಮಂಗಳವಾರ) ಬೆಳಗ್ಗೆ ದೊರೆ 3ನೇ ಚಾರ್ಲ್ಸ್ ಭೇಟಿಯಾದ ನಂತರ ಅಧಿಕಾರ ವಹಿಸಿಕೊಂಡು, ದೇಶವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಭಾರತ ಮೂಲ: ಬ್ರಿಟನ್‌ನ ನೂತನ ಪ್ರಧಾನಿ ರಿಷಿ ಸುನಕ್ ಭಾರತ ಮೂಲದವರು. ಅವರ ತಂದೆ ಯಶವೀರ್ ಸುನಕ್ ಅವರ ಪೂರ್ವಜರು ಪಂಜಾಬ್ ಮೂಲದವರು. ನಂತರ ಅವರು ಆಫ್ರಿಕಾದಿಂದ ಬ್ರಿಟನ್‌ಗೆ ತೆರಳಿ ನೆಲೆಸಿದ್ದಾರೆ. ರಿಷಿ ಸುನಕ್ 1980ರ ಮೇ 12 ರಂದು ಇಂಗ್ಲೆಂಡ್‌ನ ಸೌತಾಂಪ್ಟನ್‌ನಲ್ಲಿ ಜನಿಸಿದರು. ವಿಂಚೆಸ್ಟರ್ ಕಾಲೇಜ್‌ನಲ್ಲಿ ಶಿಕ್ಷಣ ಪಡೆದ ಅವರು, ಲಿಂಕನ್ ಕಾಲೇಜ್ ಮತ್ತು ಆಕ್ಸ್‌ಫರ್ಡ್ ಕಾಲೇಜ್‌ನಲ್ಲಿ ಬಿಎ ಪದವಿ, ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದಲ್ಲಿ ಎಂಬಿಎ ಪದವಿ ಪಡೆದರು. ಸ್ಟ್ಯಾನ್‌ಫೋರ್ಡ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವೇಳೆ ಇನ್‌ಫೋಸಿಸ್ ನಾರಾಯಣಮೂರ್ತಿ ಮತ್ತು ಸುಧಾ ದಂಪತಿ ಪುತ್ರಿ ಅಕ್ಷತಾ ಅವರನ್ನು ಪ್ರೀತಿಸಿ, 2009ರಲ್ಲಿ ವಿವಾಹವಾದರು.

2015ರ ಸಾರ್ವತ್ರಿಕ ಚುನಾವಣೆಯಲ್ಲಿ ರಿಚ್‌ಮಂಡ್ ಕ್ಷೇತ್ರದಿಂದ ಸಂಸದರಾಗಿ ಮೊದಲ ಬಾರಿಗೆ ಆಯ್ಕೆಯಾದ ಅವರು, 2017

▶ 8ನೇ ಪುಟಕ್ಕೆ

ಪ್ರಧಾನಿ ಮೋದಿ ಅಭಿನಂದನೆ



ನವದೆಹಲಿ, ಅ. 24– ಬ್ರಿಟನ್‌ನ ನೂತನ ಪ್ರಧಾನಿ ರಿಷಿ ಸುನಕ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮೂಲಕ ಅಭಿನಂದನೆ ಸಲ್ಲಿಸಿದ್ದಾರೆ. "ನಿಮಗೆ ಹೃತ್ಪೂರ್ವಕ ಶುಭಾಶಯಗಳು. ಬ್ರಿಟನ್ ಪ್ರಧಾನಮಂತ್ರಿಯಾಗಿ, ಜಾಗತಿಕ ವಿಚಾರಗಳ ಸಂಬಂಧ ಒಟ್ಟಿಗೆ ಕೆಲಸ ಮಾಡಲು ಕಾತುರನಾಗಿದ್ದೇನೆ ಮತ್ತು 2030ರ ಮಾರ್ಗಸೂಚಿ ಜಾರಿಗೆ ತವಕಿಸುತ್ತಿದ್ದೇನೆ.

ಮತ್ತೊಮ್ಮೆ ಬ್ರಿಟನ್ ಭಾರತೀಯರ ಜೀವಂತ ಸೇತುವೆಯಾಗಿರುವ ನಿಮಗೆ ದೀಪಾವಳಿ ವಿಶೇಷ ಶುಭಾಶಯಗಳು. ಆಧುನಿಕ ಸಹಭಾಗಿತ್ವದ ಮೂಲಕ ಐತಿಹಾಸಿಕ ಬಾಂಧವ್ಯಕ್ಕೆ ನಾವು ನವಚೈತನ್ಯ ತುಂಬೋಣ" ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

ಸುನಕ್‌ಗೆ ಮಾಜಿ ಸಿಎಂ ಕುಮಾರಸ್ವಾಮಿ ಅಭಿನಂದನೆ: ವಂದನೆ ಸಲ್ಲಿಸಿದ ರಿಷಿ



ಬೆಂಗಳೂರು, ಅ. 24–ಬ್ರಿಟನ್‌ನ ನೂತನ ಪ್ರಧಾನಿಯಾಗಿ ಆಯ್ಕೆಯಾಗಿರುವ ರಿಷಿ ಸುನಕ್ ಅವರನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಟ್ವೀಟ್ ಮೂಲಕ ಅಭಿನಂದಿಸಿದ್ದು, ಅವರಿಗೆ ಕೃತಜ್ಞತೆ ಸಲ್ಲಿಸಿ, ಸುನಕ್ ರೀ–ಟ್ವೀಟ್ ಮಾಡಿದ್ದಾರೆ. "ಬ್ರಿಟನ್ ದೇಶದ ಪ್ರಧಾನಿಯಾಗಿ ಆಯ್ಕೆಯಾಗಿರುವ, ಕನ್ನಡ ನೆಲದ ನಂಟು ಹೊಂದಿರುವ, ಕನ್ಸರ್ವೇಟಿವ್ ಪಕ್ಷದ ನಾಯಕರಾದ ಶ್ರೀ ರಿಷಿ ಸುನಕ್ ಅವರಿಗೆ ಹೃದಯಪೂರ್ವಕ

▶ 8ನೇ ಪುಟಕ್ಕೆ

ದೀಪಾವಳಿ ನಂತರ ಮುಖ್ಯಮಂತ್ರಿ ಬೊಮ್ಮಾಯಿಗೆ ದೆಹಲಿ ಬುಲಾವ್

- ಗೃಹ ಸಚಿವ ಅಮಿತ್ ಷಾ ಸೂಚನೆ
- ಸರ್ಕಾರದಲ್ಲಿ ಕೆಲ ಬದಲಾವಣೆ ಇಲ್ಲವೇ ವಿಧಾನಸಭೆ ಚುನಾವಣೆ ಸಂಬಂಧ ಚರ್ಚೆ



ಬೆಂಗಳೂರು, ಅ.24(ಕೆಎಂಶಿ)– ದೀಪಾವಳಿ ಹಬ್ಬ ಕಳೆದ ನಂತರ ದೆಹಲಿಗೆ ಬರುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಬುಲಾವ್ ಮಾಡಿದ್ದಾರೆ.

ಸರ್ಕಾರದಲ್ಲಿ ಕೆಲ ಬದಲಾವಣೆ ಇಲ್ಲವೇ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ಕಾರ್ಯತಂತ್ರ ರೂಪಿಸುವುದೋ ತಿಳಿಯದು.

ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನು ಐದು ಆರು ತಿಂಗಳು ಮಾತ್ರ ಬಾಕಿ ಉಳಿದಿದೆ. ಇಂತಹ ಸನ್ನಿವೇಶದಲ್ಲಿ ಪ್ರತಿಪಕ್ಷ ಕಾಂಗ್ರೆಸ್, ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಗಳ ಸುರಿಮಳೆಗೈಯ್ಯುತ್ತಿದೆ.

ಇದಕ್ಕೆ ಸರ್ಕಾರದ ಯಾವುದೇ ಪ್ರತಿನಿಧಿಗಳಿಂದ ಸಮರ್ಪಕ ಎದಿರೇಟು ಸಾಧ್ಯವಾಗಿಲ್ಲ. ಭ್ರಷ್ಟಾಚಾರದ ಆರೋಪಗಳು ಇಡೀ ರಾಷ್ಟ್ರ ವ್ಯಾಪ್ತಿ ಚರ್ಚೆಗೆ ಗ್ರಾಸವಾಗಿದೆ. ಇದು ವರಿಷ್ಠರಿಗೆ ನುಂಗಲಾರದ ತುತ್ತಾಗಿದೆ. ಇದಲ್ಲದೆ ಕಾಂಗ್ರೆಸ್‌ನ ಪೇಸಿಎಂ ಅಭಿಯಾನ ಕೇಂದ್ರ ಸರ್ಕಾರಕ್ಕೂ ಇರಿಸುಮುರಿಸು ಉಂಟು ಮಾಡಿದೆ.

▶ 8ನೇ ಪುಟಕ್ಕೆ

ನಮ್ಮ ಸರ್ಕಾರ ಯಾವಾಗಲೂ ಯುದ್ಧವನ್ನು ಕೊನೆಯ ಆಯ್ಕೆ ಎಂದು ಪರಿಗಣಿಸುತ್ತದೆ



ಕಾರ್ಗಿಲ್: ಭಾರತ ಯಾವಾಗಲೂ ಯುದ್ಧವನ್ನು ಕೊನೆಯ ಆಯ್ಕೆ ಎಂದು ಪರಿಗಣಿಸುತ್ತದೆ, ಆದರೆ ರಾಷ್ಟ್ರದ ಮೇಲೆ

ಕಾರ್ಗಿಲ್‌ನಲ್ಲಿ ದೀಪಾವಳಿ ಆಚರಿಸಿದ ಪ್ರಧಾನಿ ಮೋದಿ


ಯಾರೇ ಕೆಟ್ಟ ದೃಷ್ಟಿ ಬೀರಿದರೂ ಅದಕ್ಕೆ ತಕ್ಕ ಪ್ರತ್ಯುತ್ತರ ನೀಡುವ ಶಕ್ತಿ ಮತ್ತು ತಂತ್ರಗಳನ್ನು ನಮ್ಮ ಸಶಸ್ತ್ರ ಪಡೆ ಹೊಂದಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸೋಮವಾರ ಹೇಳಿದ್ದಾರೆ.

ದೀಪಾವಳಿ ಹಿನ್ನೆಲೆಯಲ್ಲಿ ಲಡಾಖ್‌ನ ಕಾರ್ಗಿಲ್‌ಗೆ ಭೇಟಿ ನೀಡಿರುವ ಪ್ರಧಾನಿ ಮೋದಿ, ಯೋಧರಿಗೆ ಸಿಹಿ ಹಂಚಿ ಮಾತನಾಡಿದರು. ನಿಮ್ಮೊಂದಿಗೆ ಇರದೇ ನಾನು ಉತ್ತಮ ದೀಪಾವಳಿಯನ್ನು ಆಚರಿಸಲು ಸಾಧ್ಯವಿಲ್ಲ. ನನ್ನ ಪಾಲಿಗೆ ನೀವೆಲ್ಲರೂ ನನ್ನ ಕುಟುಂಬವಾಗಿದ್ದೀರಿ. ನಿಮ್ಮೆಲ್ಲರ ನಡುವೆ ದೀಪಾವಳಿಯನ್ನು ಆಚರಿಸುವುದು ಒಂದು ಭಾಗ್ಯವೇ ಸರಿ. ಕಾರ್ಗಿಲ್‌ನ ಈ ವಿಜಯದ ಭೂಮಿಯಲ್ಲಿ ನಿಂತು ದೇಶದ ಹಾಗೂ ವಿಶ್ವದ ಜನರಿಗೆ ದೀಪಾವಳಿ ಶುಭ ಕೋರುತ್ತೇನೆ. ಕಾರ್ಗಿಲ್‌ನಲ್ಲಿ ನಮ್ಮ ಸೇನೆಯು ಭಯೋತ್ಪಾದನೆಯ ಚಿಲುಮೆಯನ್ನು ಹತ್ತಿಕ್ಕಿದೆ. ಇಲ್ಲಿಯವರೆಗೆ, ದೇಶವು ಆಚರಿಸಿದ ವಿಜಯದ ದೀಪಾವಳಿಯನ್ನು ನೆನಪಿಸಿಕೊಳ್ಳಿ. ಏಕೆಂದರೆ, ನಮ್ಮ ಸೇನಾ ಪಡೆಗಳು ಗಡಿಯಲ್ಲಿ ನಿಂತು ನಮ್ಮನ್ನು ರಕ್ಷಣೆ ಮಾಡುತ್ತಿವೆ. ದೇಶದ ಪ್ರತಿ ನಾಗರಿಕನು ನೆಮ್ಮದಿಯಿಂದ ಮಲಗಲು ನಮ್ಮ ಯೋಧರು ಕಾರಣ. ನಿಮ್ಮ ತ್ಯಾಗ ಯಾವಾಗಲೂ ನಮ್ಮ ದೇಶವನ್ನು ಹೆಮ್ಮೆ ಪಡುವಂತೆ ಮಾಡಿದೆ ಎಂದು ಹೇಳಿದರು. ಉಕ್ರೇನ್ ಮತ್ತು ರಷ್ಯಾ ಯುದ್ಧದ ಸಂದರ್ಭದಲ್ಲಿ ನಮ್ಮ ರಾಷ್ಟ್ರ ಧ್ವಜ ನಮ್ಮ ನಾಗರಿಕರಿಗೆ

▶ 8ನೇ ಪುಟಕ್ಕೆ

ಕೊನೆಗೂ ಎಚ್ಚೆತ್ತು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಮುಂದಾದ ಅಧಿಕಾರಿ ವರ್ಗ

ಮೈಸೂರಿನ 131 ಪಾರಂಪರಿಕ ಕಟ್ಟಡಗಳ ಸಮೀಕ್ಷೆ ಆರಂಭ



2012ರ ಆಗಸ್ಟ್ ಮಾಹೆಯಲ್ಲಿ ಕುಸಿದಿದ್ದ ಮೈಸೂರಿನ ಹೃದಯ ಭಾಗದ ಲ್ಯಾನ್ಸ್‌ಡೌನ್ ಕಟ್ಟಡ ನಿರ್ಲಕ್ಷ್ಯಕ್ಕೊಳಗಾಗಿದೆ.

ಮೈಸೂರು, ಅ.24(ಆರ್‌ಕೆ)–ಮೈಸೂರಿನಲ್ಲಿ ಅಧಿಕೃತವಾಗಿ ಗುರ್ತಿಸಿರುವ 131 ಪಾರಂಪರಿಕ ಕಟ್ಟಡಗಳ ಹಾಲಿ ಸ್ಥಿತಿಗತಿ ಅರಿಯಲು ಪಾರಂಪರಿಕ ಇಲಾಖೆ ಸಮೀಕ್ಷೆ ಆರಂಭಿಸಿದೆ.

ಕಳೆದ ಒಂದು ವಾರದಿಂದ ಸುರಿದ ಭಾರೀ ಮಳೆಗೆ ಜೆಎಲ್‌ಬಿ ರಸ್ತೆಯ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ರಸಾಯನ ಶಾಸ್ತ್ರ ಲ್ಯಾಬ್ ವಿಭಾಗ ಕುಸಿದು ಬಿದ್ದಿರುವ ಹಿನ್ನೆಲೆಯಲ್ಲಿ ಎಚ್ಚೆತ್ತ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಅಧಿಕಾರಿಗಳು ಈಗಾಗಲೇ ಗುರುತಿಸಲಾಗಿರುವ ಪಾರಂಪರಿಕ ಕಟ್ಟಡಗಳ ಹಾಲಿ ಸ್ಥಿತಿಗತಿ ಪರಿಶೀಲಿಸಿ, ಸಂರಕ್ಷಿಸಲು ಮುಂದಾಗಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ 131 ಅಧಿಕೃತ ಕಟ್ಟಡ, ಸ್ಮಾರಕಗಳ ಖುದ್ದು ಪರಿಶೀಲಿಸಿ ಮಾಹಿತಿ ಸಂಗ್ರಹಿಸುತ್ತಿರುವ ಪುರಾತತ್ವ ಮತ್ತು ಪಾರಂಪರಿಕ ತಜ್ಞರು, ಅವುಗಳ ಸ್ಥಿತಿಗತಿ ಬಗ್ಗೆ ಮಾಹಿತಿ ಸಂಗ್ರಹಿಸುವರು. ಮೈಸೂರು ಜಿಲ್ಲಾ ಪಾರಂಪರಿಕ ಸಮಿತಿ ಹಾಗೂ ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ (ಐಎನ್‌ಎಸಿಹೆಚ್) ಸಹಯೋಗದಲ್ಲಿ ಸಮೀಕ್ಷೆ ನಡೆಯುತ್ತಿದೆ. ಜಿಲ್ಲೆಯಲ್ಲಿ ಒಟ್ಟು 500 ಪಾರಂಪರಿಕ ನಿರ್ಮಾಣಗಳಿವೆ ಎಂದು ಹೇಳಲಾಗಿದ್ದು, ಸರಿಯಾಗಿ ನಿರ್ವಹಣೆ ಇಲ್ಲದೆ ಶಿಥಿಲಾವಸ್ಥೆಯಲ್ಲಿರುವ ಹಳೇ ಕಟ್ಟಡಗಳು ಒಂದೊಂದಾಗಿ ಕುಸಿದು ಬೀಳುತ್ತಿವೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಆಯುಕ್ತ ದೇವರಾಜು, ಮೈಸೂರಿನಲ್ಲಿ 131 ಪಾರಂಪರಿಕ ಕಟ್ಟಡಗಳು ಪಾರಂಪರಿಕ ಕಟ್ಟಡಗಳ ಪಟ್ಟಿಯಲ್ಲಿವೆ. ಭಾರೀ ಮಳೆ ಬಿದ್ದಲ್ಲಿ ಕುಸಿದು ಜೀವ ಹಾನಿಯಾಗುವುದನ್ನು ತಡೆಯುವ ಸಲುವಾಗಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ವರ್ಗವಾರು ಬೇರ್ಪಡಿಸಿ ಪಟ್ಟಿ ಮಾಡುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದರು. ಶಿಥಿಲಾವಸ್ಥೆಯಲ್ಲಿರುವ, ಅಪಾಯ ಸಂಭವಿಸುವಂತಿರುವ ಹಾಗೂ ಸದೃಢವಾಗಿರುವ ಪಾರಂಪರಿಕ ಕಟ್ಟಡಗಳನ್ನು ಗ್ರೇಡ್‌ವಾರು ವಿಂಗಡಿಸಿ ತುರ್ತಾಗಿ ದುರಸ್ತಿ ಇಲ್ಲವೆ ಪುನರ್ ನಿರ್ಮಾಣ ಮಾಡಬೇಕಾಗಿರುವ ಕಟ್ಟಡಗಳು ಹಾಗೂ ಸುಸ್ಥಿತಿಯಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ಗ್ರೇಡ್‌ವಾರು ವಿಂಗಡಿಸಲಾಗುತ್ತದೆ ಎಂದು ತಿಳಿಸಿದರು. ಪಾರಂಪರಿಕ ಕಟ್ಟಡಗಳನ್ನು ದುರಸ್ತಿ ಮಾಡಿ ಸಂರಕ್ಷಿಸುವುದು ದುಬಾರಿ ವೆಚ್ಚದ ಕೆಲಸ. ಅನುದಾನ,

▶ 8ನೇ ಪುಟಕ್ಕೆ

ಶೀಘ್ರ ತಜ್ಞರೊಂದಿಗೆ ಚರ್ಚಿಸಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ

ಮೈಸೂರು,ಅ.24(ಆರ್‌ಕೆ)–ಶೀಘ್ರದಲ್ಲೇ ಇಂಡಿಯನ್ ಹೆರಿಟೇಜ್ ಸಿಟೀಸ್ ನೆಟ್‌ವರ್ಕ್ ಫೌಂಡೇಷನ್ (ಐಹೆಚ್‌ಸಿಎನ್‌ಎಫ್) ಮುಖ್ಯಸ್ಥ ಕೆ.ಎಸ್. ರಾಯ್ಕರ್ ಸೇರಿದಂತೆ ತಜ್ಞರೊಂದಿಗೆ ಚರ್ಚಿಸಿ ಮೈಸೂರಿನ ಪಾರಂಪರಿಕ ಕಟ್ಟಡ, ಸ್ಮಾರಕಗಳನ್ನು ಸಂರಕ್ಷಿಸುವುದಾಗಿ ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಶಿಥಿಲಾವಸ್ಥೆಯಲ್ಲಿರುವ ಹಳೇ ಪಾರಂಪರಿಕ ಕಟ್ಟಡಗಳು ಒಂದೊಂದಾಗಿ ಕುಸಿಯುತ್ತಿರುವುದರಿಂದ ಪಾರಂಪರಿಕ ನಗರ ಎಂದು ಖ್ಯಾತಿಯಾಗಿರುವ ಮೈಸೂರಲ್ಲಿ ಪಾರಂಪರಿಕ ನಿರ್ಮಾಣಗಳು ಕಣ್ಮರೆಯಾಗುವ ಆತಂಕ ಎದುರಾಗಿದೆ ಎಂದ ಅವರು, ಈ ವಾರವೇ ಕೆ.ಎಸ್.ರಾಯ್ಕರ್ ಅವರೊಂದಿಗೆ ಸಭೆ ನಡೆಸಿ, ಪುರಾತತ್ವ ಮತ್ತು ಪಾರಂಪರಿಕ



ತಜ್ಞರ ಸಲಹೆ, ಮಾರ್ಗದರ್ಶನ ಪಡೆದು ಅವುಗಳನ್ನು ಸಂರಕ್ಷಿಸುವ ಕಾರ್ಯ ಆರಂಭಿಸುತ್ತೇವೆ ಎಂದರು. ಪಾರಂಪರಿಕ ಇಲಾಖೆ, ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಹಾಗೂ ಅಧಿಕಾರಿಗಳು ನೀಡುವ ಸಲಹೆ, ಮಾರ್ಗದರ್ಶನದಂತೆ ಮುಖ್ಯಮಂತ್ರಿಗಳ ಬಳಿಗೆ ನಿಯೋಗ ಕರೆದೊಯ್ದು ವಸ್ತುಸ್ಥಿತಿ ವಿವರಿಸಿ ಮೈಸೂರಿನ ಹೆರಿಟೇಜ್ ಪಟ್ಟಿಯಲ್ಲಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ, ಪುನರ್ ನಿರ್ಮಾಣ ಕಾಮಗಾರಿಗೆ ಅನುಮೋದನೆ ಮತ್ತು ಅನುದಾನ ಪಡೆದುಕೊಂಡು ಯೋಜನೆಗೆ ಚಾಲನೆ ನೀಡಲು ಪ್ರಯತ್ನಿಸುತ್ತೇನೆ ಎಂದು ಶಿವಕುಮಾರ್ ತಿಳಿಸಿದರು. ಈಗಾಗಲೇ ಕುಸಿದಿರುವ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಅಗ್ನಿಶಾಮಕ ಠಾಣೆ, ಮಹಾರಾಣಿ ಸರ್ಕಾರಿ ವಿಜ್ಞಾನ ಕಾಲೇಜು ಸೇರಿದಂತೆ ಶಿಥಿಲಾವಸ್ಥೆಯಲ್ಲಿರುವ ಹಳೆಯ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಬೇಕಾಗಿದ್ದು, ಆದ್ಯತೆ ಮೇಲೆ ಇದೇ ವಾರ ಸಭೆ ನಡೆಸಿ ಸೂಕ್ತ ನಿರ್ಣಯ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಬಗ್ಗೆ ಅಪಾರ ಜ್ಞಾನ ಹೊಂದಿರುವ ಮೈಸೂರು ಮಹಾನಗರ ಪಾಲಿಕೆ ಮಾಜಿ ಆಯುಕ್ತ ಕೆ.ಎಸ್.ರಾಯ್ಕರ್ ಅವರನ್ನು ಸಭೆಗೆ ಆಹ್ವಾನಿಸಿದ್ದೇನೆ. ಬಂದು ಅಗತ್ಯ ಸಲಹೆ ನೀಡುವುದಾಗಿ ಒಪ್ಪಿದ್ದಾರೆ. ಈ ಬಗ್ಗೆ ಚರ್ಚಿಸಿ ಮುಂದಿನ ಕ್ರಮ ವಹಿಸುವುದಾಗಿ ಮೇಯರ್ ಶಿವಕುಮಾರ್ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಆತ : ಮನೇಲಿ ತುಂಬಾ ಕೆಲ್ಸ ಇದೆ ಬರ್ತೀನಿ ಕಣಯ್ಯಾ
ಈತ : ಏನಿದೆ ಅಂತಹ ಕೆಲಸ?
ಆತ : ಮನೆಗೆ ಹೋದ್ಮೇಲೆ ನನ್ನ ಹೆಂಡ್ತಿ ಹೇಳ್ತಾಳೆ!

ಮೈಸೂರು ಮಿತ್ರ

ಮಂಗಳವಾರ, 25 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........


ಚಿನ್ನದ ಪ್ರತಿ ಎಳೆಯೂ ಯಾವ ರೀತಿ ಅಮೂಲ್ಯವೋ
ಹಾಗೆಯೇ ಕಾಲದ ಪ್ರತಿಯೊಂದು ಕ್ಷಣವೂ ಅಮೂಲ್ಯ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅತ್ತೂ ಕರೆದು ಔತಣಕ್ಕೆ ಹೋದ ಹಾಗೆ

ನಿಮ್ಮ ಪತ್ರಗಳು

ಮಣ್ಣಿನ ದೀಪಗಳನ್ನು ಹಚ್ಚಿ ಪ್ರೋತ್ಸಾಹಿಸಿ

ಮಾನ್ಯರೆ,



ದೀಪಾವಳಿ ಬಂತೆಂದರೆ ಸಾಕು ಅನೇಕ ಜನರ ಮನೆಯ ಮುಂದೆ ಮಣ್ಣಿನ ಹಣತೆಗಳು ಆಕಾಶದಲ್ಲಿ ನಕ್ಷತ್ರಗಳು ಹೊಳೆಯುವ ಹಾಗೆ, ಮಿಂಚುವ ಹಾಗೆ ಪ್ರಕಾಶಿಸುತ್ತವೆ. ಮಣ್ಣಿನ ದೀಪಗಳನ್ನು ಇನ್ನೂ ಹಲವಾರು ಶುಭ ಹಾಗೂ ಧಾರ್ಮಿಕ ಸಮಾರಂಭಗಳಲ್ಲಿ ಬಳಸಲಾಗುತ್ತದೆ. ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪ್ರತಿ ವರ್ಷ ನಡೆಯುವ ಲಕ್ಷ ದೀಪೋತ್ಸವ ಜಗತ್ಪ್ರಸಿದ್ಧವಾಗಿದೆ. ಕೆಲವರು ಸತ್ತ ಮನೆಗಳಲ್ಲಿ 10 ದಿನಗಳವರೆಗೆ ದೀಪ ಹಚ್ಚುವ ಮೂಲಕ ಸತ್ತ ವ್ಯಕ್ತಿಯ ಆತ್ಮಕ್ಕೆ ಶಾಂತಿ ಕೋರುವುದುಂಟು. ಈ ರೀತಿ ದೀಪಗಳಿಗೆ ತಮ್ಮದೇ ಆದ ಮಹತ್ವವಿದೆ. ವಿಶ್ವೇಶ್ವರಯ್ಯ ನಂತಹ ಮಹಾನ್ ವ್ಯಕ್ತಿಗಳು, ವಿದ್ಯುಚ್ಛಕ್ತಿ ಇಲ್ಲದ ದಿನಗಳಲ್ಲಿ ದೀಪದ ಕೆಳಗೆ ಓದಿ ಇಡೀ ವಿಶ್ವವೇ ಬೆರಗಾಗುವಂತಹ ಸಾಧನೆಗಳನ್ನು ಮಾಡಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ರಾಸಾಯನಿಕ ವಸ್ತುಗಳನ್ನು ಬಳಸಿ, ಯಂತ್ರದಿಂದ ತಯಾರಾಗುವ ದೀಪಗಳಿಗೆ ಹೆಚ್ಚಿನ ಬೇಡಿಕೆ ಇರುವುದು ಕಂಡು ಬಂದಿದೆ. ಇದೇ ವೇಳೆ ಮಣ್ಣಿನ ದೀಪ ಮಾಡುತ್ತಿದ್ದ ಕುಂಬಾರರ ಕುಲ ಕಸುಬಿಗೆ ಹೊರ ರಾಜ್ಯಗಳ ಮೌಲ್ಡ್ ದೀಪಗಳ ಪೈಪೋಟಿ ಭಾರೀ ಹೊಡೆತ ನೀಡಿದೆ ಎಂದು ಹೇಳಲಾಗುತ್ತಿದೆ.

ಕಳೆದ ಎರಡು–ಮೂರು ವರ್ಷಗಳ ಕಾಲದಿಂದ ಕೊರೊನಾ ಸೋಂಕಿನ ದೆಸೆಯಿಂದಾಗಿ ಹಲವಾರು ದೇಸಿ ಉದ್ಯಮಗಳಿಗೆ ಪೆಟ್ಟು ಬಿದ್ದಿದೆ. ಅವುಗಳ ಪೈಕಿ ಮಣ್ಣಿನ ದೀಪಗಳನ್ನು ತಮ್ಮ ಅದ್ಭುತವಾದ ಕೈಚಳಕದಿಂದ ತಯಾರಿಸುವ ಕುಂಬಾರಿಕೆ ಕಸುಬು ಒಂದಾಗಿದೆ ಹಿಂದಿನ ವರ್ಷಗಳ ದೀಪಾವಳಿ ಸಂದರ್ಭಗಳಲ್ಲಿ, 4–5 ಲಕ್ಷ ಮಣ್ಣಿನ ಹಣತೆಗಳಿಗೆ ಬೇಡಿಕೆ ಇದ್ದರೆ, ಅದು ಈಗ ಕೇವಲ 40–50 ಸಾವಿರ ಹಣತೆಗಳಿಗೆ ಇಳಿದಿದೆ ಎಂಬುದು ಈ ಉದ್ಯಮದಲ್ಲಿ ತೊಡಗಿಸಿಕೊಂಡವರ ಅಳಲು. ಕುಂಬಾರಿಕೆ ಕುಲ ಕಸುಬನ್ನು ಉಳಿಸಿ ಬೆಳೆಸಲು ಸಂಘಗಳು ಸ್ಥಾಪಿತವಾಗಿರುವುದು ಮೆಚ್ಚುಗೆಯ ಸಂಗತಿ. ಈ ಕುಲ ಕಸುಬಿನ ಮೇಲೆಯೇ ನೂರಾರು ಕುಟುಂಬಗಳು ಅವಲಂಬಿತವಾಗಿದೆ. ಆದ್ದರಿಂದ ಇಂತಹ ಸಾಂಪ್ರದಾಯಿಕ ಶೈಲಿಯ ಕುಲಕಸುಬನ್ನು ಪ್ರೋತ್ಸಾಹಿಸಲು ಪ್ರತಿಯೊಬ್ಬರು ಮಣ್ಣಿನ ದೀಪಗಳನ್ನೇ ಹಚ್ಚಬೇಕು. ಇದು ಅವರ ಮನೆಗಳನ್ನು ಮಾತ್ರವಲ್ಲದೇ ಈ ಕುಲಕಸುಬನ್ನೇ ನೆಚ್ಚಿಕೊಂಡಿರುವ ನೂರಾರು ಕುಟುಂಬಗಳ ಮನೆಗಳನ್ನೇ ಬೆಳಗುತ್ತದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಪಾರಂಪರಿಕ ಕಟ್ಟಡಗಳನ್ನು ಉಳಿಸಿ

ಮಾನ್ಯರೆ,

ಮೈಸೂರು ಎಂದ ತಕ್ಷಣ ಹಲವು ಸಂಸ್ಕೃತಿ ಮತ್ತು ಪರಂಪರೆಗೆ ಹೆಸರುವಾಸಿ. ನೂರಾರು ವರ್ಷಗಳ ಇತಿಹಾಸವುಳ್ಳ ಅನೇಕ ಭವ್ಯ ಬಂಗಲೆಗಳೇ ಮೈಸೂರಿನ ಪ್ರಮುಖ ಆಕರ್ಷಣೆಯಾಗಿವೆ. ಆದರೆ ಕಾಲ ಉರುಳುತ್ತಿದ್ದಂತೆ ಪಾರಂಪರಿಕ ಕಟ್ಟಡಗಳು ಮಳೆ ಹಾನಿಗೆ ಬಲಿಯಾಗುತ್ತಿರುವುದು ಬೇಸರದ ವಿಷಯ. 2014ರಲ್ಲಿ ಲ್ಯಾನ್ಸ್‌ಡೌನ್ ಬಿಲ್ಡಿಂಗ್, 2016 ದೇವರಾಜ ಮಾರುಕಟ್ಟೆ, 2019 ಸರಸ್ವತಿಪುರಂನ ಅಗ್ನಿಶಾಮಕ ದಳದ ಕಚೇರಿ, 2022 ರಲ್ಲಿ ಮಹಾರಾಣಿ ವಿಜ್ಞಾನ ಕಾಲೇಜು ಮತ್ತು ಅರಮನೆಯ ಕೋಟೆ ಗೋಡೆ ಹೀಗೆ ಹಲವಾರು ಇತಿಹಾಸವುಳ್ಳ ಭವ್ಯ ಕಟ್ಟಡಗಳು ನೆಲಸಮವಾಗಿವೆ. ಸರಿಯಾದ ನಿರ್ವಹಣೆ ಇಲ್ಲದೆ ಪಾರಂಪರಿಕ ಕಟ್ಟಡಗಳನ್ನು ವರುಷದಿಂದ ವರುಷಕ್ಕೆ ಮೈಸೂರು ಕಳೆದುಕೊಳ್ಳುತ್ತಾ ಬಂದಿದೆ. ದಯವಾಡಿ ಮಹಾನಗರ ಪಾಲಿಕೆ ಮತ್ತು ಸರ್ಕಾರ ಮೈಸೂರಿನ ಇತಿಹಾಸ ಉಳ್ಳ ಕಟ್ಟಡಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿ ಭವ್ಯ ಪರಂಪರೆಯನ್ನು ಉಳಿಸಿಕೊಳ್ಳಬೇಕಾಗಿ ಮನವಿ.

– ಆದರ್ಶ ಎಚ್ ಆರ್, ಪ್ರಥಮ ವರ್ಷದ ವಿದ್ಯಾರ್ಥಿ, ಮಾನಸ ಗಂಗೋತ್ರಿ ಮೈಸೂರು

ರಾಜ್ಯೋತ್ಸವ ಪ್ರಶಸ್ತಿ ಅರ್ಹರಿಗಿರಲಿ!

ಮಾನ್ಯರೆ,

ರಾಜ್ಯ ಸರ್ಕಾರ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಪ್ರತಿವರ್ಷ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ರಾಜ್ಯ ಸರ್ಕಾರವು ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ನೀಡುವ ಬಹುದೊಡ್ಡ ಪ್ರಶಸ್ತಿಯಾದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಅತ್ಯಂತ ಮಹತ್ವದ್ದಾಗಿದೆ. ಈ ಪ್ರಶಸ್ತಿ ಪುರಸ್ಕಾರಗಳು ಸಾಧಕರಿಗೆ, ಕಲಾವಿದರಿಗೆ, ಸಾಹಿತಿಗಳಿಗೆ, ಸಮಾಜ ಸೇವಕರಿಗೆ ಹಾಗೂ ಇನ್ನಿತರ ಕ್ಷೇತ್ರದ ಸಾಧಕರಿಗೆ ಮತ್ತಷ್ಟು ಕಾರ್ಯ ಸಾಧನೆ ಮಾಡಲು ಹುರುಪು, ಸ್ಫೂರ್ತಿ ನೀಡುತ್ತವೆ. ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗೆ ನಾಡಿನ ವಿವಿಧ ಕಡೆಗಳಿಂದ ಸಾವಿರ ಸಾವಿರಗಟ್ಟಲೇ ಅರ್ಜಿಗಳು ಬಂದಿರುವುದು ಕೂಡ ವಿಶೇಷ ಸಂಗತಿಯಾಗಿದೆ.

ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಕನ್ನಡ ನಾಡುನುಡಿಗಾಗಿ ಸೇವೆ ಸಲ್ಲಿಸುತ್ತಿರುವ ಮಹನೀಯರನ್ನು ಆಯ್ಕೆ ಮಾಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಧಕರ ಆಯ್ಕೆಗೆ ಸಲಹಾ ಸಮಿತಿಯನ್ನು ರಚಿಸುವಾಗ ಯಾವುದೇ ರಾಜಕೀಯ ಪಕ್ಷದಡಿಯಲ್ಲಿ ದುಡಿಯುತ್ತಿರುವ ವ್ಯಕ್ತಿಯನ್ನು ಸದಸ್ಯರನ್ನಾಗಿ ಮಾಡದಿರುವುದು ಒಳಿತಾಗಿದೆ. ಪ್ರಶಸ್ತಿಗಾಗಿ ಲಾಬಿ ನಡೆಸುವವರ ಹೆಸರನ್ನು ಕೈಬಿಟ್ಟು ಅರ್ಹರಿಗಷ್ಟೆ ಪ್ರಶಸ್ತಿಯು ದೊರೆಯುವಂತೆ ನೋಡಿಕೊಳ್ಳಬೇಕಿದೆ. ಇದರಿಂದ ಕನ್ನಡ ನಾಡು ನುಡಿಗಾಗಿ ದುಡಿದು ದಣಿದ ಜೀವಗಳಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ವರ್ಷಕ್ಕೆರಡು ಬಾರಿ ಕಾಮಗಾರಿಯ ಫಲ ಇದು!?

ಮಾನ್ಯರೆ,

ಮೈಸೂರಿನ ಹೈವೇ ಸರ್ಕಲ್‌ನಿಂದ ಯಾದವಗಿರಿಗೆ ಹೋಗುವ ಮಾರ್ಗದಲ್ಲಿ ಮೇದರಕೇರಿಯ ಈ ವಿಶಾಲ ರಸ್ತೆಯ ಮಧ್ಯೆ ಕಳೆದ ಅನೇಕ ವರ್ಷದಿಂದ ಒಂದು ಸಮಸ್ಯೆ ಸಮಸ್ಯೆಯಾಗಿಯೇ ಉಳಿದಿದೆ. ಬಹುಶಃ ಜಲಮಂಡಳಿ ಇಲ್ಲವೇ ವಾಣಿವಿಲಾಸ ವಾಟರ್ ವರ್ಕ್ಸ್ ಇದನ್ನು ಸಮಸ್ಯೆಯಾಗಿಯೇ ಉಳಿಸಿಕೊಂಡಿರಬಹುದು. ಅದಕ್ಕೆ ನಮ್ಮ ಜನಪ್ರತಿನಿಧಿಗಳು ಸಹಕರಿಸಿದಂತಿದೆ.



ವಿಷಯ ಇಷ್ಟೇ! ಇಲ್ಲಿ ನೀರಿನ ಪೈಪ್ ಸೋರಿಕೆಯಾಗುತ್ತಿದೆ. ಈಗಲ್ಲ ಕಳೆದ ಸುಮಾರು 10 ವರ್ಷದಿಂದಲೂ ಸೋರಿಕೆಯಾಗುತ್ತಲೇ ಇದೆ. ವರ್ಷಕ್ಕೆರಡು ಬಾರಿ ಇಲ್ಲಿ ಅಗೆದು, ಕಾಮಗಾರಿ ಮಾಡಿ ನೀರು ಸೋರಿಕೆ ನಿಲ್ಲುವಂತೆ ಮಾಡುತ್ತಾರೆ.

ಇದಾದ ಐದತ್ತು ದಿನದಲ್ಲಿ ಮತ್ತೆ ನೀರು ಸೋರಿಕೆ ಆರಂಭವಾಗುತ್ತದೆ. ಆಗ ಕೂಡಲೇ ಪೊಲೀಸರು ಬ್ಯಾರಿಕೇಡ್ ತಂದು ಇಲ್ಲಿ ಇರಿಸಿ, ಅದಕ್ಕೆ ರಕ್ಷಣೆ ನೀಡಿ, ವಾಹನಗಳು ಇದನ್ನು ಬಳಸಿಕೊಂಡು ಹೋಗುವಂತೆ ಮಾಡುತ್ತಾರೆ.

ಇದರ ಬಗ್ಗೆ ತನಿಖೆ ಮಾಡಿಸಿದರೆ ಒಂದು ಹಗರಣವೇ ನಡೆದಿರಬಹುದಾದ ಸಾಧ್ಯತೆ ಇದೆ. ಏಕೆಂದರೆ ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸಿದರೆ ನಮಗೇನು ಲಾಭ ಎಂಬ ಧೋರಣೆ ನಮ್ಮ ಅಧಿಕಾರಿಗಳದ್ದಾಗಿರಬಹುದು.

ಪ್ರತಿ ಬಾರಿ ಲಕ್ಷಾಂತರ ರೂ. ಬಿಲ್ಲು ಮಂಜೂರಾಗಿರುವ ಸಾಧ್ಯತೆಯೂ ಇದೆ. ಇದರ ಬಗ್ಗೆ ಜನಪ್ರತಿನಿಧಿಗಳ್ಯಾರು ಗಮನಹರಿಸಿಲ್ಲವೆಂದು ಕಾಣುತ್ತದೆ. ಇಲ್ಲ ಇದು ನಮಗೆ ಸಂಬಂಧಪಟ್ಟಿದ್ದಲ್ಲ ಎಂದು ಸುಮ್ಮನಿರಬಹುದು. ಆದರೆ ದಕ್ಷ ಅಧಿಕಾರಿಗಳಿದ್ದಲ್ಲಿ ಇದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿ.

– ರಾಮಚಂದ್ರ, ಮೈಸೂರು.

ಇಂದು ಸೂರ್ಯಗ್ರಹಣ

ವೈಜ್ಞಾನಿಕ ದೃಷ್ಟಿಕೋನ

ಅನಾದಿ ಕಾಲದಿಂದಲೂ ಆಕಾಶ ಕಾಯಗಳನ್ನು ಮನುಷ್ಯ ವೀಕ್ಷಿಸುತ್ತಲೇ ಬಂದಿದ್ದಾನೆ. ಕೋಟ್ಯಾನು ಕೋಟಿ ವರ್ಷಗಳಿಂದ ಅಸಂಖ್ಯಾತ ಕಾಯಗಳ ಬಗ್ಗೆ ಅನೇಕ ವಿಚಾರಗಳನ್ನು ಹೆಕ್ಕಿ ನೋಡಿದ್ದಾನೆ. ಇದಲ್ಲದೆ, ಅನೇಕ ನೈಸರ್ಗಿಕ ವಿದ್ಯಮಾನಗಳಲ್ಲಿ 'ಗ್ರಹಣ'ವೂ ಒಂದು. ಧೂಮಕೇತು ಗೋಚರಿಸುತ್ತಿದೆ ಅಥವಾ ಗ್ರಹಣ ಸಂಭವಿಸುತ್ತಿದೆಯೆಂದರೆ ಹಲವರಿಗೆ ಆತಂಕ ಮೂಡುತ್ತದೆ. ಗ್ರಹಣ ಗೋಚರಿಸುತ್ತಿದೆಯೆಂದರೆ, ಅನೇಕ ರೀತಿಯ ಆಚರಣೆಗಳು ಪ್ರಾರಂಭವಾಗುತ್ತವೆ.

'ದೀಪಾವಳಿ' ಹಬ್ಬದ ಸಮಯದಲ್ಲಿ ಸೂರ್ಯಗ್ರಹಣ ಸಂಭವಿಸುತ್ತಿದೆ. ಈ ವರ್ಷದ ಎರಡನೆಯ ಸೂರ್ಯಗ್ರಹಣ 'ಅಕ್ಟೋಬರ್ 25'ರಂದು ಭಾರತದಾದ್ಯಂತ ಗೋಚರಿಸುತ್ತಿದೆ. ಸೂರ್ಯ ಅಥವಾ ಚಂದ್ರಗ್ರಹಣ ನೈಸರ್ಗಿಕ ಪ್ರಕ್ರಿಯೆಯಾಗಿದ್ದರೂ, ಜನರಲ್ಲಿ ಕುತೂಹಲ ಕೆರಳುವುದರಲ್ಲಿ ಆಶ್ಚರ್ಯವಿಲ್ಲ. ಗ್ರಹಣವೆಂದರೇನು, ಸಂಭವಿಸುವ ರೀತಿ, ಖಗೋಳೀಯ ಅಂಶಗಳು, ಸಂಭವಿಸುವ ಸಮಯ, ಅವಧಿ ಹಾಗೂ ವೀಕ್ಷಿಸುವ ಪರಿಯನ್ನು ತಿಳಿದುಕೊಳ್ಳುವ ಕುತೂಹಲ ಇರುತ್ತದೆ. ಈ ಗಣಕಯುಗದಲ್ಲೂ, ಜನರು ವೈಜ್ಞಾನಿಕವಾಗಿ ಆಲೋಚಿಸದೆ, ಮೂಢನಂಬಿಕೆಗಳಿಗೆ ಮಹತ್ವ ಕೊಡುತ್ತಾರಲ್ಲಾ, ಅದೇ ವಿಪರ್ಯಾಸ. ಗ್ರಹಣದ ಬಗ್ಗೆ ಆಸಕ್ತಿಯಿದ್ದರೆ 'ಅಕ್ಟೋಬರ್ 25'ರಂದು ಗೋಚರಿಸಲಿರುವ ಗ್ರಹಣದ ವಿವರ ತಿಳಿದುಕೊಳ್ಳುವ ಕೌತುಕತೆ ಪ್ರತಿಯೊಬ್ಬರಿಗೂ ಇರುತ್ತದೆ. ಪ್ರತಿಯೊಬ್ಬರೂ, 'ದೀಪಾವಳಿ' ಹಬ್ಬ ಆಚರಣೆಯಲ್ಲಿ ಮಗ್ನರಾಗಿರುತ್ತಾರೆ. ಈ ಸಂದರ್ಭದಲ್ಲೇ 'ಭಾಗಶಃ ಸೂರ್ಯಗ್ರಹಣ' ಸಂಭವಿಸುತ್ತಿದೆ. ಅ. 25ರ ಮಂಗಳವಾರ ಸಂಜೆ 5.14 ಗಂಟೆಗೆ ಪ್ರಾರಂಭವಾದರೆ 5.51ಕ್ಕೆ ಅಂತ್ಯಗೊಳ್ಳುತ್ತದೆ. ಇದು, ಮೈಸೂರಿನಲ್ಲಿ ಗ್ರಹಣ ಗೋಚರತೆಯ ಸಮಯ. ಸುಮಾರು 46 ನಿಮಿಷಗಳ ಕಾಲ ಗ್ರಹಣದ ಗೋಚರತೆ ಇರುತ್ತದೆ. ಕೇವಲ 9% ಮಾತ್ರ. ಚಂದ್ರನು ಸೂರ್ಯನನ್ನು ಮುಚ್ಚುತ್ತಾನೆ. ಗ್ರಹಣದ 'ಕಾಂತಿಮಾನ'ತೆ 0.182. ನಾಳೆ ಮಂಗಳವಾರ ಗೋಚರಿಸಲಿರುವ 'ಸೂರ್ಯಗ್ರಹಣ' ಬಹಳ ರೋಚಕವಾಗಿಲ್ಲದಿದ್ದರೂ, ಇಡೀ ಭಾರತದಲ್ಲಿ ಗ್ರಹಣದ ಆಚರಣೆ ಉಂಟು. ಕರ್ನಾಟಕದಲ್ಲಿ ಗ್ರಹಣದ ಗೋಚರತೆ ಶೇ.8.

ಗ್ರಹಣಗಳು ಕೋಟ್ಯಾನುಕೋಟಿ ವರ್ಷಗಳಿಂದ ಸಂಭವಿಸುತ್ತಿದ್ದರೂ, ಪ್ರತಿ ಗ್ರಹಣವು ವೈಶಿಷ್ಟ್ಯಪೂರ್ಣವಾಗಿರುತ್ತದೆ. ಸೂರ್ಯಗ್ರಹಣದಲ್ಲೇ, ಪೂರ್ಣ, ಭಾಗಶಃ ಹಾಗೂ ಸಂಪೂರ್ಣ ಗ್ರಹಣಗಳೆಂಬ ಪ್ರಭೇದಗಳಿವೆ. ಖಗ್ರಾಸ ಸೂರ್ಯಗ್ರಹಣವಾಗಲೀ ಅಥವಾ ಕಂಕಣ ಗ್ರಹಣವಾಗಲೀ ವೀಕ್ಷಿಸುವುದಕ್ಕೆ ಖಂಡಿತವಾಗಿ ಎರಡು ಕಣ್ಣು ಸಾಲದು. ಈ ಬಗೆಯ ಗ್ರಹಣಗಳನ್ನು ವೀಕ್ಷಿಸುವುದಕ್ಕಾಗಿ ಖಗೋಳಶಾಸ್ತ್ರಜ್ಞರು ವರ್ಷಗಳಿಂದಲೇ ಕಾಯುತ್ತಿರುತ್ತಾರೆ. ಅದೇ ರೀತಿ (ನಾಳೆ ಮಂಗಳವಾರ) ಗೋಚರಿಸಲಿರುವ ಸೂರ್ಯಗ್ರಹಣ ಪಾರ್ಶ್ವ ಗ್ರಹಣವಾದರೂ, ನೋಡುವ ತವಕ ಹಲವರಿಗಿರುತ್ತದೆ.

ಈಗಿನ ಸೂರ್ಯಗ್ರಹಣ ಯೂರೋಪ್, ಪಶ್ಚಿಮ ಏಷ್ಯಾ, ಆಫ್ರಿಕಾ ಖಂಡಗಳಲ್ಲಿ ಗೋಚರಿಸಲಿದೆ. ಭಾರತದಲ್ಲಿ ಹಲವು ಉತ್ತರ ಭಾಗಗಳಲ್ಲಿ ಶೇ.50ರಷ್ಟು ಪಾರ್ಶ್ವತೆ ಇದ್ದರೂ, ದಕ್ಷಿಣ ಭಾಗಗಳಲ್ಲಿ ಕೇವಲ 5ರಿಂದ 9. ಅನೇಕ ಉತ್ತರ ಭಾಗಗಳಲ್ಲಿ ಗೋಚರತೆ 20 ರಿಂದ 50 ಇದ್ದರೆ, ದಕ್ಷಿಣ ಭಾಗಗಳಲ್ಲಿ ಕೇವಲ 5ರಿಂದ 9. ಮೈಸೂರಿನಲ್ಲಿ ಸಂಜೆ 5.14ರಿಂದ 5.51ರ ತನಕ ಗೋಚರಿಸಿದರೂ, ಗರಿಷ್ಠಾವಧಿ 5.51ಕ್ಕೆ ಸಂಭವಿಸುತ್ತದೆ. ಗ್ರಹಣದ ಅಂತ್ಯಭಾಗ ಭಾರತದಲ್ಲಿ ಎಲ್ಲೂ ಗೋಚರಿಸುವುದಿಲ್ಲ.

ಚಂದ್ರ ದರ್ಶನವಾಗುವುದು, ಹಲವು ಭಾಗಗಳಲ್ಲಿ 4 ಗಂಟೆಯ ನಂತರ. ಮೈಸೂರಿನಲ್ಲಿ 5 ಗಂಟೆ ನಂತರ ಗೋಚರವಾಗುತ್ತದೆ. ಪ್ರಾರಂಭಿಕ ಘಟ್ಟ ಗೋಚರವಾದರೂ, ಗ್ರಹಣದ ಅಂತ್ಯ ಕಾಣುವುದಿಲ್ಲ. ಏಕೆಂದರೆ, 6 ಗಂಟೆ ಹೊತ್ತಿಗೆ ಅಸ್ತಂಗತವಾಗುತ್ತಾನೆ. ಹಾಗಾಗಿ ಭಾರತದ ಯಾವುದೇ ಭಾಗದಲ್ಲಾದರೂ ಗ್ರಹಣದ ಅಂತ್ಯದ ಗೋಚರತೆ ಅಸಾಧ್ಯ.

ಗ್ರಹಣ ವೀಕ್ಷಣೆ ಹೇಗೆ?: ಗ್ರಹಣದ ಅನೇಕ ವೈಜ್ಞಾನಿಕ ಹಾಗೂ ಖಗೋಳೀಯ ಅಂಶಗಳು ತಿಳಿದುಕೊಂಡರೆ ಸಾಲದು, ಇದರ ವೀಕ್ಷಣೆಯ ರೀತಿಯೂ ತಿಳಿದುಕೊಳ್ಳುವುದು ಸೂಕ್ತ. ಸೂರ್ಯಗ್ರಹಣವನ್ನು ಬರಿಗಣ್ಣಿನಿಂದ ವೀಕ್ಷಿಸುವುದಾದರೆ, ಪರಿಣಾಮ ಏನಾಗಬಹುದು? ದೂರದರ್ಶಕದ ಸಹಾಯ ಬೇಕೆ? ವಿಧಾನಗಳೇನು? ಇವೆಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ.

ಸೂರ್ಯಗ್ರಹಣ ಸಂಪೂರ್ಣವೋ ಅಥವಾ ಭಾಗಶಃವೋ, ಬರಿಯ ಕಣ್ಣಿನಿಂದ ವೀಕ್ಷಿಸಿದರೆ ಅಪಾಯ ಖಂಡಿತ. ಚಂದ್ರನು ಸೂರ್ಯನ ಪದರದ ಮೇಲೆ ಬಂದಾಗ, ಸೂರ್ಯನಿಂದ ಹೊರ ಬೀಳುವ ಅತೀ ತೀವ್ರತೆಯ ಕಿರಣಗಳು ಕಣ್ಣಿನ ಅಕ್ಷಿಪಟಲದ ಮೇಲೆ ಬಿದ್ದರೆ, ಅಪಾಯ ಕಟ್ಟಿಟ್ಟ ಬುತ್ತಿ. ಇದಕ್ಕೆ ಉಪಾಯ 'ಸೌರ ಶೋಧಕ' ಬಳಸುವುದು. ದೂರದರ್ಶಕದ ಸಹಾಯದಿಂದಲೂ ವೀಕ್ಷಿಸಬಹುದು. ಯಾವುದೇ ರೀತಿಯಾದರೂ, ಕಣ್ಣಿನ ಸುರಕ್ಷತೆ ಬಹಳ ಮುಖ್ಯ. ಅತ್ಯಂತ ಸರಳ ವಿಧಾನವೆಂದರೆ 'ಪಿನ್ ಹೋಲ್ ಬಿಂಬಗ್ರಾಹಿ'. ಈ ವಿಧಾನಗಳಲ್ಲದೆ, ಬೇರ್‍ಯಾವುದೇ ವಿಧಾನ ಪಾಲಿಸುವುದು ಸಮಂಜಸವಲ್ಲ.

ನಾಳೆ (ಮಂಗಳವಾರ) ಸಂಜೆಯ ಸಮಯದಲ್ಲಿ ಗೋಚರಿಸುವುದರಿಂದ ವೀಕ್ಷಿಸುವುದಕ್ಕೆ ಪಶ್ಚಿಮ ದಿಕ್ಕಿಗೆ ಮುಖ ಮಾಡಬೇಕು. ಮಳೆಯ ಭೀತಿ ಇರುವುದರಿಂದ ವೀಕ್ಷಣೆ ಖಾತ್ರಿಪಡಿಸುವುದು ಕಷ್ಟ. 'ನವೆಂಬರ್ 8' ರಂದು ಭಾಗಶಃ ಚಂದ್ರ ಗ್ರಹಣ ಸಂಭವಿಸಲಿದೆ. ಮೂಢನಂಬಿಕೆಗಳನ್ನು ಓಡಿಸಿ, ವೈಜ್ಞಾನಿಕತೆಗೆ ಮಹತ್ವ ಕೊಟ್ಟು ಗ್ರಹಣವನ್ನು ಆನಂದದಿಂದ ವೀಕ್ಷಿಸೋಣ.

■ ಡಾ.ಎಸ್.ಎ.ಮೋಹನ್‌ಕೃಷ್ಣ
ಹವ್ಯಾಸಿ ಖಗೋಳಜ್ಞ



ಇಂದು ಸೂರ್ಯಗ್ರಹಣ ಹಿನ್ನೆಲೆಯಲ್ಲಿ ವಿವಿಧ ದೇವಸ್ಥಾನಗಳಿಗೆ ಭಕ್ತಾದಿಗಳ ಪ್ರವೇಶ ನಿರ್ಬಂಧದ ವಿವರ

ಮೈಸೂರು ಭಾಗದ ದೇವಸ್ಥಾನಗಳು	
ಚಾಮುಂಡಿಬೆಟ್ಟ	ಮಧ್ಯಾಹ್ನ 1 ಗಂಟೆಯಿಂದ ಇಡೀ ದಿನ
ಅಮೃತೇಶ್ವರ ದೇವಸ್ಥಾನ	ಮಧ್ಯಾಹ್ನ 1 ಗಂಟೆಯಿಂದ ಸಂಜೆ 7ರವರೆಗೆ
ಗಣಪತಿ ಆಶ್ರಮ	ಬೆಳಿಗ್ಗೆ 11 ಗಂಟೆಯಿಂದ ಇಡೀ ದಿನ
ಒಂಟಿಕೊಪ್ಪಲು ವೆಂಕಟೇಶ್ವರ	ಬೆಳಿಗ್ಗೆ 11.30 ಗಂಟೆಯಿಂದ ಇಡೀ ದಿನ
ಮಲೆಮಹದೇಶ್ವರಬೆಟ್ಟ	ಇಡೀ ದಿನ ದರ್ಶನವಿರುತ್ತದೆ
ಶ್ರೀರಂಗಪಟ್ಟಣ ಭಾಗದ ದೇವಸ್ಥಾನಗಳು	
ಶ್ರೀರಂಗನಾಥಸ್ವಾಮಿ ದೇವಸ್ಥಾನ	ಬೆಳಗ್ಗೆ 11 ಗಂಟೆಯಿಂದ ರಾತ್ರಿ 7.30ರವರೆಗೆ
ಶ್ರೀ ನಿಮಿಷಾಂಬ ದೇವಸ್ಥಾನ	ಮಧ್ಯಾಹ್ನ 12 ಗಂಟೆಯಿಂದ ಸಂಜೆ 7ರವರೆಗೆ
ಶ್ರೀ ಕ್ಷಣಾಂಬಿಕಾ ದೇವಸ್ಥಾನ	ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8ರವರೆಗೆ
ಆರತಿ ಉಕ್ಕಡ ದೇವಸ್ಥಾನ	ಮಧ್ಯಾಹ್ನ 2 ಗಂಟೆಯಿಂದ ಸಂಜೆ 7ರವರೆಗೆ
ಮೇಲುಕೋಟೆ ಶ್ರೀ ಚೆಲುವ ನಾರಾಯಣಸ್ವಾಮಿ ದೇವಸ್ಥಾನ	ಬೆಳಗ್ಗೆ 11 ಗಂಟೆಯಿಂದ ರಾತ್ರಿ 8ರವರೆಗೆ
ಶ್ರೀ ಹಾಸನಾಂಬೆ ದೇವಸ್ಥಾನಕ್ಕೆ ಇಡೀ ದಿನ ಪ್ರವೇಶ ನಿರ್ಬಂಧಿಸಲಾಗಿದೆ	

ಸೂಚನೆ: ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಹೋಮ, ಅಭಿಷೇಕಗಳು ನೆರವೇರಲಿದ್ದು, ದರ್ಶನಕ್ಕೂ ಅವಕಾಶ ಕಲ್ಪಿಸಲಾಗಿದೆ. ಧರ್ಮಸ್ಥಳ ಹಾಗೂ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸೇವಾಕಾರ್ಯಗಳನ್ನು ಸ್ಥಗಿತಗೊಳಿಸಿದ್ದು ದೇವರ ದರ್ಶನವನ್ನೂ ನಿರ್ಬಂಧಗೊಳಿಸಲಾಗಿದೆ.

ಆಧ್ಯಾತ್ಮಿಕ ವಿಶ್ಲೇಷಣೆ

ಸ್ಪರ್ಶ ಕಾಲ ಹಗಲು 2.28, ಮಧ್ಯಕಾಲ ಹಗಲು 4.30, ಮೋಕ್ಷಕಾಲ ಸಾಯಂಕಾಲ 6.32

ಗ್ರಹಣಗಳು ಖಗೋಳದಲ್ಲಿ ನಡೆಯುವ ಒಂದು ವಿಸ್ಮಯ, ಇಂತಹ ಗ್ರಹಣ ಇಂತಹುದೇ ದಿನ ಇಷ್ಟೇ ಸಮಯಕ್ಕೆ ಹಿಡಿಯುತ್ತದೆ, ಇಷ್ಟೇ ಸಮಯಕ್ಕೆ ಮೋಕ್ಷವನ್ನು ಹೊಂದುತ್ತದೆ ಎಂದು ಹೇಳುವ ಜ್ಯೋತಿಶ್ಶಾಸ್ತ್ರವೂ ಒಂದು ವಿಸ್ಮಯವಾದ ವಿದ್ಯೆ. ಗ್ರಹಣ ಕಾಲ ಆಧ್ಯಾತ್ಮ ದೃಷ್ಟಿಕೋನದಿಂದ ಅತ್ಯಂತ ಮಹತ್ವದ ಕಾಲ. ಇದನ್ನು ಪರ್ವಕಾಲ, ಸಿದ್ಧಿ ಸಮಯ ಎಂದು ಕರೆಯುತ್ತಾರೆ. ಈ ಸಮಯದಲ್ಲಿ ಮಾಡಿದ ಹೋಮ, ಹವನ, ಜಪಾನುಷ್ಠಾನ, ಮಂತ್ರ ದೀಕ್ಷೆ, ತರ್ಪಣ, ಯಂತ್ರ, ತಂತ್ರಗಳ ಆಚರಣೆ ಸಿದ್ಧಿಸುತ್ತದೆ ಎಂಬ ನಂಬಿಕೆ ಇದೆ. ಇದರಿಂದ ಮಾನವನ ಮನೋಕಾಮನೆಗಳು ಪೂರ್ಣವಾಗುತ್ತದೆಂದು ಪುರಾಣಗಳು ಹೇಳುತ್ತವೆ. ಇಂತಹ ಸರ್ವಶ್ರೇಷ್ಠ ಸಮಯದಲ್ಲಿ ನದಿ, ಸಂಗಮ, ಸರೋವರ, ಸಮುದ್ರ, ತಟಕಾದಿಗಳಲ್ಲಿ ಸ್ನಾನ ಮಾಡಿ, ಜಪ, ತಪ, ಧ್ಯಾನ, ಪೂಜೆ, ಉಪವಾಸ ದಾನಗಳನ್ನು ಮಾಡುವುದರಿಂದ ಅನಂತ ಫಲ ದೊರೆಯುತ್ತದೆ ಎಂದು ನಮ್ಮ ಪೂರ್ವಿಕರು ಹೇಳಿದ್ದಾರೆ.

ಸೂರ್ಯಗ್ರಹಣ ಯಾವಾಗಲೂ ಅಮಾವಾಸ್ಯೆಯ ದಿನ ಘಟಿಸುತ್ತದೆ. ಈ ಸಮಯದಲ್ಲಿ ನಮ್ಮ ಕಣ್ಣಿಗೆ ಕಾಣದಿರುವ ಚಂದ್ರ ಸರಿಯಾಗಿ ರಾಹು ಅಥವಾ ಕೇತು ಬಿಂದುವಿನ ಮೇಲೆ ಬರುತ್ತಾನೆ. ಅಲ್ಲದೆ ಪೃಥ್ವಿಗೆ ಅತ್ಯಂತ ನಿಕಟವಾಗಿರುತ್ತಾನೆ. ಈ ಸ್ಥಿತಿಯಲ್ಲಿ ಚಂದ್ರನ ನೆರಳು ಭೂಮಿಯ ಮೇಲೆ ಬೀಳುತ್ತದೆ. ಹಾಗೂ ಸೂರ್ಯನು ಮರೆಯಾದಂತೆ ಭಾಸವಾಗುತ್ತಾನೆ. ಗತಿಶೀಲತೆ ಇರುವ ಚಂದ್ರ ಮುಂದೆ ಮುಂದೆ ಸಾಗಿದಂತೆ ರವಿ ಸ್ವಲ್ಪ ಸ್ವಲ್ಪವಾಗಿ ಗೋಚರಿಸುತ್ತಾ ಸಾಗುತ್ತಾನೆ.

ಗ್ರಹಣಗಳು ಮೂರು ವಿಧ – ಒಂದು ಖಗ್ರಾಸ ಸೂರ್ಯಗ್ರಹಣ. ಇದು ಸಂಪೂರ್ಣ ಮರೆಯಾಗುವುದು, ಎರಡು ಖಂಡಗ್ರಾಸ ಸೂರ್ಯಗ್ರಹಣ, ಎಂದರೆ ಭಾಗಶಃ ಮರೆಯಾಗುವುದು, ಮೂರು ಕಂಕಣಾಕಾರ ಸೂರ್ಯಗ್ರಹಣ, ಇದು ಕಂಕಣಾಕಾರ (ಬಳೆ)ವಾಗಿ ಕಾಣಿಸುತ್ತದೆ. ಗ್ರಹಣಕ್ಕೆ ಮುಂಚೆ ಸ್ನಾನ ಶೌಚಾದಿಗಳನ್ನು ಮಾಡಿ ಗ್ರಹಣ ಮಧ್ಯ ಕಾಲದಲ್ಲಿ ತರ್ಪಣವನ್ನು ಬಿಡಬೇಕು. ಇದು ಸಂಪ್ರದಾಯ ಇರುವವರಿಗೆ ಮಾತ್ರ. ಗ್ರಹಣ ಸಮಯದಲ್ಲಿ ಆಹಾರ ಸೇವನೆ, ನಿದ್ರೆ, ಮಲಮೂತ್ರ ವಿಸರ್ಜನೆ ಮಾಡಬಾರದು. ಗ್ರಹಣ ಸಮಯದಲ್ಲಿ ಜಪಾನುಷ್ಠಾನಗಳನ್ನು ಮಾಡಬೇಕು. ಈ ಬಾರಿಯದು ಸೂರ್ಯಾಸ್ತದ ನಂತರವೂ ಗ್ರಹಣ ಕಾಲ ಮುಂದುವರೆಯುವುದರಿಂದ ಇದನ್ನು 'ಗಸ್ತಾಸ್ತ' ಕೇತುಗ್ರಸ್ತ ಸೂರ್ಯಗ್ರಹಣ ಎಂದು ಕರೆಯಲಾಗಿದೆ. ಈ ಗ್ರಹಣವು ಸೂರ್ಯಾಸ್ತನಂತರ ಮುಗಿಯುವುದರಿಂದ ಗ್ರಹಣ ಮೋಕ್ಷವು ಕಾಣಿಸುವುದಿಲ್ಲ.

ಇದೇ ಅಕ್ಟೋಬರ್ 25ರ ದೀಪಾವಳಿ ಅಮಾವಾಸ್ಯೆ ಮಂಗಳವಾರ ಸೂರ್ಯಗ್ರಹಣ ಸ್ಪರ್ಶ ಕಾಲ ಹಗಲು 2.28, ಮಧ್ಯಕಾಲ ಹಗಲು 4.30, ಮೋಕ್ಷಕಾಲ ಸಾಯಂಕಾಲ 6.32. ಈ ದಿನದಂದು ಗ್ರಹಣ ಮೋಕ್ಷಾನಂತರ ಸ್ನಾನ, ಪೂಜಾದಿಗಳನ್ನು ಆಚರಿಸಿ ಆಹಾರ ಸೇವಿಸಬಹುದು.

ಶುಭ ಫಲ – ಸಿಂಹ, ವೃಷಭ, ಮಕರ, ಧನುಸ್ಸು
ಮಧ್ಯಮ ಫಲ– ಕನ್ಯಾ, ಮಿಥುನ, ಮೇಷ, ಕುಂಭ
ಅಶುಭ ಫಲ– ತುಲಾ, ಕಟಕ, ಮೀನ, ವೃಶ್ಚಿಕ

ಅಶುಭ ಫಲ ಇರುವ ರಾಶಿಯವರು ಈ ಕೆಳಗಿನ ಶ್ಲೋಕವನ್ನು ಒಂದು ಕಾಗದದ ಮೇಲೆ ಬರೆದು ಗ್ರಹಣ ಮುಗಿಯುವವರೆಗೂ ತಮ್ಮ ಬಳಿ ಇಟ್ಟುಕೊಂಡಿದ್ದು, ಗ್ರಹಣ ಮೋಕ್ಷಾನಂತರ ಮಾರನೇ ದಿನ ಸೂರ್ಯ ದರ್ಶನವಾದಾಗ ಯಥಾಶಕ್ತಿ ದಕ್ಷಿಣೆ ಸಮೇತ ದಾನ ಮಾಡತಕ್ಕದ್ದು.

ಶ್ಲೋಕ:– ಯೋ ಸೌ ವಜ್ರಧರೋದೇವಃ
ಆದಿತ್ಯಾ ನಾಂ ಪ್ರಭುರ್ಮತಃ।
ಸೂರ್ಯಗ್ರಹೋಪರಾಗೋತ್ಥ
ಗ್ರಹಪೀಡಾಂ ವ್ಯಪೋಹತು॥
ಯೋಸೌ ದಂಡಧರೋದೇವಃ
ಯಮೋ ಮಹಿಷವಾಹನಃ।
ಸೂರ್ಯಗ್ರಹೋಪರಾಗೋತ್ಥಗ್ರಹಪೀಡಾಂ
ವ್ಯಪೋಹತು॥
ಯೋ ಸೌ ಶೂಲಧರೋ ದೇವಃ
ಪಿನಾಕಿ ವೃಷವಾಹನಃ।
ಸೂರ್ಯ ಗ್ರಹೋಪರಾಗೋತ್ಥ
ಗ್ರಹಪೀಡಾಂ ವ್ಯಪೋಹತು॥

ಧರ್ಮಶಾಸ್ತ್ರ ಗ್ರಂಥದಲ್ಲಿ ತಿಳಿಸಿರುವ ರೀತಿ ಗ್ರಹಣಾಚರಣೆಯ ಕ್ರಮವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಅದರಂತೆ ಆಚರಿಸುವುದು ಅಥವಾ ಆಚರಿಸದಿರುವುದು ಮಹಾಜನಗಳ ವೈಯಕ್ತಿಕ ಅಭಿಪ್ರಾಯಕ್ಕೆ ಸೇರಿದ್ದು (ವ್ಯಪೋಹತು ಎಂದರೆ ನಿವಾರಣೆಯಾಗಲಿ ಎಂದು ಅರ್ಥ).


■ ಚೈತನ್ಯಶ್ರೀ ವಿ. ಕೇಶವಮೂರ್ತಿ,
ಜ್ಯೋತಿಷ ವಿದ್ವಾಂಸ

ಅಲ್ಪ ಸಂತೋಷಕ್ಕೆ ಅಡ್ಡ ದಾರಿ ಹಿಡಿಯುವುದು ಅಪಾಯಕಾರಿ!

ನಗುವುದು ಸಹಜ ಧರ್ಮ; ನಗಿಸುವುದು ಪರಧರ್ಮ। ನಗುವ ಕೇಳುತ ನಗುವುದತಿಶಯದ ಧರ್ಮ॥ ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ಮಿಗೆ ನೀನು ಬೇಡಿಕೊಳೊ–ಮಂಕುತಿಮ್ಮ॥. ಡಿ.ವಿ.ಜಿ ಅವರ ಈ ಕಗ್ಗದ ನುಡಿ ಬಹಳ ಅರ್ಥ ಪೂರ್ಣವಾಗಿದೆ. ನಗುವಿನ ಮಹತ್ವವನ್ನು ಸಾರುವ ಈ ಕಗ್ಗದಲ್ಲಿ ಸಂತೋಷವೆನ್ನುವುದು ಸಹಜ ಭಾವ ಮತ್ತು ಚೈತನ್ಯರೂಪ. ಮನುಷ್ಯರ ಚೈತನ್ಯ ರೂಪವಾದ ಈ ಸಂತೋಷವು ಸಹಜ ಬಗೆಯಾಗಿ ಹೊರಹೊಮ್ಮುವುದು ಮಾತ್ರವಲ್ಲದೆ ಇತರರ ಸಂತೋಷವನ್ನೂ ಸಹ ಬಯಸಬೇಕು. ಜೊತೆಗೆ ಆ ಸಂತೋಷ ಇತರರಿಗೆ ಹಿತವನ್ನುಂಟು ಮಾಡುವ ರೀತಿಯಾಗಿರಬೇಕೇ ವಿನಃ ನೋವನ್ನುಂಟು ಮಾಡಬಾರದು ಎನ್ನುವುದರ ಸಾರ ಈ ಕಗ್ಗವಾಗಿದೆ.

ಹಾಗೆಯೇ ಇನ್ನೊಬ್ಬರ ಸಂತೋಷವನ್ನು ನಮ್ಮ ಸಂತೋಷವನ್ನಾಗಿ ಪರಿಗಣಿಸಿ ನಾವು ಆ ಪರರ ಆನಂದದಲ್ಲಿ ಬೆರೆಯಬೇಕು ಎಂಬುದನ್ನು ತಿಳಿಸಲಾಗಿದೆ. ನಗುವುದು ಉತ್ತಮ. ನಾವು ನಗುತ ಇತರರನ್ನು ನಗಿಸುವುದು ಇನ್ನೂ ಉತ್ತಮ. ಇತರರ ಸಂತೋಷವನ್ನು ನಮ್ಮ ಸಂತೋಷವಾಗಿ ಭಾವಿಸುವುದು ಸರ್ವ ಉತ್ತಮ. ಈ ಬಗೆಯಾದ ಸಂತೋಷವನ್ನು ತಮ್ಮದಾಗಿಸಿಕೊಳ್ಳುವಂತೆ ಪ್ರಾರ್ಥಿಸಿ ಎನ್ನುವ ಮಾರ್ಗದರ್ಶನವನ್ನು ಡಿ.ವಿ.ಜಿ ಅವರು ಸರಳವಾಗಿ ಉಪದೇಶಿಸಿದ್ದಾರೆ.

ನಗುವುದು ಯಾರಿಗೆ ಬೇಡ ಹೇಳಿ? ಎಲ್ಲರೂ ನಗುವಿಗಾಗಿ ತುಡಿಯುವವರೇ. ಈ ನಗುವನ್ನು ಕಾಣಲು ಮನುಷ್ಯರು ಹಲವಾರು ಜೀವನ ಶೈಲಿಗಳಲ್ಲಿ ಮತ್ತು ಮನರಂಜನೆಯ ಚಟುವಟಿಕೆಗಳಲ್ಲಿ ನಿತ್ಯ ತೊಡಗುತ್ತಿರುತ್ತಾರೆ. ಆದರೆ ಪ್ರಸ್ತುತ ಜಗತ್ತು ಒತ್ತಡ ಕಾರ್ಯ ಪ್ರವೃತ್ತಿಯ ಚಕ್ರವ್ಯೂಹಕ್ಕೆ, ವೇಗದ ಉದ್ವಿಗ್ನಕ್ಕೆ ಸಿಲುಕಿರುವುದರಿಂದ ಈ ನಗುವೆಂಬುದು ಹಲವರಿಗೆ ಸಹಜವಾಗಿರದೆ ಕೃತಕ ಆಮ್ಲಜನಕ ಪಡೆದು ಬದುಕಿದಂತೆ ಕೃತಕ ನಗುವನ್ನು ಪಡೆದು ನಗುವಂತಾಗಿದೆ. ಈ ಹಲವರಲ್ಲಿ ಕೆಲವರು ಆ ಕೃತಕ ನಗುವಿಗೂ ಮುಗಿಬೀಳದೆ ದುಃಖ, ಬೇಸರ, ನಿರಾಸೆ, ತಾತ್ಸಾರಗಳಿಂದ ತುಂಬಿ ಹೋಗಿ ಈ ಜಗತ್ತೇ ಸರಿಯಿಲ್ಲ ಎಂದು ನಿತ್ಯ ಗುಣಗಾಡುತ್ತ, ಹೆಣಗಾಡುತ್ತ ಇದೊಂದು ನರಕ ಸಾದೃಶ್ಯ ಬದುಕು ಎಂದು ಭಾವಿಸಿ ಸತ್ತಂತೆ ಜೀವಿಸುತ್ತಿದ್ದಾರೆ. ಮನುಷ್ಯನಿಗೆ ಇಲ್ಲಿ ಎಲ್ಲವೂ ಸಮವಾಗಿ ದೊರಕಿದರೆ ಒಂದು ಲೆಕ್ಕಕ್ಕೆ ಸಂತೃಪ್ತಿ ಬದುಕೆನಿಸುತ್ತದೆ. ಸುಃಖ – ದುಃಖಗಳೆರಡೂ ಜೀವನದಲ್ಲಿ ಅತಿಮುಖ್ಯ. ಇಲ್ಲವಾದರೆ ಈ ಬದುಕು ನರಕ ಸಾದೃಶ್ಯವೇ ಆಗುತ್ತದೆ.



ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಲೈಂಗಿಕತೆಗೆ ಒಂದು ರೀತಿಯ ಕಟ್ಟಳೆ ಯಿದೆ. ಸಮಾಜದ ವ್ಯವಸ್ಥೆಗಳಾದ ವಿವಾಹ, ಕುಟುಂಬ, ಸಹಮತ ಸಂಬಂಧ ಇವುಗಳಲ್ಲಿ ಸೃಷ್ಟಿಯ ಒಳಿತಿನ ಬಯಕೆಯಾಗಿ, ನೈತಿಕ ಸುಖವಾಗಿ ಲೈಂಗಿಕ ಕ್ರಿಯೆ ಮತ್ತು ಅದರ ವಿಚಾರಗಳು ಸಹಜವಾಗಿದ್ದು, ತೀವ್ರವಾಗಿರದೆ ಗೌಪ್ಯವಾಗಿ ಬಳಕೆಯಾಗಬೇಕಿದೆ. ಆದರೆ ಇದೀಗ ಎಗ್ಗಿಲ್ಲದೇ ಲೈಂಗಿಕ ವಿಚಾರಗಳು ವಿಜೃಂಭಿಸುತ್ತಿವೆ. ಸಾರ್ವಜನಿಕ ಸ್ಥಳಗಳಲ್ಲಿ ನಿರ್ಬಂಧ ಮತ್ತು ಅನೈತಿಕ ಎನಿಸುವ ಲೈಂಗಿಕ ವಿಚಾರಗಳನ್ನೇ ಮುಂದಿಟ್ಟುಕ್ಕೊಂಡು ಹಾಸ್ಯವೆಂದು ಅಪಹಾಸ್ಯಗಳನ್ನು ಮಾಡುತ್ತ ಜನತೆಯಲ್ಲಿ ಜೀವನದ ಕೇವಲ ಒಂದು ಭಾಗವಾಗಿರುವ ಲೈಂಗಿಕತೆಯನ್ನು ಇಡೀ ಜೀವನವೇ ಆ ಲೈಂಗಿಕತೆ ಎನಿಸುವ ಹಾಗೆ ಕಾರ್ಯಕ್ರಮಗಳನ್ನು ಕೊಡುತ್ತಿರುವ ಕೆಲ ಹಾಸ್ಯತಂಡಗಳ, ಸಿನಿತಂಡಗಳ, ಪುಂಡರ ಕಾರ್ಯಪ್ರವೃತ್ತಿ ಹೆಚ್ಚಾಗಿವೆ.

ಈ ರೀತಿಯಾದ ಮನರಂಜನಾ ಗುಂಪುಗಳು ಶೃಂಗಾರದ ಹೆಸರಿನಲ್ಲಿ, ಪ್ರೀತಿ ಪ್ರೇಮದ ಹೆಸರಿನಲ್ಲಿ ಲೈಂಗಿಕ ವಿಷಯವನ್ನೇ ಪ್ರಧಾನಗೊಳಿಸಿ ಜನತೆಯಲ್ಲಿರುವ ನಾಚಿಕೆ, ಸಂಕೋಚಗಳಿಗೆ ತೆರೆ ಎಳೆದು ಬೆತ್ತಲೆ ಜಗತ್ತಿಗೆ ಪರೋಕ್ಷವಾಗಿ ಹಾಗೂ ಕೆಲವೊಮ್ಮೆ ನೇರವಾಗಿಯೇ ಸೆಳೆಯುವ ಪ್ರಯತ್ನಗಳೊಂದಿಗೆ ಹಣದ ಲಾಭ ಗಿಟ್ಟಿಸಿಕೊಳ್ಳುವ ಸ್ಪರ್ಧೆಗಿಳಿದಿರುವುದು ಹೆಚ್ಚಾಗಿದೆ. ಈ ರೀತಿಯ ಹೆಚ್ಚಳ ಸಮಾಜದ ಸ್ವಾಸ್ಥ್ಯ ಕೆಡಿಸುವಲ್ಲಿ ಪ್ರಮುಖವಾಗಿದೆ. "ಹಣವನ್ನೇನು ಯಾರು ಬೇಕಾದರೂ ಸಂಪಾದನೆ ಮಾಡುತ್ತಾರೆ; ನ್ಯಾಯ ಮಾರ್ಗದಲಿದ್ದು ಮನುಷ್ಯತ್ವ ಹೊಂದಬೇಕು" ಎನ್ನುವ ಜನಪದರ ಅನುಭವ ನುಡಿ ತಾತ್ಪರ್ಯವನ್ನೇ ಬಿಟ್ಟು, ಅದರಲ್ಲಿ ಉದಾಹರಿಸಿರುವ ಅನೈತಿಕ ವ್ಯವಹಾರವನ್ನೇ ತಮ್ಮೆಲ್ಲಾ ಸಹಜ ವ್ಯವಹಾರಗಳಲ್ಲಿ ತಂದು ಹಣವನ್ನು ಸಂಪಾದನೆ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಹಣಕ್ಕಾಗಿ ಅನೈತಿಕ ಮಾರ್ಗಗಳನ್ನು ಹಿಡಿಯುವ ತಂತ್ರಗಾರಿಕೆಯನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿ ಅನೈತಿಕ ವೃತ್ತಿಯಲ್ಲಿರುವವರನ್ನು ಅವಮಾನಿಸುವ ಮತ್ತು ಕೀಳಾಗಿ ಕಾಣುವ ಚಿಂತನೆಯಲ್ಲ. ಬದಲಾಗಿ ನಮ್ಮ ಪೂರ್ವಿಕರ ಜೀವನಾನುಭವದ ಅಭಿಪ್ರಾಯಗಳ ಸಮರ್ಥನೆ ಮತ್ತು ವಾಸ್ತವದಲ್ಲಿ ಕಸಗಳೇ ಎಲ್ಲೆಡೆ ಹೆಚ್ಚಿದ್ದು ಅದನ್ನು ಶುದ್ಧಗೊಳಿಸುವ ನಿಲುವಷ್ಟೆ.

ಕೆಲ ಹಾಸ್ಯ ವೃತ್ತಿಪರರು ತಾವು ದುಃಖದಲ್ಲಿದ್ದರೂ ತಮ್ಮ ಹಾಸ್ಯ ವೃತ್ತಿಯ ಮೂಲಕ ಇನ್ನೊಬ್ಬರನ್ನು ನಗಿಸಿ ತೃಪ್ತಿ ಕಾಣುತ್ತಿರುತ್ತಾರೆ ಮತ್ತು ತಾವು ಕಳೆದುಕೊಂಡ ಸಂತೋಷವನ್ನು ಇತರರ ಸಂತೋಷದಲ್ಲಿ ಕಂಡುಕೊಳ್ಳುತ್ತಿರುತ್ತಾರೆ. ಇತರರನ್ನು ನಗಿಸುವುದನ್ನೇ ತಮ್ಮ ಹೊಟ್ಟೆ ಪಾಡನ್ನಾಗಿಸಿಕೊಂಡು ನೈತಿಕತೆ ಇರುವ ಸಾಮಾಜಿಕ ಹಾಸ್ಯ ಸಂಗತಿಗಳನ್ನು ತೋರ್ಪಡಿಸಿ ಹೊಟ್ಟೆ ಹೊರೆಯುತ್ತಿರುತ್ತಾರೆ. ಈ ರೀತಿ ಹೊಟ್ಟೆ ಹೊರೆಯುವುದು ಅಪರಾಧವೇನಲ್ಲ. ಇನ್ನೊಬ್ಬರ ದುಃಖದಲ್ಲಿ; ಸಮಾಜದ ಸ್ವಾಸ್ಥ್ಯ ಕೆಡಿಸುವಲ್ಲಿ ತಮ್ಮ ಸ್ವಾರ್ಥ ಸಾಧಿಸುವುದನ್ನು ಕಾಣಬಯಸುವುದೊಂದೇ ಬಹುದೊಡ್ಡ ಅಪರಾಧ.

ಮೇಲೆ ತಿಳಿಸಿದ ಅಂಶಗಳ ಬೆನ್ನಲ್ಲೇ ಹೇಳುವುದಾದರೆ ಅಶ್ಲೀಲ ನಗೆ ಚಟಾಕಿಗಳನ್ನು ಹಾಸ್ಯ ಪ್ರಸಂಗಗಳಲ್ಲಿ ಹೆಚ್ಚಾಗಿ ತಂದು ಹಣ ಸಂಪಾದನೆಯ ಮಾರ್ಗಕ್ಕೆ ಇಳಿದಿರುವುದು ಬಹುವಾಗಿ ಈ ಸಿನಿಮಾ ಜಗತ್ತು ಮತ್ತು ದೂರದರ್ಶನ ಕಾರ್ಯಕ್ರಮಗಳು ಹಾಗೂ ಪ್ರಸ್ತುತ ದಶಮಾನದ ಸಾಮಾಜಿಕ ಜಾಲತಾಣಗಳ ಸ್ಫೋಟದಲ್ಲಿ ಕಾಣಬಹುದು. ಈ ಮಾಧ್ಯಮಗಳಲ್ಲಾಗುತ್ತಿರುವ ಈ ವಿಕೃತ ಬೆಳವಣಿಗೆ ಸಮಾಜದಲ್ಲಿ ಅತ್ಯಾಚಾರಗಳಾಗುತ್ತಿರುವುದಕ್ಕೆ ಪ್ರಮುಖ ಕಾರಣಗಳಲ್ಲಿ ಒಂದು ಎನ್ನಬಹುದು. ಕೆಟ್ಟ ಪ್ರಚೋದನಕಾರಿ ಅಶ್ಲೀಲ ಡ್ರಾಮಾಗಳು ಅಫೀಮಿನಂತೆ ಎಲ್ಲರಿಗೂ ಚಟವಾಗುತ್ತಿವೆ. ಈ ಚಟ ಒಳ್ಳೆಯದಲ್ಲ. ಈಗಿನ ಭಾಷೆಯಲ್ಲೇ ಹೇಳುವುದಾದರೆ ಡಬಲ್ ಮೀನಿಂಗ್ ಡೈಲಾಗ್‌ಗಳ ಬಳಕೆ, ಹೆಣ್ಣನ್ನು ಭೋಗದ ವಸ್ತುವಾಗಿ ತೋರ್ಪಡಿಸುವ ಸೀನ್'ಗಳು ಯುವ ಸಮುದಾಯವನ್ನು ದಿಕ್ಕೆಡಿಸುತ್ತಿವೆ. ಹಾಸ್ಯ ನಟರ ವೇಶದಲ್ಲಿರುವ ಕೊಚ್ಚೆ ಮನಸ್ಸಿನ ತಿಳಿಗೇಡಿಗಳನ್ನು ಸಮಾಜದ ಮುಖ್ಯವಾಹಿನಿಯಿಂದ ದೂರವಿಡದ ಹೊರತು ನೈತಿಕ ಸಮಾಜದ ನಿರ್ಮಾಣ ಅಸಾಧ್ಯ. ತಿಳಿದವರೇ ಮತ್ತು ಸಮಾಜದ ಮುಖ್ಯರೇ ಈ ವಿಕೃತ ಹಾದಿಯನ್ನು ತುಳಿದು ನಡೆಯುತ್ತಿರುವುದು ಅಪಾಯಕಾರಿ ಬೆಳವಣಿಗೆ. ಈ ಚಿಂತನೆಯಲ್ಲಿ ಜಾಗೃತ ಜನಾಂದೋಲನವಾಗಲಿ.

–ಮಂಜುನಾಥ ಬಿ.ಆರ್, ಮೊ: 8884684726

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಆಧ್ಯಾತ್ಮದಲ್ಲಿ ವಿಜ್ಞಾನ ಬೆರೆತು ಹೋಗಿದೆ

ಕೆಲ ಪ್ರಸಂಗದ ಉದಾಹರಣೆಯೊಂದಿಗೆ ಉಲ್ಲೇಖಿಸಿದ ಎಡಿಸಿ ಡಾ.ಬಿ.ಎಸ್.ಮಂಜುನಾಥಸ್ವಾಮಿ

ಮೈಸೂರು, ಅ.24(ಎಸ್‌ಪಿಎನ್)–ಆಧ್ಯಾತ್ಮದೊಂದಿಗೆ ವಿಜ್ಞಾನವೂ ಬೆರತುಕೊಂಡಿದೆ. ಪ್ರಸ್ತುತ ಆಧ್ಯಾತ್ಮವನ್ನು ಒಳಗೊಂಡಿರುವ ಸಮಾಜವನ್ನು ನಿರ್ಮಾಣ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್. ಮಂಜುನಾಥಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿಯ 2ನೇ ಮುಖ್ಯರಸ್ತೆಯಲ್ಲಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ವತಿಯಿಂದ ಜ್ಞಾನಪ್ರಕಾಶ ಭವನದಲ್ಲಿ ದೀಪಾವಳಿ ಹಬ್ಬದ ಬೆಳಕಿನ ಹಬ್ಬ–2022ರ ವಿಶೇಷ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಸ್ರೋದಲ್ಲಿ ರಾಕೆಟ್ ಉಡಾವಣೆಗೂ ಮುನ್ನ ಅಲ್ಲಿನ ವಿಜ್ಞಾನಿಗಳು ತಿರುಪತಿ, ಇಲ್ಲವೇ ಸ್ಥಳೀಯ ದೇವಸ್ಥಾನಗಳಲ್ಲಿ ಪೂಜೆ ಮಾಡಿಸಿ, ರಾಹುಕಾಲ, ಗುಳಿಕಾಲ ನೋಡಿ ರಾಕೆಟ್ ಉಡಾವಣೆ ಮಾಡುತ್ತಾರೆ. ಕೆಲವರ ವಿರೋಧದ ನಡುವೆಯೂ ಅಲ್ಲಿನ (ಇಸ್ರೋ) ವಿಜ್ಞಾನಿಗಳು ಈ ಕಾರ್ಯವನ್ನು ಮುಂದುವರೆಸಿದ್ದಾರೆ. ಇದನ್ನು ನೋಡಿದರೆ, ಆಧ್ಯಾತ್ಮ ಕ್ಷೇತ್ರದಲ್ಲಿ ವಿಜ್ಞಾನವೂ ಬೆರೆತುಕೊಂಡಿದೆ ಎಂಬುದು ನನ್ನ ಅನಿಸಿಕೆ ಎಂದರು.

ದೇಶಾದ್ಯಂತ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಶಾಖೆಗಳಿವೆ. ಈ ಶಾಖೆಗಳಲ್ಲಿ ಪ್ರತಿದಿನ ಆಧ್ಯಾತ್ಮ ಕುರಿತು ವಿಶೇಷ ಉಪನ್ಯಾಸಗಳನ್ನು ನಡೆಸುತ್ತಿದ್ದಾರೆ. ಈ ಶಾಖೆಗಳ ಮೂಲಕ ಆಧ್ಯಾತ್ಮ ಬಿಟ್ಟು ಬದುಕು ರೂಪಿಸಿಕೊಂಡಿರುವ ಇಂದಿನ ಯುವಕರನ್ನು ಆಧ್ಯಾತ್ಮದತ್ತ ಮತ್ತೆ ಕರೆತರುವ ಕೆಲಸ ಆಗಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ಮಾಧ್ಯಮಗಳಲ್ಲಿ ಪ್ರಕಟವಾಗುವ ವರದಿಗಳನ್ನು ನೋಡಿದರೆ ಸಂತರು, ಸನ್ಯಾಸಿಗಳು ತಮ್ಮ ಆಧ್ಯಾತ್ಮ ಜೀವನ ಬದಲಿಸಿ, ಅಪಾಯಕ್ಕೆ ಸಿಲುಕುತ್ತಿದ್ದಾರೆ. ಈ ಅಂಶ ಆಧ್ಯಾತ್ಮದಿಂದ ಯುವಕರನ್ನು ದೂರ ಸರಿಯಲು ಕಾರಣ ಇರಬಹುದು. ವಸ್ತುಸ್ಥಿತಿ ಹೀಗೆ ಮುಂದುವರೆದರೆ, ಮುಂದೆ ಯುವಕರು ಮತ್ತು ಇತರೆ ಸಾರ್ವಜನಿಕರು ಸಮಾಜದಲ್ಲಿ ಯಾರನ್ನು ಆದರ್ಶ ವ್ಯಕ್ತಿಗಳು ಎಂದು ನೆನಪಿಸಿಕೊಳ್ಳಬೇಕು ಎಂಬುದು ಗೊಂದಲಕಾರಿಯಾಗಿದೆ ಎಂದರು.

ಈಶ್ವರೀಯ ವಿವಿಯಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮ ಶಕ್ತಿಯನ್ನು ಒಂದಕ್ಕೊಂದು ಹೋಲಿಕೆ ಮಾಡುವ ಸಂದರ್ಭ ಸೃಷ್ಟಿಸಿದ್ದಾರೆ. ದೀಪಾವಳಿ ಸಂದರ್ಭದಲ್ಲಿ ದೀಪಗಳನ್ನು ಹಚ್ಚುತ್ತೇವೆ. ಅದೇ ಸಮಯಕ್ಕೆ ಮನೆಯಲ್ಲಿ ವಿದ್ಯುತ್ ದೀಪವನ್ನು ಹಾಕುತ್ತೇವೆ. ಅಂದರೆ, ಸಮಾಜದಲ್ಲೂ ಆಧ್ಯಾತ್ಮ ಮತ್ತು ಸಾಮಾಜಿಕ ಜೀವನದ ಎರಡರಲ್ಲೂ ಸಮತೋಲನ ಕಾಪಾಡುವ ಅವಶ್ಯಕತೆಯಿದೆ. ನಾನು ಸಹ ಸರ್ಕಾರಿ ಹುದ್ದೆಗೆ ಬರುವ ಪೂರ್ವದಲ್ಲಿ ಆಧ್ಯಾತ್ಮದತ್ತ ಒಲವು ಇತ್ತು ಈಗಲೂ ಮನಃಶಾಂತಿ ಬಯಸಿದಾಗ ಆಧ್ಯಾತ್ಮದ ಮೊರೆ ಹೋಗುತ್ತೇನೆ ಎಂದರು.

ಮೈಸೂರಿನಲ್ಲಿ 12 ಲಕ್ಷ ಜನಸಂಖ್ಯೆಯಿದೆ. ಇದರಲ್ಲಿ ಫೇಸ್‌ಬುಕ್ ಸ್ನೇಹಿತರು ಸೇರಿದಂತೆ ನಿಮಗೆಷ್ಟು ಜನ ಪರಿಚಯವಿದ್ದಾರೆ. ಅವರಲ್ಲಿ ಎಷ್ಟು ಜನ ನಿಮ್ಮನ್ನು ದ್ವೇಷಿಸುತ್ತಿದ್ದಾರೆ ಎಂಬುದನ್ನು ತಿಳಿಯಲು ಸಾಧ್ಯವೇ? ಎಂದು ಸಭಿಕರನ್ನು ಪ್ರಶ್ನಿಸಿದ ಅವರು, 12ನೇ ಶತಮಾನ ಶರಣ ದೇವರ ದಾಸಿಮಯ್ಯ, ದೇವರನ್ನೇ ಪ್ರಶ್ನಿಸಿದ ಸಂದರ್ಭ ವಿವರಿಸಿದರು.

ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ರೂಪಶ್ರೀ ಮಾತನಾಡಿ, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುತ್ತ, ಸದಾ ನಮ್ಮ ಜೊತೆಯಲ್ಲಿರುವವರನ್ನು, ಕತ್ತಲಿಂದ ಬೆಳಕಿನೆಡೆಗೆ ಹೋಗುವ ದಾರಿ ತೋರಬೇಕು. ಈ ನಿಟ್ಟಿನಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿ ಪದಾಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಸಾರ್ವಜನಿಕರೂ ಕೈ ಜೋಡಿಸಬೇಕು ಎಂದರು. ವೇದಿಕೆಯಲ್ಲಿ ಈಶ್ವರೀಯ ವಿವಿ ಮಾಧ್ಯಮ ವಿಭಾಗದ ಅಧ್ಯಕ್ಷೆ ರಾಜಯೋಗಿ ಬಿ.ಕೆ.ಕರುಣಾಜಿ, ಮೈಸೂರು ಉಪವಲಯದ ಸಂಚಾಲಕರಾದ ರಾಜಯೋಗಿ ಲಕ್ಷ್ಮೀಜಿ, ಮೇಯರ್ ಶಿವಕುಮಾರ್ ಇದ್ದರು.



ಮೈಸೂರು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ವತಿಯಿಂದ ಜ್ಞಾನಪ್ರಕಾಶ ಭವನದಲ್ಲಿ ದೀಪಾವಳಿ ಹಬ್ಬ ಬೆಳಕಿನ ಹಬ್ಬ–2022ರ ವಿಶೇಷ ಕಾರ್ಯಕ್ರಮವನ್ನು ಮೇಯರ್ ಶಿವಕುಮಾರ್ ಮತ್ತು ಎಡಿಸಿ ಡಾ.ಮಂಜುನಾಥ ಸ್ವಾಮಿ ಉದ್ಘಾಟಿಸಿದರು. ಈಶ್ವರೀಯ ವಿವಿಯ ಮಾಧ್ಯಮ ವಿಭಾಗದ ಅಧ್ಯಕ್ಷೆ ರಾಜಯೋಗಿ ಬಿ.ಕೆ.ಕರುಣಾಜಿ, ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ. ರೂಪಶ್ರೀ, ಉಪವಲಯದ ಸಂಚಾಲಕರಾದ ರಾಜಯೋಗಿ ಬಿ.ಕೆ.ಲಕ್ಷ್ಮೀಜಿ ಇದ್ದರು.

ಅ.27ರಂದು ನೂತನ ಡಿಸಿ ಅಧಿಕಾರ ಸ್ವೀಕಾರ



ಮೈಸೂರು, ಅ. 24(ಆರ್‌ಕೆ)– ಮೈಸೂರಿಗೆ ವರ್ಗಾವಣೆಗೊಂಡಿರುವ ನೂತನ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಅ.27ರಂದು ಬೆಳಗ್ಗೆ 10.30 ಗಂಟೆಗೆ ಅಧಿಕಾರ ವಹಿಸಿಕೊಳ್ಳುವರು. ಅಕ್ಟೋಬರ್ 26ರಂದು ಸಂಜೆ ಮೈಸೂರಿಗೆ ಆಗಮಿಸಲಿರುವ ರಾಜೇಂದ್ರ, ಮರುದಿನ (ಗುರುವಾರ) ಬೆಳಗ್ಗೆ 8.30 ಗಂಟೆಗೆ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದು ಬೆಳಗ್ಗೆ 10.30 ಗಂಟೆಗೆ ನಿರ್ಗಮಿತ ಡಿಸಿ ಡಾ.ಬಗಾದಿ ಗೌತಮ್ ಅವರಿಂದ ಅಧಿಕಾರ ಸ್ವೀಕರಿಸುವರು ಎಂದು ಮೂಲಗಳು ತಿಳಿಸಿವೆ.

ಜೆಡಿಎಸ್‌ಗೆ ನೇಮಕ



ಮೈಸೂರು, ಅ. 24– ಮೈಸೂರು ಜಿಲ್ಲೆ ವರುಣಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷರನ್ನಾಗಿ ನಂಜನಗೂಡು ತಾಲೂಕು ಬೊಕ್ಕಹಳ್ಳಿಯ ಪ್ರೊ. ಸುಬ್ಬಪ್ಪ ಅವರನ್ನು ನೇಮಕ ಮಾಡಲಾಗಿದೆ.

ಬೇಕಾಗಿದ್ದಾರೆ

SDJ ಗೋಲ್ಡ್ ಜ್ಯುಯಲ್ಲರಿಗೆ ಕೆಲಸಕ್ಕೆ Telecaller ಮತ್ತು Field executive boys ಬೇಕಾಗಿದ್ದಾರೆ.

ಸಂಬಳ: 20,000

9513066625

ಅ.30ರಂದು ಕುಣಿಗಲ್‌ನಲ್ಲಿ ಕಾರ್ಮಿಕರ ಸಮಾವೇಶ: ಮೈಸೂರು ಜಿಲ್ಲೆಯ 300ಕ್ಕೂ ಹೆಚ್ಚು ಕಾರ್ಮಿಕರು ಭಾಗಿ

ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಎಲ್.ಕೃಷ್ಣ

ಮೈಸೂರು, ಅ.24(ಆರ್‌ಕೆಬಿ)– ಕರ್ನಾಟಕ ಕಾರ್ಮಿಕ ಸಂಘದ ವತಿಯಿಂದ ಕಾರ್ಮಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಗಮನ ಸೆಳೆಯಲು ಅ.30ರಂದು ಕುಣಿಗಲ್ ಪಟ್ಟಣದ ಜಿಕೆಬಿಎಂಎಸ್ ಶಾಲಾ ಬಯಲು ರಂಗಮಂದಿರದಲ್ಲಿ ಆಯೋಜಿಸಲಾಗಿರುವ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಸಮಾವೇಶಕ್ಕೆ ಮೈಸೂರು ಜಿಲ್ಲೆಯಿಂದ 300ಕ್ಕೂ ಹೆಚ್ಚು ಮಂದಿ ತೆರಳುತ್ತಿರುವುದಾಗಿ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಎಲ್.ಕೃಷ್ಣ ತಿಳಿಸಿದ್ದಾರೆ.

ಇಂದಿನ ದಿನ ಬಳಕೆ ವಸ್ತುಗಳ ಬೆಲೆಯೇರಿಕೆ, ದುಬಾರಿಯಾಗಿರುವ ಕಚ್ಚಾ ವಸ್ತುಗಳು, ಕಾರ್ಮಿಕ ಇಲಾಖೆಯ ದ್ವಂದ್ವ ನೀತಿ, ಕಾರ್ಮಿಕರಿಗೆ ನೋಂದಣಿ ಮಾಡಲು ಸಿಎಸ್‌ಸಿ ಕೇಂದ್ರಗಳಲ್ಲಿ 500 ರೂ.ನಿಂದ ಸಾವಿರದವರೆಗೆ ದುಬಾರಿ ದರ ವಸೂಲಿ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುವುದು ಹಾಗೂ ಸರ್ಕಾರದ ಸೌಲಭ್ಯಗಳನ್ನು ಶೀಘ್ರವಾಗಿ ದೊರಕಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ನಡೆಯುತ್ತಿರುವ ಈ ಸಮಾವೇಶಕ್ಕೆ ಕಟ್ಟಡ ಕಾರ್ಮಿಕರು, ಆಟೋ ಚಾಲಕರು, ಬೀದಿಬದಿ ವ್ಯಾಪಾರಿಗಳು ಇನ್ನಿತರೆ ಕಾರ್ಮಿಕರು ತೆರಳುತ್ತಿರುವುದಾಗಿ ಅವರು ತಿಳಿಸಿದ್ದಾರೆ.

ಮನೆ ಬಾಡಿಗೆಗಿದೆ

60x40 ನೆಲ ಮಳಿಗೆ 2BHK, ನಂ.24, ಎ & ಬಿ ಬ್ಲಾಕ್, 1ನೇ ಮುಖ್ಯರಸ್ತೆ, ರಾಮಕೃಷ್ಣನಗರ, ಮೈಸೂರು – 570022

9945409432 / 9886888819

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

PUBLIC NOTICE

Our client Dr. Amarnath C.B., S/o Mr. Badrinath CA, Mrs. Akshitha M. W/o Mr. Madhusudhan C, and Mr. Munikrishna BV, S/o Late Sri Venkataramanappa are desirous to purchase the schedule property mentioned here below from Mr. Nagarajaiah, S/o Late Sri Sidhegowda who is the owner of the schedule property.

Notice is hereby given to the general public that any person/s other than the owners asserting any right / title / charge / lien / claims and any interest whatsoever in respect of the schedule property are hereby called upon to submit to the undersigned.

The said claim / objections must be in writing together with documentary proof of such claims and objections so must reach us to address given below within a period of 15 days from the date of publication of this notice.

If no such claim / objections are received it shall be deemed that no one else other than the owner of the schedule property and our client would be at the liberty to proceed with the said transaction in connection with the schedule property.

PROPERTY SCHEDULE

All the piece and parcel of the immovable property (agricultural land) bearing Survey Nos. 129/3 (1 acre and 22 gunta), 131/1 (1 acre and 20 gunta), 131/2 (1 acre and 20 gunta) and 135/3 (1 acre and 29 gunta) situated at Basavattige Village, Doddakowlande Hobli, Nanjangud Taluk, Mysore District, Karnataka.

Sd/- G. Anantha Kumar, Advocate
Unite No. 210, 1st Floor, "Vishal Tower", No. 18/8, 16th Cross,
1st Main, S.R. Nagar, Bengaluru-560 027
Mob: 9945336543, 9686623376, 9986047978



ಬೆಂಗಳೂರು ಫ್ರೀಡಂಪಾರ್ಕ್‌ನಲ್ಲಿ SC, ST ಮೀಸಲಾತಿ ಹೆಚ್ಚಳಕ್ಕಾಗಿ ಧರಣಿನಿರತ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಮೈಸೂರು ಜಿಲ್ಲಾ ನಾಯಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ. ನಾಗಲಿಂಗಪ್ಪ, ಚಾಮರಾಜನಗರ ಜಿಲ್ಲಾ ನಾಯಕ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಮುಖಂಡರಾದ ಮಂಜು ನಾಯಕ, ಚಂದ್ರು ಅಭಿನಂದಿಸಿದರು.

ವಿದೇಶಿ ಕರೆನ್ಸಿ ನೀಡುವ ನೆಪದಲ್ಲಿ ಅಡಿಕೆ ವ್ಯಾಪಾರಿಗೆ ವಂಚನೆ ಯತ್ನ: ಪಶ್ಚಿಮ ಬಂಗಾಳದ ಇಬ್ಬರು ಪೊಲೀಸ್ ವಶಕ್ಕೆ

ಪಿರಿಯಾಪಟ್ಟಣ,ಅ.24–ವಿದೇಶಿ ಕರೆನ್ಸಿ ನೀಡುವುದಾಗಿ ವಂಚಿಸಲು ಯತ್ನಿಸಿದ ಪಶ್ಚಿಮ ಬಂಗಾಳದ ಮೂಲದ ಇಬ್ಬರು ವಂಚಕರನ್ನು ಅಡಿಕೆ ವ್ಯಾಪಾರಿಯೊಬ್ಬರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಪಶ್ಚಿಮ ಬಂಗಾಳದ ಶೇಕ್ ಮೀರಜ್(38) ಮತ್ತು ಶೇಕ್ ರುಬೆಲ್(28) ಬಂಧಿತ ವಂಚಕರಾಗಿದ್ದು, ಇವರು ಪಿರಿಯಾಪಟ್ಟಣದ ಅಡಿಕೆ ವ್ಯಾಪಾರಿ ರವಿ(43) ಅವರಿಗೆ 8272905394 ಸಂಖ್ಯೆಯಿಂದ ಕರೆಮಾಡಿ ತಮ್ಮ ಬಳಿ ಸಾಕಷ್ಟು ವಿದೇಶಿ ಕರೆನ್ಸಿ ನೋಟುಗಳಿವೆ. ಸಾವಿರ ರೂ. ಮೌಲ್ಯದ ನೋಟಿಗೆ ನೀವು 200 ರೂ. ಕೊಟ್ಟರೆ ಸಾಕು ನಿಮಗೆ 1 ನೋಟಿಗೆ 800 ರೂ. ಲಾಭ ಬರುತ್ತದೆ ಎಂದು ಆಮಿಷವೊಡ್ಡಿದ್ದಾರೆ.

ವಿದೇಶಿ ಕರೆನ್ಸಿ ಪಡೆಯಲು ರವಿ ಒಪ್ಪಿದ ನಂತರ ಅವರನ್ನು ಪಿರಿಯಾಪಟ್ಟಣ ಟೌನ್‌ನ ತಾತನಹಳ್ಳಿ ಗೇಟ್ ಬಳಿ ಬರಲು ಹೇಳಿದ್ದಾರೆ. ಅಲ್ಲಿಗೆ ಅವರು ಹೋದಾಗ ಬ್ಯಾಗ್ ಹಿಡಿದಿದ್ದ ವಂಚಕರು, ಕೈಯ್ಯಲ್ಲಿ ಒಂದು ವಿದೇಶಿ ಕರೆನ್ಸಿ ಇಟ್ಟುಕೊಂಡು ಭಾರತದ ನೋಟುಗಳನ್ನು ಕೊಟ್ಟರೆ ವಿದೇಶಿ ಕರೆನ್ಸಿ ನೀಡುವುದಾಗಿ ಹೇಳಿದ್ದಾರೆ. ಆದರೆ, ರವಿಯವರು ಬ್ಯಾಗ್‌ನಲ್ಲಿರುವ ವಿದೇಶಿ ಕರೆನ್ಸಿಯನ್ನು ತೋರಿಸುವಂತೆ ಒತ್ತಾಯಿಸಿದಾಗ ಅವರು ಹಿಂದೇಟು ಹಾಕಿದ್ದಾರೆ.

ಇದರಿಂದ ಅನುಮಾನಗೊಂಡ ರವಿ, ಪಕ್ಕದಲ್ಲೇ ಇದ್ದ ಕ್ಯಾಂಟೀನ್‌ನ ಮಂಜುನಾಥ, ಹಣ್ಣಿನ ವ್ಯಾಪಾರಿ ಅಖಿಲ್ ಷರೀಫ್ ಅವರ ಸಹಕಾರದಿಂದ ವಂಚಕರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ವಂಚಕರ ಬಳಿ ಇದ್ದ ಬ್ಯಾಗ್‌ನಲ್ಲಿ ವಿದೇಶಿ ಕರೆನ್ಸಿ ಬದಲು ಪೇಪರ್‌ಗಳಲ್ಲಿ ಬಟ್ಟೆ ಸೋಪ್ ಸುತ್ತಿ ಇಟ್ಟಿದ್ದುದು ಕಂಡುಬಂದಿದೆ. ವಂಚಕರನ್ನು ಬಂಧಿಸಿದ ಪೊಲೀಸರು ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಸರಸ್ವತಿ

ಇವರು ದಿ. 17.10.2022ನೇ ಸೋಮವಾರದಂದು ದೈವಾಧೀನರಾಗಿದ್ದು ತತ್ಸಂಬಂಧ ಉತ್ತರಕ್ರಿಯಾದಿ ಕಾರ್ಯವನ್ನು ದಿ. 27.10.2022ನೇ ಗುರುವಾರದಂದು ಮಧ್ಯಾಹ್ನ 12.30 ಗಂಟೆಗೆ ನಮ್ಮ ಸ್ವಗೃಹ # 204, ಅನುಗ್ರಹ, 1ನೇ ಹಂತ, 1ನೇ ಫೇಸ್, 1ನೇ ಕ್ರಾಸ್, ಗಾಯತ್ರಿಪುರಂ, ಮೈಸೂರುಇಲ್ಲಿ ಏರ್ಪಡಿಸಲಾಗಿದೆ. ಇದನ್ನೇ ಆಹ್ವಾನಪತ್ರಿಕೆ ಎಂದು ಪರಿಗಣಿಸಿ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಭೋಜನ: ಮ. 2 ಗಂಟೆಗೆ

ಇಂತಿ ದುಃಖತಪ್ತರು: ಆರ್. ನಾಗರಾಜ ಹಾಗೂ ಕುಟುಂಬವರ್ಗದವರು

ಅಪರಿಚಿತ ವ್ಯಕ್ತಿ ಹತ್ಯೆ ಪ್ರಕರಣ ದಾಖಲು

ಮೈಸೂರು, ಅ. 24– ಅಸಹಜವಾಗಿ ಸಾವನ್ನಪ್ಪಿದ್ದ ಅಪರಿಚಿತ ವ್ಯಕ್ತಿ ಕೊಲೆಯಾಗಿದ್ದಾನೆ ಎಂದು ನಾಲ್ಕು ವರ್ಷದ ನಂತರ ಮರಣೋತ್ತರ ಪರೀಕ್ಷಾ ವರದಿ ಆಧರಿಸಿ ಉದಯಗಿರಿ ಠಾಣಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.


ವಿವರ: ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪಕ್ಕದ ದೊಡ್ಡ ಮೋರಿಯಲ್ಲಿ 2019ರ ಮಾರ್ಚ್ 3ರಂದು 30ರಿಂದ 40 ವರ್ಷ ವಯಸ್ಸಿನ ವ್ಯಕ್ತಿಯ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ದೇಹ ಊದಿದಂತೆ ಕಂಡುಬಂದಿದ್ದು, ಹಲವೆಡೆ ಬೊಬ್ಬೆಗಳು ಬಂದಿತ್ತು ದೇಹವನ್ನು ವಶಪಡಿಸಿಕೊಂಡ ಪೊಲೀಸರು, ಸಾವಿನ ಕಾರಣ ತಿಳಿಯಲು ಮೈಸೂರು ಮೆಡಿಕಲ್ ಕಾಲೇಜ್ ವೈದ್ಯಾಧಿಕಾರಿಗಳಿಗೆ ಕಳುಹಿಸಿದ ನಂತರ ಮೃತನ ವಾರಸುದಾರರು ಪತ್ತೆಯಾಗದ ಕಾರಣ ಪೊಲೀಸರೇ ಜೋಡಿ ತೆಂಗಿನ ಮರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಹೇಮಂತಕುಮಾರ್‌ಗೆ ಯುಕೆ ಪ್ರಶಸ್ತಿ



ಮೈಸೂರು, ಅ. 24(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ. ಹೇಮಂತಕುಮಾರ್ ಅವರಿಗೆ ಯುಕೆ ಎಕ್ಸಲೆನ್ಸ್ ಪ್ರಶಸ್ತಿ ಲಭಿಸಿದೆ. ಶಿಕ್ಷಣ ಕ್ಷೇತ್ರ, ಮಾನವ ಅಭಿವೃದ್ಧಿ, ಸಾಮಾಜಿಕ ಪರಿಣಾಮ ಹಾಗೂ ಪರಿವರ್ತನೆಯಲ್ಲಿ ಸಲ್ಲಿಸಿದ ವಿಶೇಷ ಸೇವೆಗಾಗಿ ಸೆಂಟರ್ ಫಾರ್ ಕಾನ್ಸಿಯಸ್ ಅವೇರ್‌ನೆಸ್ ಕೊಡಮಾಡುವ 2022ರ ಯುಕೆ ಅವಾರ್ಡ್ ಆಫ್ ಎಕ್ಸಲೆನ್ಸ್ ಅನ್ನು ಪ್ರೊ. ಹೇಮಂತಕುಮಾರ್ ಅವರಿಗೆ ನೀಡುತ್ತಿದ್ದು, ಅ.29ರಂದು ಬೆಂಗಳೂರಿನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.







ಮೈಸೂರು ಮಿತ್ರ ಮಂಗಳವಾರ 25 ಅಕ್ಟೋಬರ್ 2022

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಭ್ರಷ್ಟಾಚಾರ ತನಿಖೆಗೆ ಆಗ್ರಹಿಸಿ ಸಿಐಟಿಯು ಪ್ರತಿಭಟನೆ



ಸಿದ್ದಾಪುರ, ಅ.24– ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕೋಟ್ಯಂತರ ರೂ. ಭ್ರಷ್ಟಾಚಾರ ನಡೆದಿದ್ದು ಲೋಕಾಯುಕ್ತದಿಂದ ತನಿಖೆ ನಡೆಸುವಂತೆ ಒತ್ತಾಯಿಸಿ ಸಿಐಟಿಯು ಕಾರ್ಮಿಕ ಸಂಘಟನೆ ನೆಲ್ಯಹುದಿಕೇರಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕ ಸಂಘಟನೆಯ (ಸಿಐಟಿಯು) ಅಧ್ಯಕ್ಷ ಎ.ಸಿ ಸಾಬು ಮಾತನಾಡಿ, ದುರಾಡಳಿತದ ಸರಕಾರದಲ್ಲಿ ಖಜಾನೆ ಖಾಲಿಯಾಗಿರುವ ಕಾರಣದಿಂದ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಹಣದುರುಪಯೋಗ ಪಡಿಸುವ ಹುನ್ನಾರ ನಡೆಯುತ್ತಿದ್ದು, ಇದರ ವಿರುದ್ಧ ರಾಜ್ಯಾದ್ಯಂತ ಸಿಡಬ್ಲ್ಯೂಎಫ್ಐ ಹಾಗೂ ಸಿಐಟಿಯು ಸಂಘಟನೆಯಿಂದ ಪ್ರತಿಭಟನೆ ನಡೆಸಲಾಗುತ್ತಿದೆ. ಇದರ ಭಾಗವಾಗಿ ನೆಲ್ಯಹುದಿಕೇರಿಯಲ್ಲಿ ಪ್ರತಿಭಟನೆ ನಡೆಸಲಾಗಿದೆ.

ಕೊರೊನಾ ಸಂದರ್ಭದಲ್ಲಿ ಸರ್ಕಾರ ಕಟ್ಟಡ ಕಾರ್ಮಿಕರಿಗೆ ಘೋಷಿಸಿದ್ದ ಸಹಾಯಧನ, ಶೈಕ್ಷಣಿಕ, ಚಿಕಿತ್ಸೆ, ಮನೆ ನಿರ್ಮಾಣ ಸಹಾಯಧನ ಕಾರ್ಮಿಕರಿಗೆ ಲಭಿಸಿಲ್ಲ.

ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಈಗಾಗಲೇ 12 ಸಾವಿರ ಕೋಟಿ ಹಣವಿದ್ದು ಇದು ಕಾರ್ಮಿಕರ ಬೆವರಿನ ಹಣವಾಗಿದ್ದು ಕಾರ್ಮಿಕರ ಅಭಿವೃದ್ಧಿಗೆ ಸೂಚಿಸಿದ 19 ಸೌಲಭ್ಯಗಳಿಗೆ ಮಾತ್ರ ಬಳಸ ಬೇಕಾಗಿದೆ. ಆದರೆ ಸರ್ಕಾರ ಪ್ರಚಾರ ಗಿಟ್ಟಿಸಿಕೊಳ್ಳುವ ಸಲುವಾಗಿ ಜಾಹೀರಾತುಗಳ ಮೂಲಕ ಸರ್ಕಾರ ಟೂಲ್‌ಕಿಟ್ ಹೆಸರಿನಲ್ಲಿ ಕಾರ್ಮಿಕರಿಗೆ ಕಳಪೆ ಗುಣಮಟ್ಟದ ಸಲಕರಣೆಯನ್ನು ವಿತರಿಸಿ ಕೋಟ್ಯಂತರ ರೂ. ದುರುಪಯೋಗವಾಗಿದ್ದು ಸಮಗ್ರ ತನಿಖೆಗೆ ಆಗ್ರಹಿದರು.

ರಾಜ್ಯದಲ್ಲಿ 48 ಲಕ್ಷ ಕಟ್ಟಡ ಕಾರ್ಮಿಕರು ನೋಂದಣಿಯಾಗಿದ್ದು, ಉಚಿತ ಬಸ್ ಪಾಸ್ ಹೆಸರಿನಲ್ಲಿ ಮಂಡಳಿಯಿಂದ ಒಬ್ಬ ಕಾರ್ಮಿಕನಿಗೆ 1400 ರಂತೆ ದೊಡ್ಡ ಮೊತ್ತದ ಹಣವನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡುವ ಹುನ್ನಾರ ನಡೆಸಿರುವ ಸರಕಾರದ ವಿರುದ್ಧ ಮುಂದಿನ ದಿನಗಳಲ್ಲಿ ರಾಜ್ಯ ವ್ಯಾಪ್ತಿ ಜನಾಂದೋಲನ ರೂಪಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಅಧ್ಯಕ್ಷ ಪಿ.ಆರ್.ಭರತ್, ಪ್ರಮುಖರಾದ ರಮೇಶ್, ನೆಲ್ಯಹುದಿಕೇರಿ ಕಟ್ಟಡ ಕಾರ್ಮಿಕರ ವಲಯ ಅಧ್ಯಕ್ಷ ಮೋಣಪ್ಪ, ಕಾರ್ಯದರ್ಶಿ ಉದಯ, ಸನ್ನಿ, ಬಾಬು, ಶಿವಪ್ಪ ನಾಯಕ, ಚಂದ್ರ, ಶಿವರಾಮ, ಮೊದಲಾದವರು ಹಾಜರಿದ್ದರು.

ವಿದ್ಯಾರ್ಥಿ ಆತ್ಮಹತ್ಯೆ

ಮಡಿಕೇರಿ, ಅ.24– ದಕ್ಷಿಣ ಕೊಡಗಿನ ಗೋಣಿಕೊಪ್ಪಲಿನ ಪ್ರತಿಷ್ಠಿತ ವಿದ್ಯಾಸಂಸ್ಥೆಯೊಂದರ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣಾಗಿರುವ ಬಗ್ಗೆ ವರದಿಯಾಗಿದೆ.

ಬಾಳೆಲೆ ಗ್ರಾಮ ನಿವಾಸಿ ಟಿ.ಲೆಹರ್ ಮತ್ತು ಸುಷ್ಮಾ ದಂಪತಿ ಪುತ್ರ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ನಿಹಾಲ್(14) ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿ.

ನಿಹಾಲ್‌ಗೆ ಕೆಲ ಸಮಯದಿಂದ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದ್ದು ಚಿಕಿತ್ಸೆ ಪಡೆಯುತ್ತಿದ್ದ ಎನ್ನಲಾಗುತ್ತಿದೆ. ಇಂದು ಮಧ್ಯಾಹ್ನ ತನ್ನ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭ ನೇಣು ಬಿಗಿದು ಸಾವಿಗೆ ಶರಣಾಗಿದ್ದು, ಆತ್ಮಹತ್ಯೆಗೆ ಸ್ಪಷ್ಟ ಕಾರಣಗಳು ತಿಳಿದು ಬಂದಿಲ್ಲ. ಘಟನೆಗೆ ಸಂಬಂಧಿಸಿದಂತೆ ಗೋಣಿಕೊಪ್ಪಲು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಗೋಣಿಕೊಪ್ಪಲು ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಗಿದೆ.

ಲೈನ್ ಮನೆ ಕಾರ್ಮಿಕರಿಗೆ ನಿವೇಶನಕ್ಕಾಗಿ ಬುಡಕಟ್ಟು ಸಮುದಾಯಗಳ ಒಕ್ಕೂಟ ಆಗ್ರಹ



ಮಡಿಕೇರಿ,ಅ.24– ಕೊಡಗು ಜಿಲ್ಲಾ ವ್ಯಾಪ್ತಿಯ ಕಾಫಿ ತೋಟಗಳ ಲೈನ್ ಮನೆಗಳಲ್ಲಿ ವಾಸವಿರುವ 4500 ಕುಟುಂಬಗಳನ್ನು ಸರ್ಕಾರ ಗುರುತಿಸಿದ್ದು, ಇವರಿಗೆ ಆದಷ್ಟು ಶೀಘ್ರ ನಿವೇಶನಗಳನ್ನು ನೀಡಿ, ಅವರ ಬದುಕಿಗೆ ನೆಲೆ ಒದಗಿಸಬೇಕು. ತಪ್ಪಿದಲ್ಲಿ ಜಿಲ್ಲೆ ಮತ್ತು ರಾಜ್ಯಾದ್ಯಂತ ತೀವ್ರ ಪ್ರತಿಭಟನೆಗೆ ಮುಂದಾಗಬೇಕಾಗುತ್ತದೆ ಎಂದು ಅರಣ್ಯ ಮೂಲ ಬುಡಕಟ್ಟು ಸಮುದಾಯಗಳ ಒಕ್ಕೂಟದ ಕಾರ್ಯದರ್ಶಿ ಶೈಲೇಂದ್ರ ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ ಜಿಲ್ಲೆಯ 3 ತಾಲೂಕುಗಳಲ್ಲಿರುವ ನಿವೇಶನ ರಹಿತ ಲೈನ್ ಮನೆಯ ಕಾರ್ಮಿಕರನ್ನು ಗುರುತಿಸಿದೆ. ಹೀಗಿದ್ದೂ ನಮ್ಮ ಅಂದಾಜಿನಂತೆ ಜಿಲ್ಲಾ ವ್ಯಾಪ್ತಿಯಲ್ಲಿ 10 ಸಾವಿರಕ್ಕೂ ಹೆಚ್ಚಿನ ಕಾರ್ಮಿಕರು ಲೈನ್ ಮನೆಗಳಲ್ಲಿ ಸಂಕಷ್ಟದ ಬದುಕನ್ನು ನಡೆಸುತ್ತಿರುವುದಾಗಿ ತಿಳಿಸಿದರು.

ಪ್ರಸ್ತುತ ನಿವೇಶನಕ್ಕೆ ಆಗ್ರಹಿಸಿ ದಕ್ಷಿಣ ಕೊಡಗಿನ ಮಾಯಮುಡಿಯಲ್ಲಿ 31 ಕಾರ್ಮಿಕ ಕುಟುಂಬಗಳು ನಡೆಸುತ್ತಿರುವ ಹೋರಾಟಕ್ಕೆ 84 ದಿನಗಳು ಕಳೆದಿದೆ. ಹೀಗಿದ್ದೂ ಅವರ ಕೂಗಿಗೆ ಜಿಲ್ಲಾಡಳಿತವಾಗಲಿ, ಸರ್ಕಾರವಾಗಲಿ ಸ್ಪಂದಿಸಿಲ್ಲವೆಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಲೈನ್ ಮನೆಗಳಲ್ಲಿರುವ ನಿವೇಶನ ರಹಿತ ಬಡ ಕೂಲಿ ಕಾರ್ಮಿಕರ ಸಂಕಷ್ಟಗಳಿಗೆ ವಿರಾಜಪೇಟೆ ಕ್ಷೇತ್ರದ ಶಾಸಕ ಕೆ.ಜಿ. ಬೋಪಯ್ಯ ಅವರು ಸ್ಪಂದಿಸಬೇಕು ಮತ್ತು ಅವರ ಬೇಡಿಕೆಗಳನ್ನು ಪರಿಗಣಿಸ ಬೇಕೆಂದು ಒತ್ತಾಯಿಸಿದರು.

359 ಎಕರೆ ಜಾಗ ಗುರುತು: ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ನಿವೇಶನ ರಹಿತ ಬಡ ಕೂಲಿ ಕಾರ್ಮಿಕರಿಗೆ ನೀಡಲು ಜಿಲ್ಲಾಡಳಿತ 359 ಎಕರೆ ಜಾಗವನ್ನು ಗುರುತಿಸಿದೆ. ಆದರೆ, ಇದನ್ನು ವಿತರಿಸುವಲ್ಲಿ ವಿಳಂಬ ಧೋರಣೆ ತಳೆದಿದೆ. ಕಳೆದ 2016–17ನೇ ಸಾಲಿನಲ್ಲಿ 116 ಕುಟುಂಬಗಳಿಗೆ ಕುಂದ ಗ್ರಾಮದಲ್ಲಿ 6.20 ಎಕರೆ ಪ್ರದೇಶದಲ್ಲಿ ಮಾಡಿರುವ ನಿವೇಶನಗಳನ್ನು ವಿತರಿಸಿದ್ದನ್ನು ಹೊರತುಪಡಿಸಿದರೆ, ಉಳಿದ ಸಹಸ್ರಾರು ಮಂದಿ ಕಾರ್ಮಿಕರಿಗೆ ನೆಲೆ ಒದಗಿಸಲು ಅಗತ್ಯ ಕ್ರಮಗಳನ್ನು ಕೈಗೊಂಡಿಲ್ಲವೆಂದು ಆರೋಪಿಸಿದರು.

ಮಾನವ ಹಕ್ಕಿನ ಉಲ್ಲಂಘನೆ: ಅತ್ಯಂತ ಹೀನಾಯ ಬದುಕು ನಡೆಸುತ್ತಿರುವ ಲೈನ್ ಮನೆಯ ಕಾರ್ಮಿಕರ 'ನಿವೇಶನ' ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸದ ಸರ್ಕಾರ ಮಾನವ ಹಕ್ಕುಗಳನ್ನು ಉಲ್ಲಂಘಿಸಿದೆ. ಬಡ ಕೂಲಿ ಕಾರ್ಮಿಕರಿಗೆ ನಿವೇಶನಗಳನ್ನು ಒದಗಿಸಲು ಜಾತಿ, ವಾಸದ ದೃಢೀಕರಣ, ಆದಾಯ ದೃಢೀಕರಣ ಸೇರಿದಂತೆ ಹತ್ತು ಹಲ ದಾಖಲೆಗಳನ್ನು ಕೇಳಲಾಗುತ್ತಿದೆ. ಒಂದು ಹೊತ್ತಿನ ಕೂಳಿಗೆ ಪರದಾಡುತ್ತಾ ಕೂಲಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು ಈ ಎಲ್ಲಾ ದಾಖಲೆಗಳನ್ನು ಒದಗಿಸುವುದಾದರು ಹೇಗೆಂದು ಪ್ರಶ್ನಿಸಿದರು. ಸ್ಥಳ ಪರಿಶೀಲನೆ ಮತ್ತು ಹೇಳಿಕೆ ಆಧಾರದಲ್ಲಿ ಬುಡಕಟ್ಟು ಸಮುದಾಯದವರು ಎನ್ನುವುದನ್ನು ಖಚಿತಪಡಿಸಿಕೊಂಡು, ಅಂತಹ ಬಡ ಕಾರ್ಮಿಕ ಕುಟುಂಬಗಳಿಗೆ ನಿವೇಶನ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿದರು.

ಭೂಮಿ ಲಭ್ಯವಿಲ್ಲದ ಪ್ರದೇಶದಲ್ಲಿ ಖಾಸಗಿಯವರಿಂದ ಸರ್ಕಾರ ಭೂಮಿ ಖರೀದಿಸಿ ನಿವೇಶನ ಒದಗಿಸಲು ಮುಂದಾಗಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಜಿಲ್ಲಾ ಸಂಚಾಲಕರಾದ ಬೆಳ್ಳಿ, ಸಂಚಾಲಕಿ ಮಲ್ಲಿಗೆ, ಬುಡಕಟ್ಟು ಕಾರ್ಮಿಕ ಸಂಘದ ಅಧ್ಯಕ್ಷ ವೈ.ಬಿ. ಗಪ್ಪು ಹಾಜರಿದ್ದರು.

ಮಹಿಳೆಯರ ಮೇಲೆ ದೌರ್ಜನ್ಯ ಬಿಜೆಪಿ ಸಂಸ್ಕೃತಿ

ಜಿಲ್ಲಾ ಕಾಂಗ್ರೆಸ್ ವಕ್ತಾರೆ ಸರಿತಾ ಪೂಣಚ್ಚ



ಸಿದ್ದಾಪುರ, ಅ.24– ಗುಂಡ್ಲುಪೇಟೆಯಲ್ಲಿ ಸಚಿವ ವಿ.ಸೋಮಣ್ಣ ಮಹಿಳೆಗೆ ಕಪಾಳಮೋಕ್ಷ ಮಾಡಿದ ವಿಚಾರ ರಾಜ್ಯವೇ ತಲೆತಗ್ಗಿಸುವಂತಾಗಿದ್ದು, ಇದು ಬಿಜೆಪಿಯವರ ಮಹಿಳಾ ದೌರ್ಜನ್ಯದ ಸಂಸ್ಕೃತಿಯನ್ನು ತೋರಿಸುತ್ತದೆ ಎಂದು ಕೆಪಿಸಿಸಿ ಸದಸ್ಯೆ ಹಾಗೂ ಕೊಡಗು ಕಾಂಗ್ರೆಸ್ ವಕ್ತಾರೆ ಕೇಚಮಾಡ ಸರಿತಾ ಪೂಣಚ್ಚ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಹಿಳೆಯರು ನೆಮ್ಮದಿಯಾಗಿ ನಡೆದಾಡಲೂ ಸಾಧ್ಯವಾಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ಮಹಿಳೆಯರು ನ್ಯಾಯ ಕೇಳಲು ಹೋದ ಸಂದರ್ಭದಲ್ಲಿ ಅನುಚಿತವಾಗಿ ವರ್ತನೆ ಮಾಡುವುದರ ಮೂಲಕ ಹಲ್ಲೆ ಮಾಡುವ ಹೀನಾಯ ಸಂಸ್ಕೃತಿಯನ್ನು ಬೆಳೆಸಿಕೊಂಡಿರುವುದು ನಾಚಿಕೆಗೇಡಿನ ವಿಷಯವಾಗಿದೆ.

ಹಲವು ವರ್ಷಗಳಿಂದಲೂ ಸಂಕಷ್ಟದ ಜೀವನ ನಡೆಸುತ್ತಿರುವ ಮಹಿಳೆ ಸಮಸ್ಯೆ ಹೇಳಿಕೊಳ್ಳಲು ಮುಂದಾದಾಗ ಎಲ್ಲರ ಕಣ್ಣೆದುರಲ್ಲೇ ಕಪಾಳ ಮೋಕ್ಷ ಮಾಡಿ ಅವಮಾನಿಸಿರುವ ವೀಡಿಯೊ ವೈರಲ್ ಆಗುತ್ತಿದ್ದಂತೆಯೇ ಮಹಿಳೆ ಮೇಲೆ ದೌರ್ಜನ್ಯ ಖಂಡನೆ ರಾಜ್ಯಾದ್ಯಂತ ವ್ಯಕ್ತವಾಗುತ್ತಿರುವ ಸಂದರ್ಭದಲ್ಲೇ ಮಹಿಳೆಗೆ ಸೌಲಭ್ಯ ಕಲ್ಪಿಸುವ ಆಮಿಷವೊಡ್ಡಿ ಸಚಿವರು ಹಲ್ಲೆ ಮಾಡಿಲ್ಲ ಎನ್ನುವ ಹೇಳಿಕೆಯನ್ನು ಪಡೆದು ತಪ್ಪನ್ನು ಮರೆಮಾಚಲು ಯತ್ನಿಸುತ್ತಿರುವ ಬಿಜೆಪಿಯ ಮತ್ತೊಂದು ಸುಳ್ಳು ಹೇಳಿಕೆಯು ಬಹಿರಂಗವಾಗಿದೆ ಎಂದು ಸರಿತಾ ಹೇಳಿದ್ದಾರೆ.

ಬದ್ಧತೆಯಿಂದ ಮೈಷುಗರ್ ನಡೆಸಲು ಸಿಎಂ ಇಂಗಿತ



ಮಂಡ್ಯ ಅ.24– ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಬದ್ಧತೆಯಿಂದ ನಡೆಸಬೇಕೆಂಬ ಮಹದಾಸೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೊಂದಿದ್ದು, ಮುಂದಿನ ಮೇ ಬಳಿಕ ಕೋಜನ್ ಶುರು ಮಾಡಲು ಸಿಎಂ ಒಪ್ಪಿದ್ದು, ಮೈಷುಗರ್ ಲಾಭದಾಯಕವಾಗಿ ನಡೆಯಲಿದೆ ಎಂಬ ವಿಶ್ವಾಸವಿದೆ. ಜೊತೆಗೆ ಶೀಘ್ರವೇ ಎಥನಾಲ್ ಘಟಕ ಸಹ ಸ್ಥಾಪನೆ ಮಾಡಲಿದ್ದೇವೆ ಎಂದು ಮುಖ್ಯಮಂತ್ರಿಗಳ ಕಾರ್ಯದರ್ಶಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಮ್ ರಾಯಪುರ ತಿಳಿಸಿದರು.

ಸೋಮವಾರ ನಗರದ ಕರ್ನಾಟಕ ಸಂಘದ ವತಿಯಿಂದ ಕುವೆಂಪು ಬಯಲು ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಿ.ಗೌರಮ್ಮ ಚಿಕ್ಕಣ್ಣ ಸಮಾಜಸೇವಾ ಪ್ರಶಸ್ತಿಯನ್ನು ಮಂಡ್ಯ ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್. ನಾಗರಾಜು ಅವರಿಗೆ ಪ್ರದಾನ ಮಾಡಿ ಅವರು ಮಾತನಾಡಿದರು.

ಸರ್ಕಾರಿ ಸ್ವಾಮ್ಯದಲ್ಲೇ ಮೈಷುಗರ್ ಅನ್ನು ಉನ್ನತೀಕರಣಗೊಳಿಸಬೇಕೆಂಬುದು ಸರ್ಕಾರದ ಉದ್ದೇಶವಾಗಿದ್ದು, ಕಬ್ಬಿನ ಬಾಕಿ ಹಣ ಹಾಗೂ ಇನ್ನಿತರೆ ಸೌಲಭ್ಯವನ್ನು ಮೈಷುಗರ್‌ಗೆ ಒದಗಿಸಲು ಸರ್ಕಾರ ಬದ್ಧವಾಗಿದೆ. ಇನ್ನು 15 ದಿನಗಳಲ್ಲಿ ರೈತರ ಕಬ್ಬಿನ ಬಾಕಿ ಹಣವನ್ನು ನೀಡಲಾಗುವುದು ಎಂದು ಹೇಳಿದರು.

ಬೆಂಗಳೂರಿನಲ್ಲಿ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಸ್ಥಾಪಿಸಲು ಸರ್ಕಾರ ಮುಂದಾಗಿದೆ. ಇದು ಕನ್ನಡಿಗರು ಹಾಗೂ ರೈತರ ಅಸ್ಮಿತೆಯಾಗಿದೆ. ನವೆಂಬರ್ 11 ರಂದು ಉದ್ಘಾಟನೆ ಮಾಡಲಾಗುತ್ತಿದೆ ಎಂದರು.

ಸರ್ಕಾರಿ ಅಧಿಕಾರಿಗಳು ಸಮಾಜಮುಖಿ ಕೆಲಸ ಮಾಡಲು ಒತ್ತು ನೀಡಬೇಕು. ಸಮಾಜಮುಖಿ ಕೆಲಸ ಮಾಡುವವರಿಗೆ ಬೆನ್ನೆಲುಬಾಗಿರಬೇಕು. ಸ್ವಾರ್ಥವನ್ನು ಮರೆತು ಸಮಾಜಮುಖಿಯಾಗಿ ಕೆಲಸ ಮಾಡುತ್ತಿರುವವರ ಸಂಖ್ಯೆ ದಿನೇ ದಿನೇ ಕ್ಷೀಣವಾಗುತ್ತಿದೆ. 60–70ರ ದಶಕದಲ್ಲಿ ಇಂತಹ ಮಹಾನುಭಾವರು ಇದ್ದರು. ಆದರೆ ಇಂದು ಅಂತಹ ಅಧಿಕಾರಿಗಳ ವರ್ಗ ನಶಿಸಿ ಹೋಗಿದೆ ಎಂದು ವಿಷಾದಿಸಿದರು.

ಮಂಡ್ಯದವರೇ ಆದ ಹೆಚ್.ಎಲ್.ನಾಗೇಗೌಡ, ಕೆ.ವಿ.ಶಂಕರಗೌಡ ಹೀಗೆ ಬಹಳ ದೊಡ್ಡ ಮಟ್ಟದ ಮಹನೀಯರು ಸಮಾಜಕ್ಕಾಗಿ ದುಡಿದು ನಮಗೆ ಆದರ್ಶವಾಗಿದ್ದಾರೆ ಎಂದರು.

ಈ ಅಪರೂಪದ ಸಾಲಿಗೆ ಮಂಡ್ಯದ ಅಪರ ಜಿಲ್ಲಾಧಿಕಾರಿ ಹೆಚ್.ಎಲ್.ನಾಗರಾಜು ಸೇರುತ್ತಿರುವುದು ಬಹಳ ಖುಷಿ ತಂದಿದೆ. ಸಮಾಜಕ್ಕಾಗಿ ಅವರು ಹಗಲಿರುಳು ದುಡಿಯುತ್ತಿದ್ದಾರೆ. ಇಂತಹ ವಿರಳವಾದ ಅಧಿಕಾರಿಗಳು ಸಿಗುವುದು ಅಪರೂಪ. ಜನಪರ ಅಪರೂಪದ ಅಧಿಕಾರಿಗಳು ಸಮಾಜದಲ್ಲಿ ಹೆಚ್ಚಾದರೆ ಇಂತಹ ಕಾರ್ಯಕ್ರಮಗಳು ಸಹ ಹೆಚ್ಚಾಗಲಿದೆ ಎಂದು ಹೇಳಿದರು.

ಸಮಾಜಕ್ಕೆ ಒಳ್ಳೆಯ ಅಧಿಕಾರಿಗಳ ಅವಶ್ಯವಿದೆ. ಅಧಿಕಾರವಿದ್ದವರನ್ನು ಪೂಜಿಸುವ ಗುಣವನ್ನು ಜನ ಸಹ ಬಿಡಬೇಕು. ಜನಸೇವೆ ಮಾಡುವವರಿಗೆ ಜನರು ಆದ್ಯತೆ ನೀಡಬೇಕು. ಕೆಟ್ಟ ಅಥವಾ ಭ್ರಷ್ಟ ಅಧಿಕಾರಿಗೆ ಗೌರವ ಕೊಟ್ಟರೆ ಅವರ ಸಂತತಿ ಬೆಳೆಯಲಿದೆ. ಸಮಾಜ ಒಳ್ಳೆಯ ಅಧಿಕಾರಿಗಳು ಮತ್ತು ರಾಜಕಾರಣಿಗಳನ್ನು ಸೃಷ್ಟಿ ಮಾಡುವ ಕಾರ್ಖಾನೆಯಾಗಬೇಕು. ಈ ವಿಚಾರವನ್ನು ಸಮಾಜ ಮರೆತರೆ ಭ್ರಷ್ಟ ಅಧಿಕಾರಿಗಳು ಹಾಗೂ ರಾಜಕಾರಣಿಗಳು ಸಮಾಜದಲ್ಲಿ ಹೆಚ್ಚುತ್ತಾರೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಅವರಿಗೆ ಸಿ.ಗೌರಮ್ಮ ಚಿಕ್ಕಣ್ಣ ಸಮಾಜ ಸೇವಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಶಾಸಕ ಎಂ.ಶ್ರೀನಿವಾಸ್, ವಿಧಾನಪರಿಷತ್ ಮಾಜಿ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡ, ಬಿ.ರಾಮಕೃಷ್ಣ, ರೈತ ಮುಖಂಡ ಕೆ.ಆರ್.ಜಯರಾಮು, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್ ಗೌಡ, ಉಪಾಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್, ಕಾರ್ಯದರ್ಶಿ ಲೋಕೇಶ್ ಚಂದಗಾಲು ಉಪಸ್ಥಿತರಿದ್ದರು.

ಈಜಲು ಹೋಗಿದ್ದ ಯುವಕ ನೀರು ಪಾಲು

ಮದ್ದೂರು,ಅ.24– ಈಜಲು ಹೋಗಿದ್ದ ಯುವಕನೊಬ್ಬ ನೀರು ಪಾಲಾದ ಘಟನೆ ತಾಲೂಕಿನ ಕೊಪ್ಪ ಕೆರೆಯಲ್ಲಿ ಸಂಭವಿಸಿದೆ. ಮಂಡ್ಯ ತಾಲೂಕಿನ ಕಾರಸವಾಡಿ ಗ್ರಾಮದ ಮಹದೇವ್ ಎಂಬುವರ ಪುತ್ರ ಹರ್ಷ ಕೆ.ಎಂ.(18) ಮೃತ ಯುವಕ.

ಮಂಡ್ಯ ನಗರದ ಕಾಲೇಜೊಂದರಲ್ಲಿ ಬಿ.ಕಾಂ. ವ್ಯಾಸಂಗ ಮಾಡುತ್ತಿದ್ದ ಹರ್ಷ ಇಂದು ದೀಪಾವಳಿ ಹಬ್ಬದ ಪ್ರಯುಕ್ತ ರಜಾ ಇರುವ ಹಿನ್ನೆಲೆಯಲ್ಲಿ ತನ್ನ ಸ್ನೇಹಿತರ ಜೊತೆ ಕೊಪ್ಪ ಕೆರೆಯಲ್ಲಿ ಈಜಲು ಹೋಗಿದ್ದಾನೆ. ಕೊಪ್ಪ ಕೆರೆಯಲ್ಲಿ ಈಜುತ್ತಿದ್ದ ಸಂದರ್ಭದಲ್ಲಿ ತೂಬಿನ ಬಳಿ ತೆರಳಿದಾಗ ನೀರಿನ ಸೆಳೆತಕ್ಕೆ ಸಿಲುಕಿ ತೂಬಿನಿಂದ ನಾಲೆಗೆ ಬಿದ್ದ ಪರಿಣಾಮ ತೀವ್ರ ಪೆಟ್ಟಾಗಿ ಮೃತಪಟ್ಟಿದ್ದಾನೆಂದು ತಿಳಿದು ಬಂದಿದೆ. ಈ ಸಂಬಂಧ ಕೊಪ್ಪ ಠಾಣೆಯಲ್ಲಿ ಪ್ರಕರಣದ ದಾಖಲಾಗಿದ್ದು ಮೃತ ಹರ್ಷನ ಶವವನ್ನು ಮಿಮ್ಸ್ ಶವಾಗಾರಕ್ಕೆ ತಂದು ಮರಣೋತ್ತರ ಪರೀಕ್ಷೆ ನಡೆಸಿ ನಂತರ ವಾರಸುದಾರರಿಗೆ ಒಪ್ಪಿಸಲಾಗಿದೆ.



ನರಕ ಚತುರ್ದಶಿಯಂದು ಮೇಲುಕೋಟೆಯಲ್ಲಿ ನಡೆಸಿದ ಚರಿತ್ರೆಯಲ್ಲಿ ಉಲ್ಲೇಖಿತ ಹತ್ಯಾಕಾಂಡ ಖಂಡಿಸಿ ವಿವಿಧ ಹಿಂದೂಪರ ಸಂಘಟನೆಗಳು ಮೇಲುಕೋಟೆಯಲ್ಲಿ ಬೃಹತ್ ಪಂಜಿನ ಮೆರವಣಿಗೆ ನಡೆಸಿದವು. ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಅಶೋಕ್, ರಜತ್, ಸಂದೇಶ್, ವಿದ್ವಾನ್ ಶ್ರೀರಂಗಂ ರಾಮಪ್ರಿಯ, ಹರಿ, ಹರಿಯರ ಪಾರ್ಥ, ಎಸ್.ಎನ್.ಟಿ. ಸೋಮಶೇಖರ್, ನವೀನ್, ನಾಗಣ್ಣಗೌಡ, ಮುರುಳಿ ಸೇರಿದಂತೆ ಅನೇಕರು ಇದ್ದರು.

ಹಣ ದುರ್ಬಳಕೆ ಆರೋಪ: ಕೆನ್ನಾಳು ಡೈರಿಗೆ ರೈತರ ಮುತ್ತಿಗೆ



ಪಾಂಡವಪುರ, ಅ.24– ತಾಲೂಕಿನ ಕೆನ್ನಾಳು ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆಂದು ಆರೋಪಿಸಿ ರೈತರು ಡೈರಿ ಮುಂದೆ ಪ್ರತಿಭಟನೆ ನಡೆಸಿದರು.

ಕೆನ್ನಾಳು ಡೈರಿಯಲ್ಲಿ ಅಲ್ಲಿನ ಸಿಬ್ಬಂದಿ ಸುಮಾರು 2.80 ಲಕ್ಷ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದು, ರೈತರು ಹಾಗೂ ಸಾರ್ವಜನಿಕರು ಡೈರಿಗೆ ಮುತ್ತಿಗೆಹಾಕಿ ಸಿಬ್ಬಂದಿಗಳನ್ನು ತರಾಟೆಗೆ ತೆಗೆದುಕೊಂಡರು.

ಡೈರಿಯಲ್ಲಿ ಕಳೆದ ಎಂಟು ತಿಂಗಳಿಂದ ಅಲ್ಲಿನ ಸಿಬ್ಬಂದಿ ಬೇರೆಯವರ ಹೆಸರಿನ ಖಾತೆಗೆ ಹಾಲಿನ ಹಣ ಜಮಾವಣೆ ಮಾಡಿದ್ದಾರೆ. ಇದರಿಂದ ಸಂಘದಲ್ಲಿ ಸುಮಾರು 2.80 ಲಕ್ಷ ಹಣ ದುರ್ಬಳಕೆಯಾಗಿದೆ ಎಂದು ಪ್ರತಿಭಟನಾಕಾರರು ದೂರಿದರು.

ಡೈರಿಯಲ್ಲಿ ಹೇಗೆ ಹಣ ದುರ್ಬಳಕೆ ಮಾಡಿದ್ದೀರಿ, ನಿಮ್ಮ ಜತೆಯಲ್ಲಿ ಇನ್ನು ಯಾರ್‍ಯಾರು ಇದ್ದಾರೆ ಎಂದು ಸಿಬ್ಬಂದಿಗಳನ್ನು ತರಾಟೆಗೆ ತೆಗೆದುಕೊಂಡರಲ್ಲದೆ, ಡೈರಿ ಕಾರ್ಯದರ್ಶಿಗಳ ಗಮನಕ್ಕೆ ಬರದೆ ಹೇಗೆ ಇಷ್ಟೊಂದು ಭ್ರಷ್ಟಾಚಾರ ನಡೆಸಲು ಸಾಧ್ಯವೇ ಎಂದು ಹರಿಹಾಯ್ದರು.

ಭ್ರಷ್ಟಾಚಾರ ನಡೆಸಿರುವ ಸಿಬ್ಬಂದಿಗಳ ವಿರುದ್ಧ ಸೂಕ್ತ ತನಿಖೆ ನಡೆಸಿ, ಈ ಅವ್ಯವಹಾರದಲ್ಲಿ ಯಾರ್‍ಯಾರು ಭಾಗಿಯಾಗಿದ್ದಾರೆ ಎನ್ನುವುದು ಹೊರಬರಬೇಕು. ಜತೆಗೆ ದುರ್ಬಳಕೆಯಾಗಿರುವ ಹಣವನ್ನು ವಸೂಲಿ ಮಾಡಬೇಕು. ಭ್ರಷ್ಟಾಚಾರ ನಡೆಸಿದ ಸಿಬ್ಬಂದಿಗಳ ಆಸ್ತಿ ಜಪ್ತಿಮಾಡಿ. ಇಲ್ಲವಾದರೆ ಸಿಬ್ಬಂದಿಗಳನ್ನು ಪೊಲೀಸರ ವಶಕ್ಕೆ ಒಪ್ಪಿಸಿ ಕ್ರಮವಹಿಸಿ, ಕಾನೂನು ರೀತಿ ಕ್ರಮ ಜರುಗಿಸಿ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ವೇಣುಗೋಪಾಲ್, ಮಂಜುನಾಥ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮಹದೇಶ್ವರಬೆಟ್ಟದಲ್ಲಿ ದೀಪಾವಳಿ ರಥೋತ್ಸವಕ್ಕೆ ಸಕಲ ಸಿದ್ಧತೆ

● ಇಂದು ಹಾಲರವಿ ಉತ್ಸವ ● ನಾಳೆ ಮಹಾರಥೋತ್ಸವ



ರಥೋತ್ಸವಕ್ಕೆ ಸಿದ್ಧಗೊಂಡ ಬ್ರಹ್ಮರಥ.



ದೀಪಾವಳಿ ಜಾತ್ರಾ ಮಹೋತ್ಸವ ಹಿನ್ನೆಲೆ ಸೋಮವಾರದ ಉತ್ಸವಾದಿಗಳು.

ಹನೂರು, ಅ.24–ತಾಲೂಕಿನ ಪ್ರಸಿದ್ಧ ಯಾತ್ರಾಸ್ಥಳ ಮಲೆಮಹದೇಶ್ವರಬೆಟ್ಟದಲ್ಲಿ ದೀಪಾವಳಿ ರಥೋತ್ಸವಕ್ಕೆ ಸಕಲ ಸಿದ್ಧತೆ ಭಾಗಶಃ ಪೂರ್ಣಗೊಂಡಿದ್ದು, ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಕಳೆದೆರಡು ದಿನಗಳಿಂದ ಮಾದಪ್ಪನಿಗೆ ವಿಶೇಷ ಪೂಜಾ ಕೈಂಕರ್ಯ ನಡೆಯುತ್ತಿವೆ.

ದೀಪಾವಳಿ ಜಾತ್ರೆ ಮೊದಲ ದಿನ ಶನಿವಾರ ಮಹದೇಶ್ವರ ಸ್ವಾಮಿಗೆ ವಿಶೇಷ ಪೂಜೆಗಳಾದ ಬಿಲ್ವಾರ್ಚನೆ, ಗಂಧಾಭಿಷೇಕ, ಪುಷ್ಪಾರ್ಚನೆ, ಕ್ಷೀರಾಭಿಷೇಕ, ಮಹಾರುದ್ರಾಭಿಷೇಕ ಮಹಾಮಂಗಳಾರತಿ ನೆರವೇರಿದವು. ಕ್ಷೇತ್ರದಲ್ಲಿ ವಿರಳವಾಗಿ ಭಕ್ತರು ಕಂಡು ಬಂದರು. ಭಾನುವಾರ ವಿಶೇಷ ಅರ್ಚನೆ, ಅಭಿಷೇಕಗಳು ನೆರವೇರಿದವು. ಭಾನುವಾರ ರಜಾ ದಿನವಾಗಿದ್ದರಿಂದ ಭಾರೀ ಸಂಖ್ಯೆಯಲ್ಲಿ ಭಕ್ತರು ದೇಗುಲಕ್ಕೆ ಆಗಮಿಸಿದ್ದರು. ಮಂಗಳಾರತಿ ನೆರವೇರಿಸಿದ ಬಳಿಕ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ಸರತಿ ಸಾಲಿನಲ್ಲಿ ಸಾಗಿದ ಭಕ್ತರು ಮಹದೇಶ್ವರನ ದರ್ಶನ ಪಡೆದು ಪುನೀತರಾದರು. ಸೋಮವಾರ ಎಣ್ಣೆ ಮಜ್ಜನ ಸೇವೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ಜರುಗಿತು.

ಹಾಲರವಿ ಉತ್ಸವ: ದೀಪಾವಳಿ ಜಾತ್ರೆಯ ನಾಲ್ಕನೇ ದಿನ ಮಂಗಳವಾರ(ಅ.25) ಹಾಲರವಿ ಉತ್ಸವ ನಡೆಯಲಿದೆ. ಈ ಉತ್ಸವ ಜಾತ್ರೆಯ ಕೇಂದ್ರ ಬಿಂದು. ಬೇಡಗಂಪಣ ಸಮುದಾಯದ 101 ಹೆಣ್ಣು ಮಕ್ಕಳು 10 ಕಿಮೀ ದೂರದಲ್ಲಿರುವ ಹಾಲರವಿ ಹಳ್ಳದಿಂದ ಸೂರ್ಯೋದಯಕ್ಕೂ ಮುನ್ನ ಕಲಶಗಳಲ್ಲಿ ನೀರು ತಂದು ಮಹದೇಶ್ವರ ಸ್ವಾಮಿಗೆ ಅಭಿಷೇಕ ಮಾಡಿ ಪೂಜೆ ಸಲ್ಲಿಸುವುದು ಉತ್ಸವದ ವಿಶೇಷ.

ಮಹಾರಥೋತ್ಸವಕ್ಕೆ ಸಿದ್ಧತೆ: ಅ.26 ರಂದು ಮಾದಪ್ಪನ ಮಹಾರಥೋತ್ಸವ ನಡೆಯಲಿದ್ದು, ರಥ ಸಿದ್ಧಪಡಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ. 52 ಅಡಿ ತೇರಿನಲ್ಲಿ 5 ಚೌಕ ಪೆಟ್ಟಿಗೆ ನಿರ್ಮಾಣವಾಗಿದ್ದು, ಸುಂದರ ವಸ್ತ್ರಾಭರಣ ಮಾಡಲಾಗಿದೆ. ರಥಕ್ಕೆ ತಳಿರು–ತೋರಣ ಕಟ್ಟಿದ್ದು, ಛತ್ರಿ, ಕಳಶಗಳನ್ನು ಅಳವಡಿಸಲಾಗಿದೆ. ತೇರು ನವವಧುವಿನಂತೆ ಕಂಗೊಳಿಸುತ್ತಿದೆ. ಬುಧವಾರ ಬೆಳಗ್ಗೆ 9ರಿಂದ 9.45ರ ಶುಭ ಮುಹೂರ್ತದಲ್ಲಿ ಮಹಾರಥೋತ್ಸವ ಜರುಗಲಿದೆ.

ಮಾದಪ್ಪನ ಬ್ರಹ್ಮರಥಕ್ಕೆ 87 ವರ್ಷ....

ಮಹದೇಶ್ವರಸ್ವಾಮಿಯ ರಥೋತ್ಸವದಲ್ಲಿ ಬಳಸುವ ಬ್ರಹ್ಮರಥಕ್ಕೆ ಈಗ 87 ವರ್ಷಗಳ ಸಂಭ್ರಮ. ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯ ಅವಧಿಯಲ್ಲಿ ಯುಗಾದಿ ಹಬ್ಬದ ಮೊದಲ ದೊಡ್ಡ ಜಾತ್ರೆಗೆ ಈ ರಥವನ್ನು ಕೊಡುಗೆಯಾಗಿ ನೀಡಿದ್ದರು.

ಅಂದಿನ ದೇವಸ್ಥಾನದ ಸಮಿತಿ ಸದಸ್ಯ ರಾವ್‌ಸಾಹೇಬ್, ಕೊಳ್ಳೇಗಾಲ ಜಿ.ಪಿ.ಮಲ್ಲಪ್ಪ, ಸಾಲೂರು ಮಠದ ಶ್ರೀ ಶಾಂತಲಿಂಗಸ್ವಾಮಿಗಳು, ಪುಟ್ಟಮಾದ ತಂಬಡಯ್ಯ, ಒಮಾದ ತಂಬಡಯ್ಯ ಹೆಸರುಗಳನ್ನು ರಥದ ಹಿಂಭಾಗ ಬರೆಯಲಾಗಿದೆ. ಮೈಸೂರು ಅರಮನೆ ಗುತ್ತಿಗೆದಾರರಾದ ತಿಮ್ಮಯ್ಯಚಾರ್ಯರ ಮಗ ಅಪ್ಪಾಜಿ ಆಚಾರ್ಯ ರಥ ನಿರ್ಮಿಸಿದ್ದಾರೆ ಎಂಬ ಮಾಹಿತಿಯೂ ರಥದಲ್ಲಿ ಉಲ್ಲೇಖವಾಗಿದೆ.

ಸಚಿವ ಸೋಮಣ್ಣ ವಜಾಗೊಳಿಸದಿದ್ದರೆ ರಾಜ್ಯಾದ್ಯಂತ ಹೋರಾಟ

ರೈತ ಸಂಘ, ಹಸಿರು ಸೇನೆ, ಕಬ್ಬು ಬೆಳೆಗಾರರ ಸಂಘ ಎಚ್ಚರಿಕೆ



ಚಾಮರಾಜನಗರ, ಅ.24– ಮಹಿಳೆಗೆ ಕಪಾಳಮೋಕ್ಷ ಮಾಡಿರುವ ಹಾಗೂ ರೈತರ ಬಗ್ಗೆ ನಿರ್ಲಕ್ಷ್ಯ ಧೋರಣೆ ತಾಳಿರುವ ಜಿಲ್ಲಾ ಉಸ್ತುವಾರಿ ಸಚಿವರೂ ಆದ ವಸತಿ ಸಚಿವ ವಿ.ಸೋಮಣ್ಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸದಿದ್ದರೆ ರಾಜ್ಯಾದ್ಯಂತ ಹೋರಾಟ ರೂಪಿಸಲಾಗುವುದು ಎಂದು ರೈತ ಸಂಘ, ಹಸಿರು ಸೇನೆ ಹಾಗೂ ಕಬ್ಬು ಬೆಳೆಗಾರರ ಸಂಘ ಎಚ್ಚರಿಸಿದೆ.

ನಗರದಲ್ಲಿ ಸೋಮವಾರ ಕರೆದಿದ್ದ ಜಂಟಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಗಳ ಜಿಲ್ಲಾ ಅಧ್ಯಕ್ಷರಾದ ಹೊನ್ನೂರು ಪ್ರಕಾಶ್, ಹೆಬ್ಬಸೂರು ಬಸವಣ್ಣ ಹಾಗೂ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಅವರು, ಈ ಎಚ್ಚರಿಕೆ ನೀಡಿದರು.

ರೈತರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸೋಮಣ್ಣ ಅವರೇ ಕರೆದಿದ್ದ ಸಭೆಯಲ್ಲಿ ನಾವೆಲ್ಲರೂ ಭಾಗವಹಿಸಿದ್ದೆವು. ಸಭೆ ನಿಗದಿತ ಸಮಯಕ್ಕಿಂತ ಒಂದೂವರೆ ಗಂಟೆ ಆದರೂ ಸಹ ಆರಂಭವಾಗಲಿಲ್ಲ. ಸಚಿವರು ಈ ಬಗ್ಗೆ ಸಭೆಗೆ ಮಾಹಿತಿ ನೀಡಿದ್ದರೆ ನಾವೆಲ್ಲರೂ ಕಾಯುತ್ತಿದ್ದೆವು. ಯಾವುದೇ ಮಾಹಿತಿ ನೀಡದೆ ಇದ್ದದ್ದರಿಂದ ಸಭೆಯನ್ನು ಬಹಿಷ್ಕರಿಸಿ ಹೊರ ಬಂದೆವು. ಆದರೂ ಸಹ ಸಚಿವರು ರೈತರಲ್ಲದವರನ್ನು ಕರೆಸಿ ಸಭೆ ನಡೆಸಿರುವುದು ಸಮಂಜಸವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಲ್ಲದೆ ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದಲ್ಲಿ ವಸತಿ ಯೋಜನೆಯಡಿ ನಿವೇಶನ ಹಕ್ಕುಪತ್ರ ವಿತರಣಾ ಕಾರ್ಯಕ್ರಮದಲ್ಲಿ ತನ್ನ ಕಷ್ಟ ಹೇಳಿಕೊಳ್ಳಲು ಬಂದ ಮಹಿಳೆಗೆ ಸಚಿವ ಸೋಮಣ್ಣ ಕಪಾಳಮೋಕ್ಷ ಮಾಡಿರುವುದು ಸ್ಪಷ್ಟವಾಗಿದೆ. ಇದಾದ ಬಳಿಕ ಆ ಮಹಿಳೆಯನ್ನು ಬೆದರಿಸಿ ನನಗೆ ಸಚಿವರು ಹೊಡೆದಿಲ್ಲ ಎಂದು ಬಲವಂತವಾಗಿ ಹೇಳಿಕೆ ಕೊಡಿಸಲಾಗಿದೆ. ಇದೂ ಸಹ ದೊಡ್ಡ ಅಪರಾಧಲ್ಲವೇ? ಸೋಮಣ್ಣ ಎಂದೂ ಸಹ ನುಡಿದಂತೆ ನಡೆದುಕೊಂಡಿಲ್ಲ. ಇದು ಹಲವಾರು ಸಭೆ–ಸಮಾರಂಭಗಳಲ್ಲಿ ಸಾಬೀತಾಗಿದೆ. ಅವರೊಬ್ಬ ಸುಳ್ಳಿನ ಸರದಾರರು ಎಂದು ಆರೋಪಿಸಿದರು. ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿಗಳಿಗೆ ನೈತಿಕತೆ ಇದ್ದರೆ, ಸೋಮಣ್ಣ ಅವರನ್ನು ಈ ಕೂಡಲೇ ಸಚಿವ ಸ್ಥಾನದಿಂದ ತೆಗೆಯಬೇಕು. ಜಿಲ್ಲೆಗೆ ಬೇರೊಬ್ಬರು ಉಸ್ತುವಾರಿ ಸಚಿವರನ್ನು ನೇಮಿಸಬೇಕು. ಇಲ್ಲದಿದ್ದಲ್ಲಿ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಗುರುಪ್ರಸಾದ್, ಜ್ಯೋತಿಗೌಡನಪುರ ಸಿದ್ದರಾಜು, ರೈತ ಸಂಘ ಮಹಿಳಾ ಘಟಕದ ಅಧ್ಯಕ್ಷೆ ಮಹೇಶ್ವರಿ ಸಿದ್ದರಾಜು, ಮಾಡ್ರಹಳ್ಳಿ ಮಹದೇವಪ್ಪ ಇತರರು ಹಾಜರಿದ್ದರು.

ಪ್ರಮುಖ ಸಚಿವರನ್ನು ಕಳುಹಿಸಲು ಆಗ್ರಹ

ಚಾಮರಾಜನಗರ: ಜಿಲ್ಲೆಯಲ್ಲಿ ರೈತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ಬಗೆಹರಿಸಲು ಮುಖ್ಯಮಂತ್ರಿಗಳು ಈ ಕೂಡಲೇ ಪ್ರಮುಖ ಇಲಾಖೆಗಳ ಸಚಿವರನ್ನು ಚಾಮರಾಜನಗರಕ್ಕೆ ಕಳುಹಿಸಬೇಕು. ಇಲ್ಲದಿದ್ದಲ್ಲಿ ನ.7ರಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುವುದಾಗಿ ಜಿಲ್ಲಾ ರೈತ ಸಂಘ, ಹಸಿರುಸೇನೆ ಹಾಗೂ ಕಬ್ಬುಬೆಳೆಗಾರರ ಸಂಘ ಎಚ್ಚರಿಸಿವೆ.

ಅರಣ್ಯ, ಕೃಷಿ, ಕಂದಾಯ, ಇಂಧನ, ನೀರಾವರಿ ಹಾಗೂ ಸಕ್ಕರೆ ಸಚಿವರನ್ನು ಈ ಕೂಡಲೇ ನಗರಕ್ಕೆ ಕಳುಹಿಸಿಕೊಟ್ಟು ರೈತರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಹೆಬ್ಬಸೂರು ಬಸವಣ್ಣ, ಹೊನ್ನೂರು ಪ್ರಕಾಶ್ ಹಾಗೂ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ವಿ.ಸೋಮಣ್ಣ ಜಿಲ್ಲೆಯ ಉಸ್ತುವಾರಿಯಾಗಿ 8 ತಿಂಗಳು ಕಳೆದಿದೆ. ಇವರು ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಹಾಗಾಗಿ ಪ್ರಮುಖ ಆರು ಇಲಾಖೆಯ ಸಚಿವರನ್ನು ಕಳುಹಿಸಿಕೊಡಬೇಕು. ಇಲ್ಲದಿದ್ದಲ್ಲಿ ಮುಂದಾಗುವ ಅನಾಹುತಗಳಿಗೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದರು.

ಪ್ರತ್ಯೇಕ ಅಪಘಾತ ಪ್ರಕರಣ; ಇಬ್ಬರು ಸಾವು

ಚಾಮರಾಜನಗರ, ಅ.24– ನಗರ ಹಾಗೂ ತಾಲೂಕಿನ ನಾಗವಳ್ಳಿ ಗ್ರಾಮದ ಬಳಿ ಸೋಮವಾರ ಸಂಭವಿಸಿದ ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಚಾಮರಾಜನಗರ ತಾಲೂಕಿನ ನಾಗವಳ್ಳಿ ಗ್ರಾಮದ ಕೆರೆ ಬಳಿ ತಡೆಗೋಡೆಗೆ ಬೈಕ್ ಡಿಕ್ಕಿ ಹೊಡೆದು ಸವಾರ ಸಾವನ್ನಪ್ಪಿದ್ದಾನೆ. ಮೃತರನ್ನು ತಾಲೂಕಿನ ಕರಳಮೋಳೆ ಗ್ರಾಮದ ಸ್ವಾಮಿ ಎಂದು ಗುರುತಿಸಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಚಾಮರಾಜನಗರ ಜೋಡಿ ರಸ್ತೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಮುಖ್ಯದ್ವಾರದ ಎದುರು ಸಂಜೆ ಆಟೋ ಮಗುಚಿ ಪ್ರಯಾಣಿಕರೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರ ಗುರುತು ಇನ್ನು ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.


ಮೃತದೇಹಗಳನ್ನು ನಗರದ ಸಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದ್ದು, ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಚಿವ ಸೋಮಣ್ಣ ರಾಜೀನಾಮೆಗೆ ಆಗ್ರಹ

ಚಾಮರಾಜನಗರ, ಅ.24–ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಮ್ಮ ಕಷ್ಟ ಹೇಳಿಕೊಳ್ಳಲು ಬಂದಿದ್ದ ಮಹಿಳೆಗೆ ಕಪಾಳಮೋಕ್ಷ ಮಾಡಿರುವ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಕೂಡಲೇ ರಾಜೀನಾಮೆ ನೀಡಬೇಕು ಎಂದು ಅಂಬೇಡ್ಕರ್ ಸೇನೆಯ ಜಿಲ್ಲಾಧ್ಯಕ್ಷ ಗಣೇಶಪ್ರಸಾದ್ ಆಗ್ರಹಿಸಿದ್ದಾರೆ.

ಸೋಮಣ್ಣ ಅವರು ಸ್ವತಃ ರಾಜೀನಾಮೆ ನೀಡದಿದ್ದರೆ ಮುಖ್ಯಮಂತ್ರಿಗಳೇ ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಪತಿ ಜಾನ್ ಶಾ ನಿಧನ



ಬೆಂಗಳೂರು: ಅನಾರೋಗ್ಯಕ್ಕೀಡಾಗಿದ್ದ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಪತಿ ಜಾನ್ ಶಾ ಇಂದು ಬೆಳಗ್ಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. 73 ವರ್ಷದ ಜಾನ್ ಶಾ ಅವರು ಅನಾರೋಗ್ಯಕ್ಕೀಡಾಗಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ಜಾನ್ ಶಾ ವಿಧಿವಶರಾಗಿರುವುದಾಗಿ ಕುಟುಂಬದ ಮೂಲಗಳು ತಿಳಿಸಿವೆ. ಜಾನ್ ಶಾ ಅವರು ಬೆಂಗಳೂರು ಮೂಲದ ಬಯೋಕಾನ್ ಲಿಮಿಟೆಡ್‌ನ ಮಾಜಿ ಉಪಾಧ್ಯಕ್ಷರಾಗಿದ್ದರು. ಮಧುರಾ ಕೋಟ್ಸ್ ಲಿಮಿಟೆಡ್‌ನ ಅಧ್ಯಕ್ಷ ಹಾಗೂ ಕೋಟ್ಸ್ ವಿಯೆಲ್ಲಾ ಗ್ರೂಪ್‌ನ ಎಂಡಿ ಆಗಿ ಕಾರ್ಯನಿರ್ವಹಿಸಿದ್ದರು. ಜಾನ್ ಶಾ ಅವರು ಬ್ರಿಟನ್‌ನ ಗ್ಲಾಸ್ಗೋ ವಿಶ್ವವಿದ್ಯಾಲಯದಿಂದ ಇತಿಹಾಸ, ರಾಜಕೀಯಶಾಸ್ತ್ರ ಮತ್ತು ಅರ್ಥಶಾಸ್ತ್ರದಲ್ಲಿ ಎಂಎ ಪದವಿ ಪಡೆದಿದ್ದರು.



ಮೈಸೂರಿನ ಕಾಸ್ಮೋಪಾಲಿಟನ್ ಕ್ಲಬ್‌ನಲ್ಲಿ ಇತ್ತೀಚೆಗೆ ನಡೆದ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಪ್ರೊ. ಕೆ.ನರಸಿಂಹಮೂರ್ತಿ ಮತ್ತು ಎಸ್.ರವಿ ಜಯ ಗಳಿಸಿದರು. ಹರೀಶ್ ಮತ್ತು ಶಿವಪ್ರಕಾಶ್ ಎರಡನೇ, ರೇಣುಕಾ ಪ್ರಸಾದ್ ಮತ್ತು ಸುರೇಶ್‌ಬಾಬು ಮೂರನೇ ಸ್ಥಾನ ಪಡೆದರು. ವಿಜೇತರಿಗೆ ನೆನಪಿನ ಕಾಣಿಕೆ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಕಾಸ್ಮೋಪಾಲಿಟನ್ ಕ್ಲಬ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕರಾಟೆ ಪ್ರದರ್ಶನ: ರೋಚಕ ಅನುಭವ



ಮೈಸೂರು, ಅ.24(ಜಿಎ)– ಕರಾಟೆ ವಿದ್ಯಾರ್ಥಿಗಳು ಪ್ರದರ್ಶಿಸಿದ ಮಾರ್ಷಲ್ ಆರ್ಟ್ಸ್ ಪ್ರಕಾರಗಳಿಗೆ ಮೈಸೂರಿನ ಜನತೆ ರೋಮಾಂಚನಗೊಂಡರು.

ನಗರದ ಜಗನ್ಮೋಹನ ಅರಮನೆಯಲ್ಲಿ ದ್ರೋಣಚಾರ್ಯ ಮಾರ್ಷಲ್ ಆರ್ಟ್ಸ್ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಕರಾಟೆ ಬ್ಲಾಕ್ ಬೆಲ್ಟ್ ಪ್ರಧಾನ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು 35 ವಿವಿಧ ಪ್ರದರ್ಶನದ ಮೂಲಕ ಎಲ್ಲರ ಗಮನ ಸೆಳೆದರು. ಇದಕ್ಕೂ ಮುನ್ನ ಜೆಪುಟ್ಟಸ್ವಾಮಿ, ಎನ್.ಶಶಿಕುಮಾರ್, ಇನಿಯಾತ್, ಎಂ.ಎನ್.ಸಾಯಿ ಕಾಂತ್, ಈಶ್ವರ್, ಹೇಮಂತ್, ಭುವನ್, ಸುಭಾಷ್, ವಿಘ್ನೇಶ್, ಗಗನ್, ಅರುಣ್ ಶೆಟ್ಟಿ, ಆರ್ಯನ್, ಅನಿಶ್, ಪರಿಕ್ಷಿತ್, ಸುಮುಖ, ಯತೀಶ್, ವಿಜಯ್, ನರ್ಮದಾ, ಕೌಶಿಕ್, ಅಮೃತ್ ಸೂರ್ಯವಂಶಿ, ಖುಷಿ ಯಾದವ್, ಶವಂತ್, ಮೋನಿಕ, ಮಹದೇವಸ್ವಾಮಿಗೆ ಕರಾಟೆ ಬ್ಲಾಕ್ ಬೆಲ್ಟ್ ಪ್ರದಾನ ಮಾಡಲಾಯಿತು.



ಮೈಸೂರಿನ ಅಪೂರ್ವ ಸ್ನೇಹ ಬಳಗದ ವತಿಯಿಂದ ದೀಪಾವಳಿ ಅಂಗವಾಗಿ ಚಾಮುಂಡಿಪುರಂ ಹಾಗೂ ಬಂಡಿಕೇರಿ ಸುತ್ತಮುತ್ತ ಮನೆ ಮನೆಗೆ ತೆರಳಿ ಹಣತೆ ವಿತರಿಸುವ ಮೂಲಕ ಬೆಳಕಿನ ಜಾಗೃತಿ ಮೂಡಿಸಲಾಯಿತು. ಈ ವೇಳೆ ಮೈಸೂರು ಮಹಾನಗರ ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಆದರ್ಶ, ಜಯರಾಮ್, ರಾಜಣ್ಣ, ಸುರೇಶ್ ಇನ್ನಿತರರು ಉಪಸ್ಥಿತರಿದ್ದರು.

ರಸ್ತೆ ವಿಭಜಕದಲ್ಲಿ ಒಣಗಿದ ಈ ಮರ ಬಲಿಗಾಗಿ ಕಾದಿದೆಯೇ...!

ನಗರಪಾಲಿಕೆ, ಅರಣ್ಯ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾರ್ವಜನಿಕರ ಆಕ್ರೋಶ



ಸಂಪೂರ್ಣ ಒಣಗಿ ನಿಂತಿರುವ ಮರ



ಸಡಿಲಗೊಂಡಿರುವ ಮರದ ಬುಡ

ಮೈಸೂರು, ಅ.24(ಎಸ್‌ಬಿಡಿ)– ಮೈಸೂರು–ಕೆಆರ್‌ಎಸ್ ಮುಖ್ಯರಸ್ತೆಯಲ್ಲಿ ಮರವೊಂದು ಸಂಪೂರ್ಣ ಒಣಗಿದ್ದು, ಯಾವ ಕ್ಷಣದಲ್ಲಾದರೂ ನೆಲಕ್ಕುರುಳುವ ದುಃಸ್ಥಿತಿಯಲ್ಲಿದೆ.

ಕೆಆರ್‌ಎಸ್ ರಸ್ತೆ ಸಿಇಜಿ ಆಸ್ಪತ್ರೆ ಬಳಿ, ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಎದುರಿನ ಮರ ಸಂಪೂರ್ಣ ಒಣಗಿದೆ. ರಸ್ತೆಯ ವಿಭಜಕದಲ್ಲಿರುವ ಈ ಮರ ಯಾವ ಕ್ಷಣದಲ್ಲಿ ಯಾವ ಕಡೆಯಾದರೂ ಉರುಳಿ ಬೀಳಬಹುದು. ಹಾಗೇನಾದರೂ ಮರ ಉರುಳಿದರೆ ಭಾರೀ ಅನಾಹುತವೇ ಸಂಭವಿಸಬಹುದು.

ಈ ರಸ್ತೆಯಲ್ಲಿ ಸದಾ ವಾಹನ ಸಂಚಾರವಿರುತ್ತದೆ. ಜಯದೇವ ಹೃದ್ರೋಗ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಇಎಸ್‌ಐ, ಸ್ಯಾನಿಟೋರಿಯಂ, ಟಿಬಿ ಆಸ್ಪತ್ರೆ, ಆಯುರ್ವೇದ ಆಸ್ಪತ್ರೆಗಳಿದ್ದು, ಆಂಬುಲೆನ್ಸ್ ಸಂಚಾರವೂ ಹೆಚ್ಚಾಗಿರುತ್ತದೆ. ಪ್ರವಾಸಿ ವಾಹನಗಳ ಓಡಾಟವೂ ಹೆಚ್ಚಾಗಿರುತ್ತದೆ. ಕಾರ್ಮಿಕರು, ವಿದ್ಯಾರ್ಥಿಗಳೂ ಹೆಚ್ಚಾಗಿ ಓಡಾಡುತ್ತಾರೆ. ಒಂಟಿಕೊಪ್ಪಲಿನ ಶಾಲೆಗಳಿಗೆ ಮಂಜುನಾಥಪುರ ಇನ್ನಿತರ ಪ್ರದೇಶಗಳ ಮಕ್ಕಳು ಇದೇ ಮಾರ್ಗದಲ್ಲಿ ನಡೆದುಕೊಂಡು ಹೋಗುತ್ತಾರೆ. ದುರದೃಷ್ಟವಶಾತ್ ಒಣಗಿ ನಿಂತಿರುವ ಮರ ಇದ್ದಕ್ಕಿದ್ದಂತೆ ಉರುಳಿ ಬಿದ್ದು ಪ್ರಾಣಾಪಾಯ ಸಂಭವಿಸಿದರೆ ಯಾರು ಹೊಣೆ?. ನಗರ ಪಾಲಿಕೆ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಈ ಮರವನ್ನು ಕಂಡೂ ಕಾಣದಂತೆ ಇದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಚ್ಚೆತ್ತುಕೊಂಡಿಲ್ಲ: ಕೆಲ ವರ್ಷಗಳ ಹಿಂದೆ ಇದೇ ರಸ್ತೆಯಲ್ಲಿ ಇಎಸ್‌ಐ ಆಸ್ಪತ್ರೆ ಬಳಿ ಒಣಗಿದ್ದ ಮರ ಚಲಿಸುತ್ತಿದ್ದ ಆಟೋ ಮೇಲೆ ಉರುಳಿಬಿದ್ದ ಪರಿಣಾಮ ಖಾಸಗಿ ಸಂಸ್ಥೆಯ ಮಹಿಳಾ ಉದ್ಯೋಗಿ ಸಾವನ್ನಪ್ಪಿದ ಘಟನೆ ನಡೆದಿತ್ತು. ಆದರೂ ಸಂಬಂಧಪಟ್ಟವರು ನಿರ್ಲಕ್ಷ್ಯ ವಹಿಸಿದ್ದಾರೆ. ಸಿಇಜಿ ಆಸ್ಪತ್ರೆ ಬಳಿ ಒಣಗಿ ನಿಂತಿರುವ ಮರ ಹಿಂದೆ ಉರುಳಿದ್ದ ಮರಕ್ಕಿಂತ ದೊಡ್ಡದಿದೆ. ಅನಾಹುತ ಸಂಭವಿಸುವ ಮುನ್ನ ಆ ಮರವನ್ನು ತೆರವು ಮಾಡಬೇಕೆಂದು ಕಾಂಗ್ರೆಸ್ ಮುಖಂಡ ಚೇತನ್ ಕುಂಬಾರಕೊಪ್ಪಲ್ ಆಗ್ರಹಿಸಿದ್ದಾರೆ.

ಮೈಸೂರಿನಲ್ಲಿ ರಸ್ತೆ ಅಗಲೀಕರಣಕ್ಕೆ ಮಾತ್ರವಲ್ಲ ಯಾವುದೋ ವಾಣಿಜ್ಯ ಮಳಿಗೆಗೆ ಮರೆಯಾಗುತ್ತದೆ ಎಂಬ ಕ್ಷುಲ್ಲಕ ಕಾರಣಕ್ಕೆ ಗಟ್ಟಿಮುಟ್ಟಾದ ಮರಕ್ಕೆ ಕೊಡಲಿ ಹಾಕಿರುವ ಉದಾಹರಣೆಗಳು ಬಹಳಷ್ಟಿವೆ. ಮರವನ್ನು ಕಡಿದುರುಳಿಸಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದರಷ್ಟೇ ಅರಣ್ಯ ಇಲಾಖೆ ಹಾಗೂ ನಗರ ಪಾಲಿಕೆ ಕಾಟಾಚಾರಕ್ಕೆ ಕ್ರಮ ವಹಿಸುತ್ತಾರೆ. ಆದರೆ ಸಂಪೂರ್ಣವಾಗಿ ಒಣಗಿರುವ ಮರ ಹಾಗೂ ಕೊಂಬೆಗಳ ತೆರವಿಗೆ ಭಾರೀ ವಿಳಂಬ ಮಾಡುತ್ತಾರೆ. ತಕ್ಷಣವೇ ಕೆಆರ್‌ಎಸ್ ರಸ್ತೆಯಲ್ಲಿರುವ ಒಣಗಿದ ಮರ ತೆರವು ಮಾಡದಿದ್ದರೆ ಸಂಭವಿಸಬಹುದಾದ ಅವಘಡಕ್ಕೆ ಸಂಬಂಧಪಟ್ಟ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಚಲೋ ಚಳವಳಿ ಸ್ಮರಣಾರ್ಥ

ಸ್ವಾತಂತ್ರ್ಯ ಹೋರಾಟಗಾರರ ಸಾರೋಟು ಮೆರವಣಿಗೆ

ಹುತಾತ್ಮ ರಾಮಸ್ವಾಮಿ ಸ್ಮಾರಕಕ್ಕೆ ಪುಷ್ಪ ನಮನ



ಮೈಸೂರು, ಅ.24(ಆರ್‌ಕೆಬಿ)– ಮೈಸೂರು ಚಲೋ ಚಳವಳಿಯ (ಅ.24, 1947) 75ನೇ ವರ್ಷಾಚರಣೆ ಅಂಗವಾಗಿ ಸೋಮವಾರ ಮೈಸೂರು ನಗರ ಹಾಗೂ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಆಶ್ರಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಮೈಸೂರಿನಲ್ಲಿ ಸಾರೋಟುಗಳಲ್ಲಿ ಕುಳಿತು ಮೆರವಣಿಗೆ ನಡೆಸಿದರು. .

ಸುಬ್ಬರಾಯನಕೆರೆ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಿಂದ ಆರಂಭವಾದ ಮೆರವಣಿಗೆಯು ಚಾಮರಾಜ ಜೋಡಿ ರಸ್ತೆ ಮೂಲಕ ಹಾದು ರಾಮಸ್ವಾಮಿ ವೃತ್ತದಲ್ಲಿ ಸಮಾವೇಶಗೊಂಡಿತು. ಹದಿಹರೆಯದ ವಿದ್ಯಾರ್ಥಿ ಬಾಣಾವರ ರಾಮಸ್ವಾಮಿ ಹುತಾತ್ಮರಾದ ರಾಮಸ್ವಾಮಿ ವೃತ್ತದಲ್ಲಿ ಅವರ ಸ್ಮಾರಕಕ್ಕೆ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷ ವೈ.ಸಿ.ರೇವಣ್ಣ ಅವರ ನೇತೃತ್ವದಲ್ಲಿ ಪುಷ್ಪನಮನ ಸಲ್ಲಿಸಲಾಯಿತು.

1947ರಲ್ಲಿ ಮೈಸೂರು ಚಲೋ ಸಂದರ್ಭದಲ್ಲಿ ಹಾರ್ಡ್ವಿಕ್ ಪ್ರೌಢಶಾಲೆಯ ವಿದ್ಯಾರ್ಥಿ ರಾಮಸ್ವಾಮಿ ಗುಂಡಿಗೆ ಬಲಿಯಾಗಿದ್ದ ಸ್ಥಳವೇ ಇಂದಿನ ಬಾಣಾವರ ರಾಮಸ್ವಾಮಿ ವೃತ್ತ ಹೀಗಾಗಿ ಹಾರ್ಡ್ವಿಕ್ ಪ್ರೌಢಶಾಲೆಯ ವಿದ್ಯಾರ್ಥಿಗಳು ಹುತಾತ್ಮ ರಾಮಸ್ವಾಮಿ ಅವರ ಭಾವಚಿತ್ರಗಳನ್ನು ಹಿಡಿದು, ಮೆರವಣಿಗೆಯಲ್ಲಿ ಭಾಗವಹಿಸಿ, ರಾಮಸ್ವಾಮಿ ಪರ ಘೋಷಣೆಗಳು ಮೊಳಗಿಸಿದರು. ಸ್ವಾತಂತ್ರ್ಯ ಹೋರಾಟಗಾರರು ರಾಮಸ್ವಾಮಿ ಅವರ ಶೌರ್ಯವನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಾದ ವೈ.ಅಭಯ್‌ಸಿಂಹ ಮಹಾರಾಜ ಜಯಚಾಮರಾಜ ಒಡೆಯರ್ ಹಾಗೂ ಸಿಎಂ.ದೈವಿಕ್ ಕೌಂಡಿನ್ಯ ಅಂದಿನ ಮೊದಲ ಮುಖ್ಯಮಂತ್ರಿಯಾಗಿದ್ದ ಕೆ.ಸಿ.ರೆಡ್ಡಿ ವೇಷ ಧರಿಸಿ ಗಮನ ಸೆಳೆದರು.

ಸ್ವಾತಂತ್ರ್ಯ ಹೋರಾಟಗಾರರು ಮತ್ತು ಅವರ ಧರ್ಮಪತ್ನಿಯರು ಏಳು ಸಾರೋಟುಗಳಲ್ಲಿ ಕುಳಿತು ಮೆರವಣಿಗೆಯಲ್ಲಿ ಪಾಲ್ಗೊಂಡರೆ, ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷ 96 ವರ್ಷದ ವೈ.ಸಿ.ರೇವಣ್ಣ, ಕಾರ್ಯದರ್ಶಿ ಎ.ಯೋಗಾನಂದ, ಕಾರ್ಪೊರೇಟರ್ ಪ್ರಮೀಳಾ ಭರತ್, ಲೇಖಕ ಪಂಡಿತಾರಾಧ್ಯ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ ಇನ್ನಿತರರು ಇಡೀ ಮಾರ್ಗದಲ್ಲಿ ಪಾದಯಾತ್ರೆಯಲ್ಲೇ ತೆರಳಿದರು.

ಮೆರವಣಿಗೆ ಆರಂಭಕ್ಕೂ ಮುನ್ನ ವೈ.ಸಿ.ರೇವಣ್ಣ ಅವರು ತ್ರಿವರ್ಣ ಧ್ವಜಾರೋಹಣ ನೆರವೇರಿಸಿ, ಸುಬ್ಬರಾಯನಕೆರೆಯಲ್ಲಿ ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಮೆರವಣಿಗೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಉಪಾಧ್ಯಕ್ಷರಾದ ಡಾ.ಎಂ.ಸೋಮಶೇಖರಯ್ಯ, ಪದಾಧಿಕಾರಿಗಳಾದ ಸಿ.ಆರ್.ರಂಗಶೆಟ್ಟಿ, ಹಾಲೇಗೌಡ, ಹೋರಾಟಗಾರರ ಪತ್ನಿಯರಾದ ವೇದಾಂಬ, ಗಿರಿಜಾ ಅಶ್ವಥ್‌ನಾರಾಯಣ, ನವ್ಯಶ್ರೀ, ಸಂಘದ ಗ್ರಂಥಪಾಲಕ ಡಿ.ರವಿ, ಹಾರ್ಡ್ವಿಕ್ ಶಾಲೆಯ ಕೃಷ್ಣಾನಾಯಕ್ ಇನ್ನಿತರರು ಭಾಗವಹಿಸಿದ್ದರು.

ಮೈಸೂರು ಚಲೋ ಚಳುವಳಿಯು ಪ್ರಜಾಸತ್ತಾತ್ಮಕ ಮತ್ತು ಜವಾಬ್ದಾರಿಯುತ ಸರ್ಕಾರವನ್ನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸುವ ಗುರಿಯನ್ನು ಹೊಂದಿತ್ತು. ಆಗಿನ ಆಡಳಿತಗಾರರು ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸರ್ಕಾರಕ್ಕೆ ಅಧಿಕಾರವನ್ನು ಹಸ್ತಾಂತರಿಸುವ ಮತ್ತು ಆ ಮೂಲಕ ಅಕ್ಟೋಬರ್‌ನಲ್ಲಿ ಭಾರತೀಯ ಒಕ್ಕೂಟಕ್ಕೆ ಸೇರುವ ನಿರ್ಧಾರವನ್ನು ಪ್ರಕಟಿಸಿದ್ದರು.

ರಸ್ತೆ ಗುಂಡಿಗಳಲ್ಲಿ ದೀಪ ಬೆಳಗಿಸಿ ಸಾಂಕೇತಿಕ ಪ್ರತಿಭಟನೆ



ಮೈಸೂರು, ಅ.24(ಎಸ್‌ಪಿಎನ್)– ಮೃತ್ಯು ಸ್ವರೂಪದ ಗುಂಡಿಗಳ ಸುತ್ತ ಹಣತೆಗಳನ್ನು ಬೆಳಗಿಸಿ ಕೃಷ್ಣರಾಜ ಯುವ ಬಳಗದವರು ಮಂಗಳವಾರ ವಿಶೇಷವಾಗಿ ದೀಪಾವಳಿಯನ್ನು ಆಚರಿಸಿ, ಮೈಸೂರು ನಗರ ಪಾಲಿಕೆ ಅಧಿಕಾರಿಗಳ ವಿರುದ್ಧ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ಮೈಸೂರಿನ ಮಧ್ವಾಚಾರ್ಯ ರಸ್ತೆ ಬಳಿಯಿರುವ ಗಾಡಿ ಚೌಕ ಸಮೀಪ ರಸ್ತೆಯಲ್ಲಿ ಆಳುದ್ದ ಗುಂಡಿಗಳು ಬಿದ್ದಿವೆ. ಇದರಿಂದ ಈ ಮಾರ್ಗದಲ್ಲಿ ಸಂಚರಿಸಲು ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮೈಸೂರು ನಗರದ ಯಾವುದೇ ರಸ್ತೆಯಲ್ಲಿ ಸಂಚರಿಸಿದರೂ ಗುಂಡಿಮಯ. ಈ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳ ಗಮನ ಸೆಳೆಯಲು ವಿಶೇಷವಾಗಿ ಗುಂಡಿಗಳ ಸುತ್ತ ದೀಪಗಳನ್ನು ಬೆಳಗಿಸುವ ಮೂಲಕ ಪಾಲಿಕೆ ವಿರುದ್ಧ ಅಣಕು ಪ್ರತಿಭಟನೆ ಮಾಡಲಾಗಿದೆ.

ದಸರೆಯೊಳಗೆ ನಗರದ ಎಲ್ಲಾ ರಸ್ತೆಗಳನ್ನು ದುರಸ್ತಿಗೊಳಿಸಲಾಗುವುದು ಎಂದು ಉಸ್ತುವಾರಿ ಸಚಿವರು ಹಾಗೂ ಮೇಯರ್ ಮೈಸೂರಿನ ಜನತೆಗೆ ಭರವಸೆ ನೀಡಿದ್ದರು. ಆದರೆ ದಸರಾ ಮುಗಿದು 20 ದಿನಗಳಾದರೂ ರಸ್ತೆ ದುರಸ್ತಿಗೊಳಿಸುತ್ತಿಲ್ಲ ಎಂದು ಪ್ರತಿಭಟನಾಕಾರರು ದೂರಿದರು.

ಮೈಸೂರಿನ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದ ನಗರದ ಪ್ರಮುಖ ರಸ್ತೆಗಳು ಗುಂಡಿಮಯವಾಗಿದ್ದು, ಅಪಘಾತ ಹೆಚ್ಚಾಗುತ್ತಿವೆ. ಇತ್ತೀಚಿನ ದಿನಗಳಲ್ಲಿ ಗುಂಡಿ ಬಿದ್ದ ಜಾಗದಲ್ಲಿ ವಾಹನ ಚಲಾಯಿಸಲು ಸಾಧ್ಯವಾಗದೇ 28 ಮಂದಿ ವಾಹನ ಸವಾರರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇದಕ್ಕೆ ನಗರಪಾಲಿಕೆ ಅಧಿಕಾರಿಗಳೇ ಹೊಣೆಗಾರರಾಗಿದ್ದು, ಕೂಡಲೇ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು. ಎಲ್ಲಾ ಗುಂಡಿಗಳನ್ನು ಮುಚ್ಚುವ ಮೂಲಕ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಅಹಿಂದ ನಟರಾಜ್, ಕೃಷ್ಣರಾಜ ಯುವ ಬಳಗದ ಅಧ್ಯಕ್ಷ ನವೀನ್ ಕೆಂಪಿ, ಪ್ರದೀಪ್ ಕುಮಾರ್, ಎಸ್.ಎನ್. ರಾಜೇಶ್, ತೀರ್ಥಕುಮಾರ್ ಹಾಗೂ ಇನ್ನಿತರರು ಹಾಜರಿದ್ದರು.



ಮೈಸೂರು ಜಿಲ್ಲಾ ಫೋಟೋಗ್ರಾಫರ್ಸ್ ಅಂಡ್ ವೀಡಿಯೋಗ್ರಾಫರ್ಸ್ ಅಸೋಸಿಯೇಷನ್‌ನ ನೂತನ ಪದಾಧಿಕಾರಿಗಳ ಆಯ್ಕೆ ಇತ್ತೀಚೆಗೆ ನಡೆಯಿತು. ಅಧ್ಯಕ್ಷರಾಗಿ ಮಹೇಶ್ ದಡದಹಳ್ಳಿ, ಉಪಾಧ್ಯಕ್ಷ ಮಾದೇಶ್.ಬಿ, ಕಾರ್ಯದರ್ಶಿ ಜಿ.ಎಂ. ಸುದರ್ಶನ್, ಖಜಾಂಚಿ ಲೋಕೇಶ್ ಎಂ, ಸಹ ಕಾರ್ಯದರ್ಶಿ ಪ್ರಮೋದ್ ಆರ್, ಜನಸಂಪರ್ಕ ಅಧಿಕಾರಿ ಮಂಜುನಾಥ್ ಬಿ, ಆರೋಗ್ಯ ನಿಧಿ ಅಧ್ಯಕ್ಷ ಹೆಚ್.ಎಸ್. ಶಿವಕುಮಾರ್, ನಿರ್ದೇಶಕರುಗಳಾಗಿ ಎ. ಮೋಹನ್, ಚೈತನ್ಯ ರಾವ್,ಮಂಜುನಾಥ್, ರವಿಚಂದ್ರಜೆ, ಉಮೇಶ್ ಕೆ ಕಾಂತರಾಜ್, ಮಾಜಿ ನಿರ್ದೇಶಕರಾದ ಧನಂಜಯ, ಕಾಂಗ್ರೆಸ್ ಮುಖಂಡರಾದ ವಿಶ್ವನಾಥ್(ವಿಶ್ವ) ಆಯ್ಕೆಯಾಗಿದ್ದಾರೆ. ಇವರನ್ನು ಸಂಘದ ಗೌರವಾಧ್ಯಕ್ಷ ಹಾಗೂ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅಭಿನಂದಿಸಿದರು.

ನೆದರ್ಲೆಂಡ್ಸ್ ವಿರುದ್ಧ ಬಾಂಗ್ಲಾಗೆ 9 ರನ್ ಜಯ



ಹೋಬರ್ಟ್, ಅ.24– ತಸ್ಕಿನ್ ಅಹಮದ್ ಅವರ ಕರಾರುವಾಕ್ ಬೌಲಿಂಗ್ ನೆರವಿನಿಂದ ಬಾಂಗ್ಲಾದೇಶ ನೆದರ್ಲೆಂಡ್ಸ್ ವಿರುದ್ಧ 9 ರನ್‌ಗಳ ಗೆಲುವು ಸಾಧಿಸಿದೆ.

ಇಲ್ಲಿನ ಬೆಲ್ಲೆರಿವ್ ಓವಲ್ ಮೈದಾನದಲ್ಲಿ ನಡೆದ ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿಯ ಸೂಪರ್ 12 ಹಂತದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 144 ರನ್ ಗಳಿಸಿತು. ತಂಡದ ಪರ ನಜ್ಮುಲ್ ಹೊಸ್ಸೈನ್ ಶಾಂತೋ 25, ಸೌಮ್ಯ ಸರ್ಕಾರ್ 14, ಆಫೀಫ್ ಹುಸೇನ್ 38, ನೂರಲ್ ಹಸನ್ 13, ಮೊಸದೀಕ್ ಹುಸೇನ್ 20 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಪಾಲ್ ವ್ಯಾನ್ ಮೀಕೆರೆನ್, ಬಾಸ್ ಡಿ ಲೀಡೆ ತಲಾ 2, ಟೀಮ್ ಪ್ರಿಂಗಲ್, ಫ್ರೆಡ್ ಕ್ಲಾಸೆನ್, ಶರೀಜ್ ಅಹ್ಮದ್ ಹಾಗೂ ವ್ಯಾನ್ ಬೀಕ್ ತಲಾ ಒಂದೊಂದು ವಿಕೆಟ್ ಪಡೆದರು. 145 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ ನಿಗದಿತ 20 ಓವರ್‌ಗಳಲ್ಲಿ 135 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಕಾಲಿನ್ ಅಕರ್ಮನ್ 62, ಸ್ಕಾಟ್ ಎಡ್ವರ್ಡ್ಸ್ 16, ಪಾಲ್ ವ್ಯಾನ್ ಮೀಕೆರೆನ್ 24 ರನ್‌ಗಳಿಸಿದರು. ಬಾಂಗ್ಲಾ ಪರ ತಸ್ಕಿನ್ ಅಹಮದ್ 4, ಹಸನ್ ಮಹಮೂದ್ 2, ಶಕೀಬ್ ಅಲ್ ಹಸನ್ ಹಾಗೂ ಸೌಮ್ಯ ಸರ್ಕಾರ್ ಒಂದೊಂದು ವಿಕೆಟ್ ಉರುಳಿಸಿದರು. ತಸ್ಕಿನ್ ಅಹಮದ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಜಿಂಬಾಬ್ವೆ–ದಕ್ಷಿಣ ಆಫ್ರಿಕಾ ಪಂದ್ಯಕ್ಕೆ ಮಳೆ ಅಡ್ಡಿ: ಉಭಯ ತಂಡಗಳಿಗೂ ತಲಾ 1 ಪಾಯಿಂಟ್



ಹೋಬರ್ಟ್, ಅ.24– ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯ ಜಿಂಬಾಬ್ವೆ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಪಂದ್ಯಕ್ಕೆ ಮಳೆ ಅಡ್ಡಿಯಾಗಿದ್ದು, ಯಾವುದೇ ಫಲಿತಾಂಶ ಬಂದಿಲ್ಲ.

ಹೋಬರ್ಟ್‌ನಲ್ಲಿ ನಡೆದ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಹೀಗಾಗಿ ಮೊದಲು ಬ್ಯಾಟಿಂಗ್ ಮಾಡಿದ್ದ ಜಿಂಬಾಬ್ವೆ 9 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 79 ರನ್ ಬಾರಿಸಿತ್ತು. ನಂತರ ಮತ್ತೆ ಮಳೆಯಾಗಿದ್ದರಿಂದ ದಕ್ಷಿಣ ಆಫ್ರಿಕಾಗೆ 7 ಓವರ್‌ಗಳಲ್ಲಿ 64 ರನ್ ಗುರಿ ನೀಡಲಾಯಿತು. 64 ರನ್‌ಗಳ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ 3 ಓವರ್‌ಗಳಲ್ಲಿ 51 ರನ್ ಬಾರಿಸಿತ್ತು. ಈ ವೇಳೆ ಮತ್ತೆ ಮಳೆ ಬೀಳಲು ಶುರು ಮಾಡಿದ್ದರಿಂದ ಪಂದ್ಯವನ್ನು ನಿಲ್ಲಿಸಲಾಯಿತು. ಮತ್ತೆ ಪಂದ್ಯ ಆರಂಭವಾಗದ್ದರಿಂದ ಫಲಿತಾಂಶ ಬಂದಿಲ್ಲ. ಇನ್ನು ಉಭಯ ತಂಡಗಳಿಗೂ ತಲಾ 1 ಅಂಕ ನೀಡಲಾಗಿದ್ದು ಗ್ರೂಪ್ 2 ಅಂಕಪಟ್ಟಿಯಲ್ಲಿ ಆಫ್ರಿಕಾ 3ನೇ ಹಾಗೂ ಜಿಂಬಾಬ್ವೆ ನಾಲ್ಕನೇ ಸ್ಥಾನದಲ್ಲಿದೆ. ಇನ್ನು ಬಾಂಗ್ಲಾದೇಶ ಮೊದಲ ಸ್ಥಾನದಲ್ಲಿದ್ದು, ನಿನ್ನೆ ಪಾಕ್ ವಿರುದ್ಧ ವೀರೋಚಿತ ಗೆಲುವು ಸಾಧಿಸಿರುವ ಟೀಂ ಇಂಡಿಯಾ 2ನೇ ಸ್ಥಾನದಲ್ಲಿದೆ.

ಮ್ಯಾನ್ಮಾರ್ ಸೇನೆಯಿಂದ ವೈಮಾನಿಕ ದಾಳಿ: 60 ಸಾವು

ನೈಪಿಡಾವ್: ಮ್ಯಾನ್ಮಾರ್‌ನ ಕಾಚಿನ್ ರಾಜ್ಯದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮವೊಂದರ ಮೇಲೆ ಮ್ಯಾನ್ಮಾರ್. ಸೇನೆಯು ವೈಮಾನಿಕ ದಾಳಿ ನಡೆಸಿದೆ. ಸ್ಥಳೀಯ ಗಾಯಕರು, ನೃತ್ಯ ಕಲಾವಿದರು ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. 3 ಜೆಟ್‌ಗಳನ್ನು ಬಳಸಿಕೊಂಡು ಸೇನೆಯು ದಾಳಿ ನಡೆಸಿದ್ದಾಗಿ ವರದಿಯಾಗಿದೆ. ಹಲವು ಪ್ರಸಿದ್ಧ ಗಾಯಕರು ಸೇರಿದಂತೆ 60ಕ್ಕೂ ಅಧಿಕ ಮಂದಿ ಸಾವನ್ನಪ್ಪಿರುವ ಅನುಮಾನವಿದೆ. ಯೋಧರು ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳದ ಸುತ್ತಲೂ ಚೆಕ್‌ಪಾಯಿಂಟ್‌ಗಳನ್ನು ರಚಿಸಿಕೊಂಡಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲು ಅನುಮತಿ ನೀಡುತ್ತಿಲ್ಲ ಎಂದು ವರದಿಯಾಗಿದೆ. ಮ್ಯಾನ್ಮಾರ್‌ನಲ್ಲಿ ಜನಾಂಗೀಯ ಅಲ್ಪಸಂಖ್ಯಾತರು ಮತ್ತು ಸರ್ಕಾರದ ಮಧ್ಯೆ ಹಿಂಸಾಚಾರ ಹೆಚ್ಚಾಗಿದೆ.

ಇಂದಿನಿಂದ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರೆ

ಮೂರು ದಿನ ಧಾರ್ಮಿಕ ಕೈಂಕರ್ಯದ ಜೊತೆಗೆ ಸಾಂಸ್ಕೃತಿಕ–ಕ್ರೀಡಾ ಉತ್ಸವದ ಸಂಭ್ರಮ



ಮೈಸೂರು,ಅ.24(ಪಿಎಂ)– ದೀಪಾವಳಿ ಹಬ್ಬದ ಪ್ರಯುಕ್ತ ಪ್ರತಿವರ್ಷ ವಿಜೃಂಭಣೆಯಿಂದ ನಡೆಯುವ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಈ ಬಾರಿ ಅ.25ರಿಂದ 27ರವರೆಗೆ ನಡೆಯಲಿದೆ. ಮೂರು ದಿನಗಳ ಕಾಲ ವಿವಿಧ ಧಾರ್ಮಿಕ ಕೈಂಕರ್ಯದೊಂದಿಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಂಭ್ರಮ ಕಳೆಗಟ್ಟಲಿದೆ.

ಇಲ್ಲಿನ ಶ್ರೀ ಮಹದೇಶ್ವರ ದೇವಸ್ಥಾನದಲ್ಲಿ ಅ.25ರಿಂದ ವಿವಿಧ ಪೂಜಾ ಕೈಂಕರ್ಯ ಆರಂಭಗೊಳ್ಳುವ ಮೂಲಕ ಜಾತ್ರಾ ಮಹೋತ್ಸವ ಚಾಲನೆ ಪಡೆದುಕೊಳ್ಳಲಿದೆ. ಅ.26ರಂದು ಹಾಲರವಿ ಮತ್ತು ಬಾಯಿ ಬೀಗ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ. ಅಂದು ರಾತ್ರಿ 8ಕ್ಕೆ ತಿಪ್ಪಾಜಿ ಕೊಳದಿಂದ ಪ್ರಾರಂಭಗೊಳ್ಳುವ ಹಾಲರವಿ ಮತ್ತು ಬಾಯಿ ಬೀಗದ ಉತ್ಸವವು ಊರಿನ (ಕುಂಬಾರಕೊಪ್ಪಲು) ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ಪೂಜಾ ಕುಣಿತ, ಡೊಳ್ಳು ಕುಣಿತ, ನಾದಸ್ವರ ಸೇರಿದಂತೆ ಇನ್ನಿತರ ಜಾನಪದ ಕಲಾತಂಡಗಳೊಂದಿಗೆ ನಡೆಯುವ ಈ ಉತ್ಸವ ಅಂತಿಮವಾಗಿ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ತಲುಪಿ ಸಮಾಪ್ತಿಗೊಳ್ಳಲಿದೆ. ಅ.27ರಂದು ಬೆಳಗ್ಗೆ 3ಕ್ಕೆ ಶ್ರೀ ಮಹದೇಶ್ವರಸ್ವಾಮಿಯ ಹುಲಿ ವಾಹನೋತ್ಸವ ಜರುಗಲಿದ್ದು, ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದಿಂದ ಹೊರಡುವ ಹುಲಿವಾಹನೋತ್ಸವ, ಊರಿನ ಪ್ರಮುಖ ಬೀದಿಗಳಲ್ಲಿ ಸಾಗುವ ಮೂಲಕ ಬೆಳಗ್ಗೆ 11ಕ್ಕೆ ದೇವಸ್ಥಾನಕ್ಕೆ ಹಿಂತಿರುಗಲಿದೆ. ನಂತರ ದೇವಸ್ಥಾನದ ಆವರಣದಲ್ಲಿ ಕೊಂಡೋತ್ಸವ ನಡೆಯಲಿದೆ.

ಅ.27ರಂದು ಮಧ್ಯಾಹ್ನ 12ಕ್ಕೆ ಗ್ರಾಮದ ಶ್ರೀ ಮಹದೇಶ್ವರ ಸಮುದಾಯ ಭವನದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಅ.27ರಂದು ಕೊಂಡೋತ್ಸವದ ಬಳಿಕ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಜಾತ್ರಾ ಮಹೋತ್ಸವ ಅಂಗವಾಗಿ ಬಯಲು ಕುಸ್ತಿ ಪಂದ್ಯಾವಳಿ ನಡೆಯಲಿದೆ. ಅ.25ರಿಂದ 27ರವರೆಗೆ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಕಬಡ್ಡಿ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ. ಅ.26ರಿಂದ 26ರವರೆಗೆ ಪಿ.ಕೆ.ಸ್ಯಾನಿಟೋರಿಯಂ ಆಸ್ಪತ್ರೆಯ ಮೈದಾನದಲ್ಲಿ ಎತ್ತಿನ ಗಾಡಿಯ ಓಟದ ಸ್ಪರ್ಧೆ ನಡೆಯಲಿದೆ. ಭಕ್ತರು ಜಾತ್ರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಶ್ರೀ ಮಹದೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಬಹುದು. ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಧನ–ದಾನ್ಯ ನೀಡುವ ದಾನಿಗಳು ಕುಂಬಾರ ಕೊಪ್ಪಲು ಅಭ್ಯುದಯ ಸಂಘದ ಕಚೇರಿ ಸಂಪರ್ಕಿಸಬಹುದು ಎಂದು ಸಂಘದ ಪ್ರಕಟಣೆ ತಿಳಿಸಿದೆ.



ಸುನಕ್ ಆಯ್ಕೆ: ಐತಿಹಾಸಿಕ, ಸ್ಫೂರ್ತಿದಾಯಕ ಕ್ಷಣ

ಲಂಡನ್, ಅ.24–ರಿಷಿ ಸುನಕ್ ಅವರು ಬ್ರಿಟನ್ ಪ್ರಧಾನಿಯಾಗಿ ಆಯ್ಕೆಯಾಗಿರುವುದಕ್ಕೆ ಬ್ರಿಟನ್‌ನಲ್ಲಿನ ಭಾರತೀಯ ಸಮುದಾಯದ ನಾಯಕರು ಮತ್ತು ಸಂಘಟನೆಗಳ ಮುಖಂಡರು ಹರ್ಷಗೊಂಡಿದ್ದಾರೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಈ ಬೆಳವಣಿಗೆ ಐತಿಹಾಸಿಕ ಮತ್ತು ಸ್ಫೂರ್ತಿದಾಯಕ ಎಂದು ಅವರು ಬಣ್ಣಿಸಿದ್ದಾರೆ.

ಪ್ರಧಾನಿಯಾಗಿ ಸುನಕ್ ಆಯ್ಕೆಯಾಗಿರುವ ಈ ಐತಿಹಾಸಿಕ ಕ್ಷಣ ಸೋಜಿಗವಾದದ್ದು ಎಂದು ಬ್ರಿಟನ್‌ನ ಭಾರತೀಯ ಚಿಂತನಾ ಚಾವಡಿ 1928 ಸಂಸ್ಥೆ. ನಮ್ಮ ಹಿರಿಯರು ಬ್ರಿಟಿಷರ ಆಳ್ವಿಕೆಯನ್ನು ಕಂಡಿದ್ದರು. ನಾವು ಈಗ ಬ್ರಿಟನ್‌ನ ಅತ್ಯುನ್ನತ ಸ್ಥಾನದಲ್ಲಿ ಭಾರತೀಯ ನಾಯಕನನ್ನು ಕಾಣುತ್ತಿರುವುದು ಪ್ರೇರಣಾದಾಯಕ.

ಮೂರನೇ ಪುಟದಿಂದ

ಇಂದು ದೀಪಾವಳಿಯಂದೇ ಸೂರ್ಯಗ್ರಹಣ

ದೇವರ ಧ್ಯಾನ ಮಾಡಿ. ಈ ಬಾರಿ ಭಾರತ ಮಾತ್ರವಲ್ಲದೆ ವಿಶ್ವದ ಹಲವೆಡೆ ಗ್ರಹಣ ನೋಡಬಹುದಾಗಿದ್ದು, ಖಗೋಳ ಕೌತುಕ ನೋಡಲು ಆಸಕ್ತರು, ವಿದ್ಯಾರ್ಥಿಗಳು, ಸಂಶೋಧಕರು ಕಾತುರದಿಂದ ಕಾದಿದ್ದಾರೆ.

ಭಾರತದಲ್ಲಿ ಎಲ್ಲೆಲ್ಲಿ ಕಾಣಿಸುತ್ತದೆ: ದೆಹಲಿ ಮತ್ತು ಮುಂಬೈನಲ್ಲಿ, ಗ್ರಹಣದ ಪರ್ವ(ಉತ್ತುಂಗ) ಸಮಯ ದಲ್ಲಿ ಚಂದ್ರನು ಸೂರ್ಯನನ್ನು ಆವರಿಸಿಕೊಳ್ಳುವ ಶೇಕಡಾವಾರು ಪ್ರಮಾಣ ಕ್ರಮವಾಗಿ 44% ಮತ್ತು 24% ಇರುತ್ತದೆ. ಚೆನ್ನೈ ಮತ್ತು ಕೋಲ್ಕತ್ತಾದಲ್ಲಿ ಸೂರ್ಯಾಸ್ತದಿಂದ ಸೂರ್ಯಾಸ್ತಮಾನದವರೆಗೆ ಗ್ರಹಣದ ಅವಧಿ ಕ್ರಮವಾಗಿ 31 ನಿಮಿಷ ಮತ್ತು 12 ನಿಮಿಷ ಇರುತ್ತದೆ. ಇತರೆಡೆ ಗ್ರಹಣ ಗೋಚರಿಸುವ ಪ್ರಮಾಣ ಶೇ 20ಕ್ಕಿಂತ ಕಡಿಮೆ ಇರಲಿದೆ.

ಎಲ್ಲೆಲ್ಲಿ ಕಾಣಿಸಲ್ಲ: ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಈಶಾನ್ಯ ಭಾರತದ ಕೆಲವು ಭಾಗಗಳಲ್ಲಿ (ಐಜ್ವಾಲ್, ದಿಬ್ರುಗಢ್, ಇಂಫಾಲ್, ಇಟಾನಗರ, ಕೊಹಿಮಾ, ಸಿಬ್ಸಾಗರ್, ಸಿಲ್ಚಾರ್, ತಮೆಲಾಂಗ್ ಇತ್ಯಾದಿ) ಸೂರ್ಯಗ್ರಹಣ ನೋಡಲು ಸಾಧ್ಯವಿಲ್ಲ.

ವಿಶ್ವದಲ್ಲಿ ಎಲ್ಲೆಲ್ಲಿ ಗೋಚರಿಸಲಿದೆ: ಯುರೋಪ್, ಪಶ್ಚಿಮ ಏಷ್ಯಾ, ಈಶಾನ್ಯ ಆಫ್ರಿಕಾದಲ್ಲಿ ಗೋಚರಿಸಲಿದೆ ಯುಎಸ್ ಸೇರಿದಂತೆ ಕೆಲವೆಡೆ ನೇರ ವೀಕ್ಷಣೆ ಸಾಧ್ಯವಿಲ್ಲ ದಿದ್ದರೂ ಆನ್‌ಲೈನ್‌ನಲ್ಲಿ ಸೂರ್ಯಗ್ರಹಣ ವೀಕ್ಷಿಸಬಹುದು. ರೋಮ್, ಇಟಲಿ ಸೇರಿದಂತೆ ವಿವಿಧೆಡೆ ಟೆಲಿಸ್ಕೋಪ್ ಅಳವಡಿಸಲಾಗಿದ್ದು, ಇದಲ್ಲದೆ, ಖಗೋಳ ವಿದ್ಯಮಾನ ವೀಕ್ಷಿಸಲು ವರ್ಚುವಲ್ ಟೆಲಿಸ್ಕೋಪ್ ಪ್ರಾಜೆಕ್ಟ್ 2.0 ಆನ್‌ಲೈನ್ ವ್ಯವಸ್ಥೆ ಮಾಡಿದೆ. ಟೈಮ್ ಅಂಡ್ ಡೇಟ್ ತಂಡ ಕೂಡಾ ಲೈವ್ ಸ್ಟ್ರೀಮಿಂಗ್ ಮಾಡುತ್ತಿದ್ದು, ಸೂರ್ಯ ಗ್ರಹಣವನ್ನು ಈ ಯೂಟ್ಯೂಬ್ ಚಾನೆಲ್ ಮೂಲಕ ವೀಕ್ಷಿಸಬಹುದು. ಪ್ರಪಂಚದಲ್ಲಿ ಎಲ್ಲಿಯೂ ಸಂಪೂರ್ಣ ಸೂರ್ಯಗ್ರಹಣವಾಗುವುದಿಲ್ಲ. ಏಕೆಂದರೆ ಈ ಸಂದರ್ಭದಲ್ಲಿ ಚಂದ್ರ ಮತ್ತು ಸೂರ್ಯನು ಸಂಪೂರ್ಣವಾಗಿ ಒಂದೇ ಸಾಲಿನಲ್ಲಿ ಜೋಡಿಸಲ್ಪಡುವುದಿಲ್ಲ, ಆದ್ದರಿಂದ ಭೂಮಿಯ ಮೇಲೆ ಎಲ್ಲಿಯೂ ಚಂದ್ರನು ಸೂರ್ಯನನ್ನು ಸಂಪೂರ್ಣವಾಗಿ ಆವರಿಸುವುದಿಲ್ಲ.

ರಿಷಿ ಸುನಕ್ ಬ್ರಿಟನ್ ಪ್ರಧಾನಿ

ಹಾಗೂ 2019ರಲ್ಲೂ ಮರು ಆಯ್ಕೆಯಾದರು. 2018ರಲ್ಲಿ ಸಚಿವರಾದ ಅವರು, ಸ್ಥಳೀಯ ಸರ್ಕಾರದ ಸಂಸದೀಯ ಅಧೀನ ಕಾರ್ಯದರ್ಶಿಯಾಗಿ

ನೇಮಕಗೊಂಡರು. 2019ರ ಜುಲೈನಲ್ಲಿ ಬ್ರಿಟನ್‌ನ ಹಣಕಾಸು ಇಲಾಖೆಯ ಮುಖ್ಯ ಕಾರ್ಯದರ್ಶಿಯಾಗಿ ನೇಮಕಗೊಂಡರು. 2020ರ ಫೆಬ್ರವರಿಯಲ್ಲಿ ಬ್ರಿಟನ್‌ನ ಹಣಕಾಸು ಸಚಿವರಾದ ರಿಷಿ ಸುನಕ್ ಕೊರೊನಾ ಸಾಂಕ್ರಾಮಿಕ ಸಂದರ್ಭ ಬ್ರಿಟನ್‌ನ ಉದ್ಯಮಗಳ ರಕ್ಷಣೆಗೆ 410 ಬಿಲಿಯನ್ ಪೌಂಡ್ ರಕ್ಷಣಾ ಪ್ಯಾಕೇಜ್ ಘೋಷಿಸಿದ್ದಕ್ಕಾಗಿ ಭಾರೀ ಮೆಚ್ಚುಗೆಗೆ ಪಾತ್ರರಾಗಿದ್ದರು. ಕೊರೊನಾ ವೇಳೆ ಬ್ರಿಟನ್ ನಿವಾಸಿಗಳ ಮನೆ ನಿರ್ವಹಣೆಗೆ ಸಾಕಷ್ಟು ಹಣ ನೀಡಿದ್ದಕ್ಕೆ ಅಮು ಟೀಕೆಗೆ ಗುರಿಯಾದರಾದರೂ ಭಾರೀ ಜನಮನ್ನಣೆ ಪಡೆದರು. ಸುನಕ್ ಅವರ ತಂದೆ ಯಶವೀರ್ ಸುನಕ್ ರಾಷ್ಟ್ರೀಯ ಆರೋಗ್ಯ ಸೇವೆಯ ವೈದ್ಯರಾಗಿದ್ದರು. ತಾಯಿ ಉಷಾ ಸುನಕ್ ರಸಾಯನ ಶಾಸ್ತ್ರಜ್ಞರ ಅಂಗಡಿ ನಡೆಸುತ್ತಿದ್ದರು. ತಂದೆ–ತಾಯಿ ಸ್ಥಳೀಯ ಸಮುದಾಯಗಳಿಗೆ ಸೇವೆ ಸಲ್ಲಿಸುವುದನ್ನು ನೋಡುತ್ತಾ ಬೆಳೆದಿದ್ದೆ. ಇದೀಗ ನನಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದ್ದು, ನನ್ನ ಅದೃಷ್ಟ ಎಂದು ಈ ಹಿಂದೆ ಸಂದರ್ಶನವೊಂದರಲ್ಲಿ ಸುನಕ್ ಹೇಳಿಕೊಂಡಿದ್ದರು. ರಿಷಿ ಸುನಕ್ ಮತ್ತು ಅಕ್ಷತಾಮೂರ್ತಿ ದಂಪತಿಗೆ ಕೃಷ್ಣ ಮತ್ತು ಅನುಷ್ಕಾ ಎಂಬ ಇಬ್ಬರು ಮಕ್ಕಳಿದ್ದಾರೆ.

ಬೊಮ್ಮಾಯಿಗೆ ದೆಹಲಿ ಬುಲಾವ್

ಕಾಂಗ್ರೆಸ್‌ನ ಆರೋಪಗಳಿಗೆ ಉತ್ತರ ನೀಡುವುದು ಮತ್ತು ರಾಜಕೀಯವಾಗಿ ಅವರ ವಿರುದ್ಧ ಹೋರಾಟ ನಡೆಸಲು ಗೃಹ ಸಚಿವರು ಮುಖ್ಯಮಂತ್ರಿಯವರಿಗೆ ಸಲಹೆ ಸೂಚನೆ ನೀಡಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು, ನವೆಂಬರ್ 2ನೇ ವಾರದಲ್ಲಿ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಈ ವೇಳೆಗೆ ಪ್ರತಿಪಕ್ಷ ಕಾಂಗ್ರೆಸ್ ವಿರುದ್ಧದ ಹಿಂದಿನ ಹಗರಣಗಳನ್ನು ತೆರೆದಿಡುವುದು, ಇದರಲ್ಲಿ ಅಡಕವಾಗಿದೆ ಎನ್ನಲಾಗಿದೆ. ಅಮಿತ್ ಷಾ ಬುಲಾವ್ ಬೆನ್ನಲ್ಲೆ ಮುಖ್ಯಮಂತ್ರಿಯವರು, ವರಿಷ್ಠರನ್ನು ಭೇಟಿ ಮಾಡುವುದಾಗಿ ನಿನ್ನೆ ಮಾಧ್ಯಮಗಳ ಮುಂದೆ ಬಹಿರಂಗಪಡಿಸಿದ್ದಾರೆ.

ದೆಹಲಿ ಭೇಟಿ ಸಂದರ್ಭದಲ್ಲಿ ಮಂತ್ರಿಮಂಡಲ ವಿಸ್ತರಣೆಗೆ ಅನುಮತಿ ಕೋರುವುದಾಗಿಯು ತಿಳಿಸಿದ್ದಾರೆ. ಮುಖ್ಯಮಂತ್ರಿಯವರು ಕೋರಿಕೆಗೆ ಮನ್ನಣೆ ನೀಡುತ್ತಾರೋ ಇಲ್ಲವೇ ಚುನಾವಣೆಗೆ ಸೀಮಿತವಾಗಿ ಚರ್ಚೆ ಮಾಡುತ್ತಾರೋ ಕಾದು ನೋಡಬೇಕು.

ಕೊನೆಯ ಆಯ್ಕೆ ಎಂದು ಪರಿಗಣಿಸುತ್ತದೆ

ರಕ್ಷಾ ಕವಚ ಆಗಿದ್ದನ್ನು ನಾವು ನೋಡಿದ್ದೇವೆ. ವಿಶ್ವಾದ್ಯಂತ ಭಾರತದ ಮೇಲಿನ ಗೌರವ ಹೆಚ್ಚಾಗಿದೆ. ದೇಶದ ಒಳಗೆ ಮತ್ತು ಹೊರಗಿರುವ ಶತ್ರುಗಳ ವಿರುದ್ಧ ಭಾರತ ಯಶಸ್ವಿಯಾಗಿ ನಿಂತಿದ್ದಕ್ಕೆ ಇದೆಲ್ಲ ಸಾಧ್ಯವಾಯಿತು. ನೀವೆಲ್ಲರೂ ಗಡಿಯಲ್ಲಿ ನಮ್ಮನ್ನು ರಕ್ಷಿಸುತ್ತಿರುವಂತೆಯೇ ನಾವು ದೇಶದೊಳಗೆ ಭಯೋತ್ಪಾದನೆ, ನಕ್ಸಲ್, ಭ್ರಷ್ಟಾಚಾರದಂತಹ ದುಷ್ಟರ ವಿರುದ್ಧ ಹೋರಾಡಲು ಕೆಲಸ ಮಾಡು ತ್ತಿದ್ದೇವೆ. ನಕ್ಸಲರು ರಾಷ್ಟ್ರದ ಬಹುದೊಡ್ಡ ಭಾಗವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತ್ತು. ಆದರೆ, ಇಂದು ಅದು ವೇಗವಾಗಿ ಕಡಿಮೆ ಯಾಗುತ್ತಿದೆ ಎಂದು ತಿಳಿಸಿದರು. ಈ ದೇಶದ ಸೈನಿಕರು ತಮ್ಮ ಜವಾಬ್ದಾರಿಯನ್ನು ಅರಿತು ಕೊಳ್ಳಲು ಅನುಕೂಲವಾಗುವಂತೆ ಗಡಿ ಪ್ರದೇಶಗಳಲ್ಲಿ ತಡೆರಹಿತ ಸಂಪರ್ಕದೊಂದಿಗೆ ಹೈಟೆಕ್ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಮಹಿಳಾ ಅಧಿಕಾರಿಗಳ ಸೇರ್ಪಡೆ ನಮ್ಮ ಶಕ್ತಿಯ ಬೆಳವಣಿಗೆಗೆ ಕಾರಣವಾಗುತ್ತದೆ ಎಂದರು.

ಅಭಿನಂದನೆ: ವಂದನೆ ಸಲ್ಲಿಸಿದ ರಿಷಿ

ಅಭಿನಂದನೆಗಳು. ಇನ್‌ಫೋಸಿಸ್ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಎಸ್.ಆರ್. ನಾರಾಯಣಮೂರ್ತಿ ಹಾಗೂ ಶ್ರೀಮತಿ ಸುಧಾಮೂರ್ತಿ ಅವರ ಅಳಿಯಂದಿರಾದ ರಿಷಿ ಸುನಕ್ ಅವರ ಆಯ್ಕೆ ನನಗೆ ಅತೀವ ಸಂತಸ ತಂದಿದೆ. ಆರ್ಥಿಕ ಸಂಕಷ್ಟ ಕಾಲದಲ್ಲಿ ರಿಷಿ ಸುನಕ್ ಅವರು ದೇಶದ ಚುಕ್ಕಾಣಿ ಹಿಡಿಯುತ್ತಿದ್ದಾರೆ. ಅವರು ದೇಶವನ್ನು ಸಮರ್ಥವಾಗಿ ಮುನ್ನಡೆಸುತ್ತಾರೆ ಎಂಬ ವಿಶ್ವಾಸ ನನಗಿದೆ" ಎಂದು ಹೆಚ್.ಡಿ. ಕುಮಾರಸ್ವಾಮಿ ಟ್ವೀಟ್ ಮಾಡಿದ್ದರೆ, ಕೇವಲ ಒಂದೇ ನಿಮಿಷದಲ್ಲಿ "ಥ್ಯಾಂಕ್ಸ್ ಕುಮಾರಣ್ಣ" ಎಂದು ರಿಷಿ ಸುನಕ್ ರೀ–ಟ್ವೀಟ್ ಮಾಡಿದ್ದಾರೆ.

ಸಂರಕ್ಷಣೆಗೆ ಮುಂದಾದ ಅಧಿಕಾರಿ ವರ್ಗ

ನುರಿತ ಕೆಲಸಗಾರರು, ಸಲಕರಣೆಗಳು, ಸಮಯ ಬೇಕಾಗುತ್ತದೆ. ಅದಕ್ಕಾಗಿ ಅತ್ಯಗತ್ಯ ಮತ್ತು ತ್ವರಿತವಾಗಿ ಕಾಮಗಾರಿ ಕೈಗೊಳ್ಳಲು ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸುತ್ತೇವೆ ಎಂದು ದೇವರಾಜು ತಿಳಿಸಿದರು. ಪರಿಶೀಲನೆ ನಡೆಸುವ ಪಾರಂಪರಿಕ ತಜ್ಞರು, ಕಟ್ಟಡದ ಇತಿಹಾಸ, ಹಿನ್ನೆಲೆ, ನಿರ್ಮಾಣವಾದ ವರ್ಷ, ಅದರ ವಿನ್ಯಾಸ, ದುರಸ್ತಿ ಮಾಡುವುದೇ ಅಥವಾ ಕೆಡವಿ ಹೊಸದಾಗಿ ನಿರ್ಮಿಸಬೇಕೆ ಎಂಬುದರ ಬಗ್ಗೆ ಪರಿಶೀಲಿಸಿ ಸಮಗ್ರ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸುತ್ತೇವೆ. ಒಂದು ವೇಳೆ ಸರ್ಕಾರದಿಂದ ನಿರ್ದೇಶನ ಬಂದಲ್ಲಿ ಪಾರಂಪರಿಕ ಕಟ್ಟಡಗಳನ್ನು ಯಥಾವತ್ತಾಗಿ ಸಂರಕ್ಷಿಸಿ ಸಂಭವಿಸಬಹುದಾದ ಅಪಾಯವನ್ನು ತಡೆಗಟ್ಟಲಾಗುವುದು ಎಂದು ಅವರು ನುಡಿದರು.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಮಾಡೆಲ್ ಬಿಲ್ಡಿಂಗ್ (ತಿದ್ದುಪಡಿ) ಬೈಲಾ–2021ರ ಪ್ರಕಾರ 1ನೇ ಗ್ರೇಡ್ ಕಟ್ಟಡಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಾಮುಖ್ಯತೆ ಸಾರುವ ಕಟ್ಟಡಗಳಾಗಿದ್ದು, ಅವು ತನ್ನದೇ ಆದ ಪುರಾತತ್ವ ವಿನ್ಯಾಸ ಹೊಂದಿರುತ್ತವೆ. 2ನೇ ಗ್ರೇಡ್ ಕಟ್ಟಡಗಳು ಸ್ಥಳೀಯ ಲ್ಯಾಂಡ್ ಮಾರ್ಕ್ ಆಗಿರುತ್ತವೆ. 3ನೇ ಗ್ರೇಡ್ ಹೆರಿಟೇಜ್ ಕಟ್ಟಡಗಳು ವಾಸ್ತುಶಿಲ್ಪ, ಸೌಂದರ್ಯ ಹಾಗೂ ಸಾಮಾಜಿಕ ಪ್ರಾಮುಖ್ಯತೆ ಪಡೆದಿರುತ್ತವೆ ಎಂದು ದೇವರಾಜು ತಿಳಿಸಿದರು.

ಬಿಜೆಪಿ ಸೇರಲಿದ್ದಾರೆ 22 ಶಾಸಕರು

ಬೇಕಾದರೂ ತೆಗೆಯಲಾಗುವುದು ಎಂದು ಈಗ ಎಲ್ಲರಿಗೂ ಅರ್ಥವಾಗಿದೆ. ಅಂಧೇರಿ ಪೂರ್ವ ಉಪಚುನಾವಣೆಯಲ್ಲಿ ಶಿಂಧೆ ಅವರ ಗುಂಪು ಅಭ್ಯರ್ಥಿ ಯನ್ನು ಕಣಕ್ಕಿಳಿಸಬೇಕಿತ್ತು ಆದರೆ ಅದನ್ನು ತಪ್ಪಿಸಿದ್ದು ಬಿಜೆಪಿ ಎಂದು ಸಾಮ್ನಾದಲ್ಲಿನ ರೋಕ್‌ಠೋಕ್ ಅಂಕಣದಲ್ಲಿ ಹೇಳಲಾಗಿದೆ. ಮಹಾರಾಷ್ಟ್ರದ ಗ್ರಾಮ ಪಂಚಾಯಿತಿ ಮತ್ತು ಸರಪಂಚ್ ಚುನಾವಣೆಯಲ್ಲಿ ಶಿಂಧೆ ಬಣದ ಯಶಸ್ಸಿನ ಹೇಳಿಕೆ ಸುಳ್ಳು. ಶಿಂಧೆ ಗುಂಪಿನ ಕನಿಷ್ಠ 22 ಶಾಸಕರು ಅಸಮಾಧಾನಗೊಂಡಿದ್ದಾರೆ. ಈ ಬಹುಪಾಲು ಶಾಸಕರು ಬಿಜೆಪಿಯೊಂದಿಗೆ ವಿಲೀನಗೊಳ್ಳಲಿದ್ದಾರೆ ಎಂದು ಅಂಕಣದಲ್ಲಿ ಹೇಳಲಾಗಿದೆ. ಶಿಂಧೆಯವರು ತನಗೆ ಮತ್ತು ಮಹಾರಾಷ್ಟ್ರಕ್ಕೆ ದೊಡ್ಡ ಹಾನಿಯನ್ನು ಉಂಟು ಮಾಡಿದ್ದಾರೆ. ರಾಜ್ಯವು ಅವರನ್ನು ಕ್ಷಮಿಸುವುದಿಲ್ಲ. ಬಿಜೆಪಿ ತಮ್ಮ ಲಾಭಕ್ಕಾಗಿ ಶಿಂಧೆ ಅವರನ್ನು ಇನ್ನೂ ಬಳಸಿಕೊಳ್ಳುತ್ತದೆ ಎಂದು ಉದ್ಧವ್ ನೇತೃತ್ವದ ಸೇನೆ ತನ್ನ ಮುಖವಾಣಿಯಲ್ಲಿ ಹೇಳಿಕೊಂಡಿದೆ.

ಶಿಂಧೆ ಅವರ ಮುಖ್ಯಮಂತ್ರಿ ಸಮವಸ್ತ್ರವನ್ನು ಯಾವಾಗ ಬೇಕಾದರೂ ತೆಗೆಯಲಾಗುತ್ತದೆ ಎಂದು ಈಗ ಎಲ್ಲರಿಗೂ ಅರ್ಥವಾಗಿದೆ. ಅಂಧೇರಿ ಪೂರ್ವ ಉಪಚುನಾವಣೆಯಲ್ಲಿ ಶಿಂಧೆ ಅವರ ಗುಂಪು ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕಿತ್ತು. ಆದರೆ ಅದನ್ನು ತಪ್ಪಿಸಿದ್ದು ಬಿಜೆಪಿ" ಎಂದು ಸಾಮ್ನಾದಲ್ಲಿನ ರೋಕ್‌ಠೋಕ್ ಅಂಕಣದಲ್ಲಿ ಹೇಳಲಾಗಿದೆ. ಸರಕಾರದ ಎಲ್ಲಾ ನಿರ್ಧಾರಗಳನ್ನು ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ತೆಗೆದುಕೊಳ್ಳುತ್ತಾರೆ ಹಾಗೂ ಸಿಎಂ ಶಿಂಧೆ ಆ ನಿರ್ಧಾರಗಳನ್ನು ಪ್ರಕಟಿಸುತ್ತಾರೆ' ಎಂದು ಅಂಕಣದಲ್ಲಿ ಹೇಳಲಾಗಿದೆ.

ಅರ್ಜಿ ಹಾಕಿ ಪ್ರಶಸ್ತಿ ಪಡೆಯುವ ಪರಿಪಾಠಕ್ಕೆ ಅಂತ್ಯ ಹಾಡಬೇಕು

● ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಅಭಿಮತ

● ಸಾಧಕರ ಹುಡುಕಿ, ಅವರ ಮನೆ ಬಾಗಿಲಿಗೆ ಪ್ರಶಸ್ತಿ ತಲುಪಿದರೆ ಅದು ಸಾರ್ಥಕ



ಮೈಸೂರು, ಅ.24(ಎಂಟಿವೈ)– ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲು ಅರ್ಜಿ ಆಹ್ವಾನಿಸುವ ಪದ್ಧತಿಗೆ ತಿಲಾಂಜಲಿ ನೀಡಿ, ಸಾಧನೆಯನ್ನು ಗುರುತಿಸಿ ಪ್ರಶಸ್ತಿ ನೀಡುವ ಸಂಪ್ರದಾಯ ಅನುಸರಿಸಬೇಕಾಗಿದೆ ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕನ್ನಡ ಜಾನಪದ ಪರಿಷತ್ ಮೈಸೂರು ಘಟಕದ 6ನೇ ವಾರ್ಷಿಕೋತ್ಸವ ಹಾಗೂ ವಿಶ್ವ ಬುಡಕಟ್ಟು ಮತ್ತು ವಿಶ್ವ ಜಾನಪದ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಯಾವುದೇ ಪ್ರಶಸ್ತಿ ಪಡೆಯಲು ಅರ್ಜಿ ಸಲ್ಲಿಸಬೇಕಾದ ದುಸ್ಥಿತಿ ಎದುರಾಗಿದೆ ಸರ್ಕಾರದ ವತಿಯಿಂದ ನೀಡುವ ಪ್ರಶಸ್ತಿ ಪಡೆಯಲು ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರಿಗೆ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ರಾಜ್ಯೋತ್ಸವ ಸಂದರ್ಭದಲ್ಲಿ ಸರ್ಕಾರ ಅರ್ಜಿ ಕರೆದು ಪ್ರಶಸ್ತಿ ನೀಡುವ ಪರಿಪಾಠ ಹೋಗಬೇಕು ಎಂದರು.

ಅರ್ಜಿ ಸಲ್ಲಿಸುವ ಪದ್ಧತಿಯಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಎಲೆಮರೆ ಕಾಯಿಯಂತೆ ಸೇವೆ ಮಾಡುತ್ತಿರುವ ಅರ್ಹರಿಗೆ ಪ್ರಶಸ್ತಿ ಲಭಿಸುತ್ತಿಲ್ಲ. ಕೆಲವರು ಪ್ರಶಸ್ತಿ ಪಡೆಯಲು ಶಿಫಾರಸ್ಸು ಹಾಗೂ ಲಾಬಿ ಮಾಡುವುದರಿಂದ ಅರ್ಹರಿಗೆ ಪ್ರಶಸ್ತಿ ಕೈತಪ್ಪುತ್ತಿದೆ. ರಾಜಕಾರಣಿಗಳಿಂದ ಶಿಫಾರಸ್ಸು ಮಾಡಿಸಿದವರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಪರಿಪಾಠ ಹೋಗಬೇಕಾದರೆ, ಸರ್ಕಾರವೇ ಸಮಾಜದ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ, ಅವರ ಮನೆ ಬಾಗಿಲಿಗೆ ಹೋಗಿ ಪ್ರಶಸ್ತಿ ನೀಡುವಂತಾಗಬೇಕು. ಹೀಗೆ ಮಾಡಿದಾಗ ಆ ಪ್ರಶಸ್ತಿಗೆ ಮೌಲ್ಯ ಹೆಚ್ಚುತ್ತದೆ ಎಂದು ತಿಳಿಸಿದರು.

ಆಧುನಿಕ ಯುಗದಲ್ಲೂ ಜಾನಪದ ಕಲೆ ಜೀವಂತವಾಗಿರುವುದು ಹೆಮ್ಮೆಪಡುವ ಸಂಗತಿ. ಜಾನಪದ ಕಲೆಯನ್ನು ಹೀಗೆಯೇ ಉಳಿಸಿ–ಬೆಳೆಸಿಕೊಂಡು ಹೋಗಬೇಕು. ಆ ಮೂಲಕ ಭಾರತಿಯ ಸಂಸ್ಕೃತಿ, ಪರಂಪರೆಯನ್ನು ಉಳಿಸಿ–ಬೆಳೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ. ಜಾನಪದ ಕಲೆ ಮನಃಪೂರ್ವಕ–ಭಕ್ತಿಪೂರ್ವಕವಾಗಿ ಮೂಡಿಬರುತ್ತದೆ. ಇದರಿಂದ ಸೂರ್ಯ–ಚಂದ್ರ ಇರುವವರೆಗೂ ಜಾನಪದ ಕಲೆ ಇರುತ್ತದೆ ಎಂದರು.

ಕಲಾ ಪೋಷಕ ಎಂ.ಎಸ್.ಕುಮಾರ್ ಮಾತನಾಡಿ, ಪಾಶ್ಚಾತ್ಯ ಸಂಗೀತ ಹಾಗೂ ವೈವಿಧ್ಯಮಯ ಸಂಗೀತದ ಅಬ್ಬರದಿಂದಾಗಿ ಹಿನ್ನಡೆಯಾಗುವ ಸಂದರ್ಭ ಒದಗಿ ಬಂದಿತ್ತು ಆದರೆ ಹಿರಿಯ ಜಾನಪದ ವಿದ್ವಾಂಸರು ಜಾನಪದ ಕಲೆಗೆ ಧಕ್ಕೆಯಾಗದಂತೆ ನೋಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಜಾನಪದ ಕಲೆಯನ್ನು ಉಳಿಸಿ–ಬೆಳೆಸಲು ಮುಂದಾಗಬೇಕು. ಆ ಮೂಲಕ ಕನ್ನಡ ಜಾನಪದ ಪರಿಷತ್ ಇನ್ನಷ್ಟು ಎತ್ತರಕ್ಕೆ ಬೆಳೆದು, ಜಾನಪದ ಕ್ಷೇತ್ರಕ್ಕೆ ಸೇವೆ ಸಲ್ಲಿಸುವಂತಾಗಲಿ ಎಂದು ಶುಭ ಕೋರಿದರು.

ಸಾಧಕರಿಗೆ ಸನ್ಮಾನ: ವಿಶ್ವ ಜಾನಪದ ದಿನದ ಅಂಗವಾಗಿ ಜಾನಪದ ಕ್ಷೇತ್ರದ ಸಾಧಕರಾದ ಬಸವಣ್ಣ (ವೀರಗಾಸೆ), ಮಾದಮ್ಮ (ಸೋಬಾನೆ ಪದ), ಮಹದೇವಯ್ಯ (ಕಂಸಾಳೆ), ನಿಖಿಲ್ (ಡೊಳ್ಳು ಕುಣಿತ) ಅವರನ್ನು ಸನ್ಮಾನಿಸಲಾಯಿತು. ವಿಶ್ವ ಬುಡಕಟ್ಟು ದಿನದ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯದ ಸಾಧಕರಾದ ಚೋಮಮ್ಮ (ಬೆಟ್ಟ ಕುರುಬ), ಜೆ.ಡಿ.ಜಯಪ್ಪ (ಜೇನು ಕುರುಬ), ತೋಲಯ್ಯ(ಯರವ) ಹಾಗೂ ಹರ್ಷ (ಸೋಲಿಗ) ಅವರನ್ನು ಸನ್ಮಾನಿಸಲಾಯಿತು. ಇದೇ ವೇಳೆ ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನಿಸಲಾಯಿತು. ಕೆ.ಆರ್.ನಗರ ಪುರಸಭಾಧ್ಯಕ್ಷ ಪ್ರಕಾಶ್, ಪ್ರೊ.ನಾಗಣ್ಣ, ಬಸವರಾಜು, ಸೋಮಶೇಖರ್, ಟಿ.ಎನ್.ಪುಟ್ಟರಾಜು, ಡಾ.ಪದ್ಮರಾಜ್ ಹಾಗೂ ಮರಿಯಯ್ಯ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಎಸ್‌ಬಾಲಾಜಿ, ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಕಾವೇರಿ ಪ್ರಕಾಶ್, ಪ್ರಾಧ್ಯಾಪಕಿ ಎಮಂಜುಳಾ, ಗಾಯಕ ಲಕ್ಷ್ಮೀ ರಾಮ್, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಅಧಿಕಾರಿ ಸಿದ್ಧಪ್ಪ ಬೆಟ್ಟೇಗೌಡ, ಬೋರೇಗೌಡ, ಮರಿದೇವಯ್ಯ ಮತ್ತಿತರರು ಉಪಸ್ಥಿತರಿದ್ದರು.

ಪೌರಕಾರ್ಮಿಕರು ಶೀಘ್ರ ಖಾಯಂ

ಮೈಸೂರು: ರಾಜ್ಯದಲ್ಲಿ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಹೇಳಿದರು.

ಕನ್ನಡ ಜಾನಪದ ಪರಿಷತ್‌ನ 6ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಐದು ಖಾತೆಗಳ ಸಚಿವನಾಗಿ ಕೆಲಸ ಮಾಡಿರುವ ನನ್ನನ್ನು ಬಿ.ಎಸ್. ಯಡಿಯೂರಪ್ಪ ಅವರು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದರು. ಮರುದಿನ ಸುತ್ತೂರು ಶ್ರೀಗಳು ಆಹ್ವಾನಿಸಿ, ಆಶೀರ್ವದಿಸಿ, ಪೌರಕಾರ್ಮಿಕರ ಸೇವೆ ಮಾಡುವ ಅವಕಾಶ ಸಿಕ್ಕಿದೆ. ಸಮಾಜದ ಕಟ್ಟಕಡೆಯ ಜನರಿಗೆ ನ್ಯಾಯ ಒದಗಿಸಿ ಎಂದು ಆಶೀರ್ವಾದ ಮಾಡಿದರು. ಅದರಂತೆ ರಾಜ್ಯಾದ್ಯಂತ ಪ್ರವಾಸ ಮಾಡಿ, ಪೌರಕಾರ್ಮಿಕರ ಖಾಯಂಗೆ ಮುಖ್ಯಮಂತ್ರಿಗಳಿಗೆ ಶಿಫಾರಸ್ಸು ಮಾಡಿದ್ದೇನೆ. ಮೊದಲ ಹಂತದಲ್ಲಿ 11,133 ಮಂದಿ ಖಾಯಂ ಆಗಲಿದ್ದು, ಒಟ್ಟಾರೆ 50 ಸಾವಿರ ಮಂದಿಯನ್ನು ಕಾಯಂ ಮಾಡುವ ಉದ್ದೇಶ ಇದೆ ಎಂದರು.

ಪಿಂಚಣಿಗಾಗಿ ಫ್ರೀಡಂ ಪಾರ್ಕ್‌ನಲ್ಲಿ ಅನುದಾನಿತ ಶಾಲಾ–ಕಾಲೇಜು ನೌಕರರ ಅನಿರ್ದಿಷ್ಟಾವಧಿ ಧರಣಿ

ನಾಳೆ ಮೈಸೂರು ಜಿಲ್ಲೆ ನೌಕರರ ಸರದಿ




ಮೈಸೂರು,ಅ.24(ಪಿಎಂ)– ಅನುದಾನಿತ ಶಾಲಾ–ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರಿಗೆ ಪಿಂಚಣಿ ಸೌಲಭ್ಯ ಕಲ್ಪಿಸಲು ಆಗ್ರಹಿಸಿ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ನಿರಂತರ ಹೋರಾಟ ನಡೆಸುತ್ತಿದ್ದು, ಅ.26ರಂದು ಮೈಸೂರು ಜಿಲ್ಲೆಯ ಪಿಂಚಣಿ ವಂಚಿತ ನೌಕರರು ಇಲ್ಲಿನ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದೇವೆ ಎಂದು ರಾಜ್ಯ ಅನುದಾನಿತ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ಜಿಲ್ಲಾಧ್ಯಕ್ಷ ಶಿಂಡೇನಹಳ್ಳಿ ಡಾ.ಶರತ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಂಚಣಿ ಕಲ್ಪಿಸಬೇಕೆಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅ.10ರಿಂದ ನಿರಂತರ ಹೋರಾಟ ನಡೆಸಲಾಗುತ್ತಿದೆ. ತರಗತಿಗಳಿಗೆ ತೊಂದರೆಯಾಗಬಾರದೆಂಬ ಕಾರಣ ಅ.17ರಿಂದ ಒಂದೊಂದು ಜಿಲ್ಲೆಯ ಪಿಂಚಣಿ ವಂಚಿತ ನೌಕರರು ಫ್ರೀಡಂ ಪಾರ್ಕ್‌ನಲ್ಲಿ ಒಂದೊಂದು ದಿನ ಸರದಿಯಾಗಿ ಪ್ರತಿಭಟನಾ ಧರಣಿ ನಡೆಸುತ್ತಿದ್ದು, ಅಂತೆಯೇ ಅ.26ರಂದು ಮೈಸೂರು ಜಿಲ್ಲೆಯ ನೌಕರರು ಇಲ್ಲಿನ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದೇವೆ ಎಂದರು.

ರಾಜ್ಯದಲ್ಲಿ ಶಿಕ್ಷಕರು ಸೇರಿದಂತೆ ಅನುದಾನಿತ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತ ನೌಕರರು ಸುಮಾರು 60 ಸಾವಿರ ಇದ್ದೇವೆ. ಈ ಪೈಕಿ ಶಿಕ್ಷಕರ ಸಂಖ್ಯೆ ಬಹುಪಾಲು ಇದೆ. ಮೈಸೂರು ಜಿಲ್ಲೆಯಲ್ಲಿ ಪಿಂಚಣಿ ವಂಚಿತ ನೌಕರರು ಸುಮಾರು ಸಾವಿರ ಮಂದಿ ಇದ್ದೇವೆ. ಅ.12ರಂದು ಅನುದಾನಿತ ನೌಕರರ ಸಮಾವೇಶವೂ ನಡೆದಿದ್ದು, ಇದರ ನಿಯೋಗ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಪಿಂಚಣಿ ಕಲ್ಪಿಸಲು ಮನವಿ ಸಲ್ಲಿಸಿದೆ. ಸಚಿವರು ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಡೆಸಿ ಸಂಘದ ರಾಜ್ಯ ಪದಾಧಿಕಾರಿಗಳ ಸಭೆ ಏರ್ಪಡಿಸಿ ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಡಿ.20ರವರೆಗೆ ನಮ್ಮ ಹೋರಾಟ ನಡೆಯಲಿದ್ದು ಅಷ್ಟರೊಳಗೆ 2006ರ ಏ.1ರ ಬಳಿಕ ವೇತನಾನುದಾನಕ್ಕೆ ಒಳಪಟ್ಟ ಎಲ್ಲಾ ಹಂತದ ನೌಕರರಿಗೂ ಪಿಂಚಣಿ ಜಾರಿಗೊಳಿಸಬೇಕು. ಇಲ್ಲವಾದರೆ 60 ಸಾವಿರ ಪಿಂಚಣಿ ವಂಚಿತ ನೌಕರರು ಕುಟುಂಬ ಸಮೇತ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿದರು. ಸಂಘದ ಜಿಲ್ಲಾ ಪದಾಧಿಕಾರಿಗಳಾದ ಬಿ.ಆರ್.ಶಿವಕುಮಾರ್, ಎಸ್.ಎಲ್.ಚಂದ್ರಶೇಖರ್, ಬಿ.ಸಿದ್ದರಾಜು, ಸಿದ್ದೇಗೌಡ, ಮಹೇಶ್, ಎಂ.ಎನ್.ದಿನೇಶ್ ಗೋಷ್ಠಿಯಲ್ಲಿದ್ದರು.

ನಾಳೆ ಮೂಡಲಹುಂಡಿಯಲ್ಲಿ ಕೊಂಡೋತ್ಸವ



ಮೈಸೂರು,ಅ.24(ಎಂಟಿವೈ)– ಬೆಳಕಿನ ಹಬ್ಬ ದೀಪಾವಳಿ ಅಂಗವಾಗಿ ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮದ ಕೊಂಡದ ಬಸವೇಶ್ವರರ ಕೊಂಡೋತ್ಸವ ಬುಧವಾರ(ಅ.26) ಸಂಜೆ 6ಕ್ಕೆ ವಿಜೃಂಭಣೆಯಿಂದ ಜರುಗಲಿದೆ.

ಕೊಂಡೋತ್ಸವದ ಹಿನ್ನೆಲೆಯಲ್ಲಿ ಅ.26 ರಂದು ಮಧ್ಯಾಹ್ನ 2.30ಕ್ಕೆ ವರಕೋಡು ಗ್ರಾಮದ ಶ್ರೀ ಬಸವೇಶ್ವರ ದೇವಾಲಯದಿಂದ ಬೀರೇಶ್ವರ ದೇವಾಲಯದ ಬಸಪ್ಪ, ಪೂಜಾ ಕುಣಿತ ಹಾಗೂ ವಿವಿಧ ದೇವಾಲಯಗಳ ದೇವರ ಗುಡ್ಡರು ಮೆರವಣಿಗೆಯಲ್ಲಿ ಮೂಡಲಹುಂಡಿ ಗ್ರಾಮಕ್ಕೆ ಆಗಮಿಸಲಿದ್ದಾರೆ. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ, ಸಂಜೆ 5.30ಕ್ಕೆ ಗ್ರಾಮದ ಸಮೀಪವಿರುವ ದೊಣ್ಣೆಕಲ್ಲು ಬೆಟ್ಟದಲ್ಲಿರುವ ಕೊಂಡದ ಬಸವೇಶ್ವರ ಗುಡಿ ತಲುಪಲಿದ್ದಾರೆ. ಈ ವೇಳೆ ವಿವಿಧ ಹರಕೆ ಹೊತ್ತವರು ಬಾಯಿ ಬೀಗಧಾರಿಗಳಾಗಿ ಮೆರವಣಿಗೆಯಲ್ಲಿ ಸಾಗಲಿದ್ದಾರೆ.

ದೀಪಾವಳಿ ದಿನದಂದು ಕೊಂಡದ ಬಸವೇಶ್ವರರ ಕೊಂಡೋತ್ಸವ ಅನಾದಿ ಕಾಲದಿಂದಲೂ ಪರಂಪರೆಯಾಗಿ ಆಚರಣೆಯಲ್ಲಿದ್ದು, ವರಕೋಡು, ಮೂಡಲ ಹುಂಡಿ ಗ್ರಾಮಸ್ಥರು ಉದಾರವಾಗಿ ಕೊಂಟು(ಸೌದೆ) ನೀಡಿ, ಸಂಗ್ರಹವಾದ ಸೌದೆಯಿಂದ ಕೊಂಡದ ಬಸವೇಶ್ವರ ಗುಡಿ ಮುಂದೆ ಕೊಂಡ ತಯಾರಿಸಲಾಗುತ್ತದೆ. ದೇವರ ಮೆರವಣಿಗೆ ಗ್ರಾಮದಿಂದ ಗುಡಿ ಬಳಿ ಬರುತ್ತಿದ್ದಂತೆಯೇ ಕೆಂಡದ ರಾಶಿಯನ್ನು ಕೊಂಡಕಟ್ಟೆಗೆ ಸುರಿದು ಪ್ರಖರಗೊಳಿಸಲಾಗುತ್ತದೆ. ಸಂಜೆ 6ಕ್ಕೆ ಕೊಂಡೋತ್ಸವಕ್ಕೆ ಚಾಲನೆ ದೊರೆಯಲಿದ್ದು, ಬಸವೇಶ್ವರ ದೇವಾಲಯ, ಶನೇಶ್ವರ ದೇವಾಲಯದ ದೇವರ ಗುಡ್ಡರು ಹಾಗೂ ಹರಕೆ ಹೊತ್ತಿರುವವರು ಕೊಂಡ ಹಾಯಲಿದ್ದಾರೆ. ಕೊಂಡೋತ್ಸವಕ್ಕೆ ಮೂಡಲಹುಂಡಿ, ವರಕೋಡು, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ, ಮೆಲ್ಲಹಳ್ಳಿ, ಉನಗನಹಳ್ಳಿ, ವಾಜಮಂಗಲ, ಮೈಸೂರು ಸೇರಿದಂತೆ ವಿವಿಧೆಡೆಯಿಂದ ಸಾವಿರಾರು ಭಕ್ತರು ಆಗಮಿಸಲಿದ್ದಾರೆ. ನಂತರ ಮೂಡಲಹುಂಡಿ ಗ್ರಾಮದಲ್ಲಿ ಮೆರವಣಿಗೆ ಸಾಗಿ, ಸಂಜೆ 8 ಗಂಟೆ ವೇಳೆಗೆ ವರಕೋಡಿನ ಬಸವೇಶ್ವರ ದೇವಾಲಯ ತಲುಪುವುದರೊಂದಿಗೆ ದೀಪಾವಳಿ ಉತ್ಸವ ಸಮಾಪ್ತಿಗೊಳ್ಳಲಿದೆ.

'ಹಣ್ಣೆಲೆ–ಚಿಗುರೆಲೆ' ಸಂಗೀತ ಕಾರ್ಯಕ್ರಮ ಪ್ರಯುಕ್ತ ಭಾಷಣ, ಗಾಯನ ಸ್ಪರ್ಧೆ

● ಹಿರಿಯ ನಾಗರಿಕರು, ಮಕ್ಕಳು ಭಾಗವಹಿಸಲು ಅವಕಾಶ

● ಸ್ವರಾಂಜಲಿ ತಂಡದಿಂದ ಡಿ.11ರಂದು ಸಂಗೀತ ರಸ ಸಂಜೆ



ಮೈಸೂರು,ಅ.24(ಪಿಎಂ)– ಸ್ವರಾಂಜಲಿ ಹವ್ಯಾಸಿ ಗಾಯಕರ ತಂಡದ ವತಿಯಿಂದ ಡಿ.11ರಂದು ಹಿರಿಯ ನಾಗರಿಕರ ಸಹಾಯಾರ್ಥ 'ಹಣ್ಣೆಲೆ–ಚಿಗುರೆಲೆ' ಶೀರ್ಷಿಕೆಯಡಿ ಸಂಗೀತ ರಸಸಂಜೆ ಕಾರ್ಯಕ್ರಮ ಆಯೋಜಿಸಿದ್ದು, ಇದಕ್ಕೆ ಪೂರ್ವಭಾವಿಯಾಗಿ ಹಿರಿಯ ನಾಗರಿಕರು ಮತ್ತು ಮಕ್ಕಳಿಗೆ ಭಾಷಣ ಹಾಗೂ ಗಾಯನ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಎಂದು ತಂಡದ ಸದಸ್ಯ ಡಾ.ರಘುವೀರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜೆಕೆ ಮೈದಾನದ ಮೈಸೂರು ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಡಿ.11ರಂದು ಸಂಜೆ 4.30ಕ್ಕೆ ತಂಡದಿಂದ ಸಂಗೀತ ರಸ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಚಿಂತಕರಾದ ಡಾ.ಗುರುರಾಜ ಕರ್ಜಗಿ, ಪ್ರೊ.ಎಂ.ಕೃಷ್ಣೇಗೌಡ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸದರಿ ಕಾರ್ಯಕ್ರಮಕ್ಕೆ ಪೂರಕವಾಗಿ ಹಿರಿಯ ನಾಗರಿಕರು ಮತ್ತು ಮಕ್ಕಳಿಗೆ ಭಾಷಣ ಸ್ಪರ್ಧೆ ಏರ್ಪಡಿಸಲಾಗಿದೆ ಎಂದರು.

'ಹಿರಿಯ ಚೇತನರಿಗೆ ಪುಟ್ಟ ಮಕ್ಕಳು ಹಾಗೂ ಪುಟ್ಟ ಮಕ್ಕಳಿಗೆ ಹಿರಿಯ ಚೇತನರ ಅವಶ್ಯಕತೆ, ಅನಿವಾರ್ಯತೆ ಮತ್ತು ದೊರೆಯದಿದ್ದಾಗ ಕಾಡುವ ಅನಿಶ್ಚಿತತೆ' ವಿಷಯ ಕುರಿತಂತೆ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ 14 ವರ್ಷ ಕೆಳಗಿನ ಮಕ್ಕಳ ಎರಡು ವಿಭಾಗಗಳಲ್ಲಿ ಭಾಷಣ ಸ್ಪರ್ಧೆ ನಡೆಯಲಿದೆ. ಸ್ಪರ್ಧಿಗಳು ವೀಡಿಯೋ ಚಿತ್ರೀಕರಿಸಿದ 3 ನಿಮಿಷದ ಭಾಷಣವನ್ನು ವಾಟ್ಸಪ್ ಮಾಡಬೇಕಾಗುತ್ತದೆ. ಯಾವುದೇ ಭಾಷೆಯಲ್ಲಿ ಭಾಷಣ ಮಾಡಲು ಅವಕಾಶವಿದೆ. ಮೊ.ಸಂ. 80951 80174 ಇಲ್ಲಿಗೆ ಮಕ್ಕಳು ಹಾಗೂ ಮೊ.ಸಂ. 80951 80329 ಇಲ್ಲಿಗೆ ಹಿರಿಯ ನಾಗರಿಕರು ತಮ್ಮ ವೀಡಿಯೋಗಳನ್ನು ನ.15ರೊಳಗೆ ಕಳುಹಿಸಬೇಕು. ಸ್ಪರ್ಧಿಗಳು ಆಧಾರ್ ಕಾರ್ಡ್ ಪ್ರತಿ ಹಾಗೂ ವಿಳಾಸದ ವಿವರಗಳನ್ನು ವಾಟ್ಸಪ್ ಮಾಡಬೇಕು. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ ಎಂದು ವಿವರಿಸಿದರು.

ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ನ.11ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಮತ್ತು ವಿವರಗಳಿಗೆ ಮೊ.ಸಂ. 99168 30019, 63603 69624 ಅನ್ನು ಸಂಪರ್ಕಿಸಬಹುದು. ಈ ಮೂರು ಸ್ಪರ್ಧೆಗಳ ವಿಜೇತರಿಗೆ ಡಿ.11ರ ಕಾರ್ಯಕ್ರಮದಲ್ಲಿ ಅತಿಥಿಗಳು ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ಹೇಳಿದರು. ತಂಡದ ಸದಸ್ಯರಾದ ಡಾ.ಲಾವಣ್ಯ ಶೆಣೈ, ರೂಪಶ್ರೀ, ಆನಂದ್, ಬಾಲಾಜಿ, ಮೀರಾ ಮತ್ತಿತರರು ಗೋಷ್ಠಿಯಲ್ಲಿದ್ದರು.

ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಅ.24– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2021–22 ಶೈಕ್ಷಣಿಕ ಸಾಲಿನಲ್ಲಿ ಸಿಬಿಎಸ್‌ಸಿ ಹಾಗೂ ಐಸಿಎಸ್‌ಸಿ ಪಠ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇಕಡ 60 ರಿಂದ 74.99 ಅಂಕ ಪಡೆದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ 7,000 ರೂ.ಗಳು ಮತ್ತು ಶೇಕಡ 75 ಕ್ಕಿಂತ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ 15,000 ರೂ.ಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಅರ್ಜಿ ಸಲ್ಲಿಸುವ ಆಸಕ್ತರು ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆಧಾರ್ ಪ್ರತಿ, ಬ್ಯಾಂಕ್ ಪಾಸ್ ಬುಕ್ ಪ್ರತಿ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆ, ಡಾ.ಬಾಬು ಜಗಜೀವನ್ ರಾಂ ಭವನ, ಆದಿ ಪಂಪ ರಸ್ತೆ ಪಡುವಾರಹಳ್ಳಿ, ಮೈಸೂರು ಇಲ್ಲಿಗೆ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2520910 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.



ಕಂಚುಗಲ್ ಬಂಡೆ ಮಠದ ಸ್ವಾಮೀಜಿ ಆತ್ಮಹತ್ಯೆ

● ಮೂರು ಪುಟಗಳ ಡೆತ್‌ನೋಟ್ ಪತ್ತೆ ● ಕಿರುಕುಳದ ಹಿನ್ನೆಲೆಯಲ್ಲಿ ಸಾವಿಗೆ ಶರಣಾಗಿರುವ ಶಂಕೆ

ರಾಮನಗರ, ಅ. 24– ಮಾಗಡಿ ತಾಲೂಕಿನ ಕಂಚುಗಲ್ ಬಂಡೇಮಠದ ಬಸವಲಿಂಗ ಸ್ವಾಮೀಜಿ(45) ಅವರು ಡೆತ್‌ನೋಟ್ ಬರೆದಿಟ್ಟು ಮಠದ ಕೊಠಡಿಯ ಕಿಟಕಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮಾಗಡಿಯ ಚೆಲುವೆ ಮಠದ ಸ್ವಾಮೀಜಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಮಾಸುವ ಮುನ್ನವೇ ಕಂಚುಗಲ್ ಬಂಡೇಮಠದ ಸ್ವಾಮೀಜಿ ನೇಣಿಗೆ ಶರಣಾಗಿರುವುದು ಭಕ್ತರಲ್ಲಿ ಆತಂಕವನ್ನುಂಟು ಮಾಡಿದೆ. ಬಂಡೇಮಠದ ಸ್ವಾಮೀಜಿಯವರು ಎಂಟು ಪುಟಗಳ ಡೆತ್‌ನೋಟ್ ಬರೆದಿಟ್ಟಿದ್ದರು ಎಂದು ಹೇಳಲಾಗುತ್ತಿದೆಯಾದರೂ, ಮೂರು ಪುಟ ಪೊಲೀಸರಿಗೆ ಲಭ್ಯವಾಗಿದೆ.

ಸ್ವಾಮೀಜಿಯವರು ಬರೆದಿರುವ ಡೆತ್‌ನೋಟ್‌ನಲ್ಲಿ ತಾವು ಅನುಭವಿಸುತ್ತಿದ್ದ ನೋವು ಹಾಗೂ ಹಿಂಸೆಗಳ ಬಗ್ಗೆ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ. ಯಾರೋ ನನ್ನನ್ನು ತೇಜೋವಧೆ ಮಾಡಲು ಯತ್ನಿಸುತ್ತಿದ್ದಾರೆ. ಕಳೆದ 6 ತಿಂಗಳಿಂದ ನಾನು ಸಾಕಷ್ಟು ಖಿನ್ನತೆಗೆ ಒಳಗಾಗಿದ್ದೇನೆ. ಶತ್ರುಗಳಿಂದ ನಾನು ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದೇನೆ. ಇದನ್ನು ತಡೆಯಲು ಸಾಧ್ಯವಾಗದೇ ಸಾವಿನ ದಾರಿ ಹಿಡಿದಿದ್ದೇನೆ ಎಂಬುದು ಅವರು ಬರೆದಿರುವ ಡೆತ್‌ನೋಟ್‌ನ ಸಾರಾಂಶ ಎನ್ನಲಾಗಿದ್ದು, ಪತ್ರದಲ್ಲಿ ಇಬ್ಬರ ಹೆಸರುಗಳನ್ನು ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಮಠಕ್ಕೆ ಆಗಮಿಸಿದ ಕುದೂರು ಠಾಣೆ ಪೊಲೀಸರು ಡೆತ್‌ನೋಟ್ ವಶಪಡಿಸಿಕೊಂಡು ಅದರ ಆಧಾರದ ಮೇರೆಗೆ ಭಾರತೀಯ ದಂಡ ಸಂಹಿತೆ 306ರಡಿ (ಆತ್ಮಹತ್ಯೆಗೆ ಪ್ರಚೋದನೆ) ಪ್ರಕರಣ ದಾಖಲಿಸಿಕೊಂಡು ತನಿಖೆ ಚುರುಕುಗೊಳಿಸಿದ್ದಾರೆ. ಎಫ್ಐಆರ್‌ನಲ್ಲಿ ಯಾರನ್ನೂ ಆರೋಪಿಗಳಾಗಿ ಉಲ್ಲೇಖಿಸಿಲ್ಲ ಎಂದು ಹೇಳಲಾಗಿದೆ. ಮರಣೋತ್ತರ ಪರೀಕ್ಷೆ ನಂತರ ದೇಹವನ್ನು ಮಠಕ್ಕೆ ತಂದು ಲಿಂಗಾಯತ ಸಂಪ್ರದಾಯದಂತೆ ಅಂತ್ಯಕ್ರಿಯೆ ನಡೆಸಲಾಯಿತು. ಸಿದ್ದಲಿಂಗ ಮಠದ ಸ್ವಾಮೀಜಿ, ಸುತ್ತೂರು ಶ್ರೀಗಳು ಸೇರಿದಂತೆ ಹಲವು ಮಠಾಧೀಶರು, ಜನಪ್ರತಿನಿಧಿಗಳು, ಗಣ್ಯರು ಅಪಾರ ಸಂಖ್ಯೆಯ ಭಕ್ತರು ಮಠಕ್ಕೆ ಭೇಟಿ ನೀಡಿ ಶ್ರೀಗಳ ಅಂತಿಮ ದರ್ಶನ ಪಡೆದರು. ಹಿರಿಯ ಶ್ರೀಗಳಾದ ಶಿವರುದ್ರ ಮಹಾಸ್ವಾಮಿಗಳ ಗದ್ದುಗೆ ಪಕ್ಕದಲ್ಲಿ ಬಸವಲಿಂಗ ಸ್ವಾಮೀಜಿಯವರ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

ಕಂಚುಗಲ್ ಬಂಡೇಮಠವು 50 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಪಾಸ್ತಿ ಹೊಂದಿದೆ. ಮಠಕ್ಕೆ ಸೇರಿದ ಶಾಲಾ–ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಅನೇಕ ಉತ್ತಮ ಕಾರ್ಯಕ್ರಮಗಳನ್ನು ಕೈಗೊಂಡು ಸಮಾಜಕ್ಕೆ ಮಾದರಿ ಮಠವಾಗಿ ಈ ಮಠ ಬೆಳೆದಿದೆ. 1997ರಲ್ಲಿ ಬಂಡೇಮಠದ ಅಧಿಕಾರ ವಹಿಸಿಕೊಂಡ ಬಸವಲಿಂಗ ಸ್ವಾಮೀಜಿಯವರ ಮೂಲ ಹೆಸರು ಬಸವರಾಜು. ಇವರು ಚನ್ನಮಲ್ಲಯ್ಯ ಮತ್ತು ಪುಟ್ಟಗೌರಮ್ಮ ದಂಪತಿಯ 8ನೇ ಪುತ್ರ ಸ್ವಾಮೀಜಿಯವರು 8ನೇ ತರಗತಿವರೆಗೆ ಬಂಡೇಮಠದಲ್ಲೇ ವಿದ್ಯಾಭ್ಯಾಸ ಮಾಡಿದ್ದರು. ನಂತರ ಸಿದ್ದಗಂಗಾ ಮಠದಲ್ಲಿ ಶಿಕ್ಷಣ ಪಡೆದ ಅವರು, ವೇದ, ಉಪನಿಷತ್, ವಿದ್ವತ್‌ನಲ್ಲಿ ಪಾರಂಗತ ಗಳಿಸಿದ್ದರು. ಶ್ರೀಗಳ ಹೆಸರಿನಲ್ಲಿ 80 ಎಕರೆ ಜಮೀನು ಇದೆ.

ಕೆಜಿಎಫ್2 ದಾಖಲೆ ಮುರಿದ ಕಾಂತಾರ!

ಹೊಂಬಾಳೆ ಫಿಲಂಸ್‌ನಿಂದ ಅಧಿಕೃತ ಘೋಷಣೆ

ಬೆಂಗಳೂರು: ಸದ್ಯ ಎಲ್ಲೆಲ್ಲೂ ಕಾಂತಾರದ್ದೇ ಸದ್ದು. ಕರಾವಳಿಯ ವಿಶಿಷ್ಟ ಸಂಸ್ಕೃತಿ ಅನಾವರಣದ ಕಾಂತಾರ ಸಿನಿಮಾ ದೇಶ, ವಿದೇಶಗಳ ಬಾಕ್ಸ್ ಆಫೀಸ್ ನಲ್ಲಿ ಕೊಳ್ಳೆ ಹೊಡೆಯುತ್ತಿರುವಂತೆಯೇ, ಹೊಸ ಹೊಸ ದಾಖಲೆಗಳನ್ನು ಬರೆಯುತ್ತಿದೆ.

ರಾಜ್ಯದಲ್ಲಿ ಮೂರನೇ ವಾರವೂ ಜನಭರಿತ ಸಿನಿಮಾವಾಗಿ ಪ್ರದರ್ಶನ ಕಾಣುತ್ತಿದ್ದು, ಕೆಜಿಎಫ್ ದಾಖಲೆಯನ್ನು ಮುರಿದಿದೆ ಇನ್ನಷ್ಟು ಹೊಸ ದಾಖಲೆ ನಿರ್ಮಿಸುವ ಹಾದಿಯಲ್ಲಿ ಮುನ್ನುಗಿದೆ. ಈ ಕುರಿತು ಟ್ವೀಟ್ ನಲ್ಲಿ ಅಧಿಕೃತ ಮಾಹಿತಿ ನೀಡಿರುವ ಹೊಂಬಾಳೆ ಫಿಲಂಸ್ ಸಂಸ್ಥೆ, ಈವರೆಗೆ ನಿರ್ಮಿಸಿರುವ ಚಲನಚಿತ್ರಗಳ ಪೈಕಿ ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಜನ ವೀಕ್ಷಿಸಿದ ಚಿತ್ರ ಎಂಬ ಹೆಗ್ಗಳಿಕೆಗೆ ಕಾಂತಾರ ಪಾತ್ರವಾಗಿದೆ. ಇನ್ನಷ್ಟು ಹೊಸ ದಾಖಲೆ ನಿರ್ಮಿಸುವ ಹಾದಿಯಲ್ಲಿ ಕಾಂತಾರ ಸಾಗುತ್ತಿರುವುದಾಗಿ ತಿಳಿಸಿದೆ.

ರಿಷಬ್ ಶೆಟ್ಟಿ ಚಿತ್ರಕಥೆ ಬರೆದು, ನಿರ್ದೇಶಿಸಿರುವ ಜೊತೆಗೆ ಅವರೇ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳುವ ಮೂಲಕ ಪ್ಯಾನ್ ಇಂಡಿಯಾ ಸ್ಟಾರ್ ಆಗಿ ಹೊರಹೊಮ್ಮಿದ್ದಾರೆ.


ನನ್ನ ಝುಂಡಾ ಬದಲಾದರೂ, ಅಜೆಂಡಾ ಬದಲಾಗಲ್ಲ

ನನ್ನನ್ನು ಶಾಸಕನಾಗಿ ಮಾಡಿರುವುದಾಗಿ ಹೇಳುವ ಸಾರಾ ಹೇಳಿಕೆ ಸತ್ಯಕ್ಕೆ ದೂರ: ಎ.ಹೆಚ್.ವಿಶ್ವನಾಥ್

ಕೆ.ಆರ್.ನಗರ, ಅ.24– ಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ವಿಶ್ವನಾಥ್ ಅವರನ್ನು ಕರೆತಂದು ಶಾಸಕನಾಗಿ ಮಾಡಿದ್ದು ನಾನೇ ಎಂದು ಶಾಸಕ ಸಾ.ರಾ.ಮಹೇಶ್ ಹೇಳುತ್ತಿರುವುದು ಸತ್ಯಕ್ಕೆ ದೂರವಾದ ಸಂಗತಿ. ಆದರೆ 2018ರ ಚುನಾವಣೆಯಲ್ಲಿ ನಮ್ಮಿಂದಲೇ ಸಾ.ರಾ.ಮಹೇಶ್ ಶಾಸಕರಾಗಿದ್ದು, ಎಂಬುದನ್ನು ಅರಿತು ಮಾತನಾಡಲಿ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ತಿಳಿಸಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನನ್ನನ್ನು ಹೊರ ಹಾಕಿರಲಿಲ್ಲ. ನಾನೇ ರಾಜೀನಾಮೆ ನೀಡಿ ಹೊರಬಂದೆ. ಆದರೆ ನನ್ನನ್ನು ಮಾಜಿ ಶಾಸಕ ದಿ.ಚಿಕ್ಕಮಾದು ಅವರು ಜೆಡಿಎಸ್‌ಗೆ ಬನ್ನಿ ಎಂದು ಒತ್ತಾಯಿಸಿದರು. ಬಳಿಕ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಜೊತೆ ಮಾತನಾಡಿದ ನಂತರ ಜೆಡಿಎಸ್ ಪಕ್ಷ ಸೇರಿದ್ದೇನೆಯೇ ಹೊರತು ಸಾ.ರಾ.ಮಹೇಶ್ ಅವರಿಂದಲ್ಲ ಎಂದರು.

ನಾನು ಯಾರದ್ದಾದರೂ ಮುಲಾಜಿನಲ್ಲಿದ್ದರೆ ಅದು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಮತ್ತು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಲ್ಲಿ ಮಾತ್ರ. ನನ್ನ ಪಕ್ಷಕ್ಕೆ ಸೇರಿಸಿಕೊಂಡು ಹುಣಸೂರಿನಲ್ಲಿ ಅಭ್ಯರ್ಥಿ ಮಾಡಿ ಪ್ರಚಾರ ನಡೆಸಿ ಗೆಲ್ಲಿಸಿದ್ದಲ್ಲದೆ ಜೆಡಿಎಸ್ ರಾಜ್ಯಾಧ್ಯಕ್ಷ



ಸ್ಥಾನದಲ್ಲಿ ಕೂರಿಸಿದ ದೇವೇಗೌಡರನ್ನು ಯಾವಾಗಲೂ ಪೂಜ್ಯ ಭಾವನೆಯಿಂದಲೇ ಕಾಣುತ್ತೇನೆ ಎಂದರು.

ಶಾಸಕರ ನಡೆಗೆ ಬೇಸರ: ಶಾಸಕ ಸಾ.ರಾ.ಮಹೇಶ್ ಅವರನ್ನು ತಾಲೂಕಿನ ಅಭಿವೃದ್ಧಿ ವಿಚಾರದಲ್ಲಿ ಅಭಿನಂದಿಸುತ್ತೇನೆ. ಆದರೆ ಶಾಸಕರಾದವರು ತಾರತಮ್ಯ ಮಾಡಬಾರದು. ಮತ ನೀಡಿಲ್ಲ ಎಂಬ ಕಾರಣಕ್ಕೆ ಪಟ್ಟಣದ ಸಂಗೊಳ್ಳಿ ರಾಯಣ್ಣ ಸಮುದಾಯ ಭವನ, ಗಂಧನಹಳ್ಳಿ

> **ಕಾಂಗ್ರೆಸ್ ಪಕ್ಷ ಮುಳುಗುವ ಹಡಗಲ್ಲ**
> ರಾಜಕೀಯದಲ್ಲಿ ಪಕ್ಷಗಳ ಏಳು–ಬೀಳು ಸಹಜ. ಯಾವುದೇ ರಾಜಕೀಯ ಪಕ್ಷಕ್ಕೂ ಸಾವಿಲ್ಲ. ಪಕ್ಷಗಳು ಸಂದರ್ಭಕ್ಕೆ ತಕ್ಕಂತೆ ಪುಟಿದೇಳುವ ಶಕ್ತಿ ಹೊಂದಿವೆ. ಆದರೆ ರಾಹುಲ್ ಗಾಂಧಿ ಅವರನ್ನು ಟೀಕಿಸುತ್ತಿದ್ದ ಜನರಿಗೆ ಭಾರತ್ ಜೋಡೋ ಯಾತ್ರೆ ಮೂಲಕ ಉತ್ತರ ಸಿಕ್ಕಿದೆ. ರಾಜಕೀಯದಲ್ಲಿ ಪರ್ಯಾಯವಾಗಿ ಬೆಳೆಯುವ ಶಕ್ತಿಯನ್ನು ರಾಹುಲ್ ಗಾಂಧಿ ಹೊಂದಿದ್ದಾರೆ ಎಂಬುದು ಅವರ ಹೇಳಿಕೆ, ನಡವಳಿಕೆಯಿಂದ ತಿಳಿಯಲಿದೆ.

ಸಮುದಾಯ ಭವನಕ್ಕೆ ಅನುದಾನ ಮತ್ತು ಕುರುಬ ಸಮುದಾಯವಿರುವ ಗ್ರಾಮಗಳ ಅಭಿವೃದ್ಧಿಯಲ್ಲಿ ತಾರತಮ್ಯ ಮಾಡುತ್ತಿದ್ದಾರೆ. ಶಾಸಕರಾದವರು ಜಾತ್ಯಾತೀತ ಮನೋಭಾವದಿಂದ ಕೆಲಸ ಮಾಡಬೇಕು ಎಂದರು.

ನೂತನ ಎಐಸಿಸಿ ಅಧ್ಯಕ್ಷರಿಗೆ ಅಭಿನಂದನೆ: 50 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಕೇಂದ್ರ ಮತ್ತು ರಾಜ್ಯದಲ್ಲಿ ಸಚಿವರಾಗಿ ಕಾರ್ಯ ನಿರ್ವಹಿಸಿ ಅನುಭವ ಹೊಂದಿ, ಎಐಸಿಸಿ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರನ್ನು ಅಭಿನಂದಿಸುತ್ತೇನೆ. ಅವರು ಪಕ್ಷ ಸಂಘಟಿಸಿ ಒಳ್ಳೆಯ ಹೆಸರು ಪಡೆಯಲಿ ಎಂದರು.

ಕೇಂದ್ರದ ಆಡಳಿತದ ಬಗ್ಗೆ ಬೇಸರ: ಕೇಂದ್ರ ಸರ್ಕಾರ ಉದ್ಯೋಗ ಮೇಳದ ಮೂಲಕ 10 ಲಕ್ಷ ಉದ್ಯೋಗ ಸೃಷ್ಟಿಸಿದ್ದೇವೆ ಎಂದಿದ್ದಾರೆ. ಇದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಅನ್ಯಾಯವಾಗಲಿದೆ. ಏಕೆಂದರೆ ಈ ಉದ್ಯೋಗ ಮೇಳದಲ್ಲಿ ಮೀಸಲಾತಿಯಡಿ ಉದ್ಯೋಗ ನೀಡಿಲ್ಲದ ಕಾರಣ ಉದ್ಯೋಗ ಬಲಾಢ್ಯರ ಪಾಲಾಗಲಿದೆ ಎಂದರು.

ಪಕ್ಷಾಂತರದ ಸುಳಿವು ನೀಡಿದ ಹಳ್ಳಿಹಕ್ಕಿ: ನನ್ನ ಝುಂಡಾ ಬದಲಾದರೂ ಅಜೆಂಡಾ ಬದಲಾಗಲ್ಲ. 40 ವರ್ಷಗಳ ರಾಜಕೀಯ ಜೀವನದಲ್ಲಿ ತತ್ವ, ಸಿದ್ಧಾಂತ ಆದರ್ಶಗಳಿಂದ, ಜಾತ್ಯತೀತವಾಗಿ ಸಮ ಸಮಾಜದ ಏಳಿಗೆಗಾಗಿ ದುಡಿದಿದ್ದೇನೆ. ಅದೇ ರೀತಿ ಕಾಲಚಕ್ರ ಉರುಳಿದಂತೆ ನಾವು ಬದಲಾಗಬೇಕಾಗುತ್ತದೆ. ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಸೇರಿದಂತೆ ಯಾವ ಪಕ್ಷದಲ್ಲಿ ಸಿದ್ಧಾಂತ ಇದೆ ಹೇಳಿ? ಪಕ್ಷದಲ್ಲಿದ್ದುಕೊಂಡೇ ವಿರೋಧ ವ್ಯಕ್ತಪಡಿಸುವವರಿಲ್ಲವೇ? ಅದರಂತೆ ನಾನು ಸಹ ಸರ್ಕಾರ ದಿಕ್ಕು ತಪ್ಪಿದಾಗ ಎಚ್ಚರಿಸುವ ಜೊತೆಗೆ ಬದಲಾಗಬೇಕಾಗುತ್ತದೆ ಎಂದು ವಿಶ್ವನಾಥ್ ತಿಳಿಸಿದರು.



ತಿ.ನರಸೀಪುರ ವಲಯ ಅರಣ್ಯ ವ್ಯಾಪ್ತಿಗೊಳಪಡುವ ಬನ್ನೂರು ವಿಭಾಗದ ಫಾರೆಸ್ಟ್ ಗಾರ್ಡ್ ಚೇತನ್ ಎಂಬುವರು ಕಳ್ಳರೊಂದಿಗೆ ಶಾಮೀಲಾಗಿ ಬೆಲೆ ಬಾಳುವ ಮರಗಳನ್ನು ಕಡಿದು ಸಾಗಿಸಲು ಸಹಕರಿಸುವ ಜೊತೆಗೆ ವಡ್ಗಲ್ ರಂಗನಾಥಸ್ವಾಮಿ ಬೆಟ್ಟದ ಹನುಮಂತ ದೇವರ ಗುಡಿ ಪ್ರದೇಶದಲ್ಲಿ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆಯಲ್ಲಿ ಶಾಮೀಲಾಗಿದ್ದು, ಅವರ ಮೇಲೆ ಕ್ರಮ ಜರುಗಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸದಸ್ಯರು ವಲಯ ಅರಣ್ಯಾಧಿಕಾರಿಗಳಿಗೆ ದೂರು ಸಲ್ಲಿಸಿದರು. ಈ ವೇಳೆ ಸಂಘದ ಜಿಲ್ಲಾ ಸಂಚಾಲಕ ಕಳ್ಳೀಪುರ ಮಹದೇವಸ್ವಾಮಿ, ಹೊಳೆಸಾಲು ಅಧ್ಯಕ್ಷ ಪ್ರದೀಪ್, ತಾಲೂಕು ಉಪಾಧ್ಯಕ್ಷ ಅತ್ತಹಳ್ಳಿ ಸ್ವಾಮಿಗೌಡ, ಗಿರೀಶ್, ರಘು, ಶಾಂತರಾಜು, ಮಹೇಶ್, ಕೆಂಪರಾಜು, ಜಯಶಂಕರ್ ಮತ್ತಿತರರಿದ್ದರು.

ವಿ.ಸೋಮಣ್ಣರಿಂದ ಮಹಿಳೆಗೆ ಕಪಾಳಮೋಕ್ಷ ಪ್ರಕರಣ

ಸಚಿವ ಸ್ಥಾನದಿಂದ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ

ನಂಜನಗೂಡು, ಅ.24– ಸಮಸ್ಯೆ ಹೇಳಿಕೊಳ್ಳಲು ಬಂದ ಮಹಿಳೆಗೆ ಕಪಾಳಮೋಕ್ಷ ಮಾಡಿದ ಸಚಿವ ವಿ.ಸೋಮಣ್ಣ ಅವರನ್ನು ಸಚಿವ ಸ್ಥಾನದಿಂದ ಕೈ ಬಿಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಎದುರು ಜಮಾಯಿಸಿದ ರೈತ ಸಂಘದ ಪದಾಧಿಕಾರಿಗಳು, ಸಚಿವ ವಿ.ಸೋಮಣ್ಣ ಹಾಗೂ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಮೈಸೂರು ವಲಯ ಪ್ರಧಾನ ಕಾರ್ಯದರ್ಶಿ ರಘು, ಕೆಲ ತಿಂಗಳ ಹಿಂದೆ ಕಾನೂನು ಸಚಿವ ಮಾಧುಸ್ವಾಮಿ, ನಳಿನಿ ಎಂಬ ಮಹಿಳೆಗೆ



ರಾಸ್ಕಲ್ ಎಂಬ ಪದ ಬಳಸಿದ್ದರು. ಇದೀಗ ಸೋಮಣ್ಣನವರು ಸಮಸ್ಯೆ ಹೇಳಿಕೊಂಡು ಕಾಲಿಗೆ ಬೀಳಲು ಬಂದ ಕೆಂಪಮ್ಮ ಎಂಬ ಮಹಿಳೆಗೆ ಕಾಲು ಮುಟ್ಟಬೇಡ ಎಂದು ಕಪಾಳ ಮೋಕ್ಷ ಮಾಡಿರುವುದು ಖಂಡನೀಯ. ಆದ್ದರಿಂದ ಮುಖ್ಯಮಂತ್ರಿಗಳು ಕೂಡಲೇ ಸಚಿವ ಸೋಮಣ್ಣ ಅವರನ್ನು ಸಚಿವ ಸ್ಥಾನದಿಂದ ಕೆಳಗಿಳಿಸಬೇಕು ಅಥವಾ ಮಹಿಳಾ ದೌರ್ಜನ್ಯ ಕಾಯ್ದೆ ಅಡಿ ಬಂಧಿಸಿ ಜೈಲಿಗೆ ಕಳುಹಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಸತೀಶ್‌ರಾವ್, ಗೌರವಾಧ್ಯಕ್ಷ ಶಿವಣ್ಣ, ತಿಮ್ಮನಾಯಕ, ಸೋಮನಾಯಕ, ರಂಗಸ್ವಾಮಿ ನಾಯಕ, ದಸಂಸ ಸಂಚಾಲಕ ಮಂಜು ಸೇರಿದಂತೆ ರೈತ ಸಂಘದ ಕಾರ್ಯಕರ್ತರು ಇದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಹೆಡ್ ಬುಷ್(ಕ): ಬೆ.8ಕ್ಕೆ, 10.45ಕ್ಕೆ, ಮ.1.30ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ಹೆಡ್ ಬುಷ್(ಕ): ಸಂಜೆ 7.15ಕ್ಕೆ, ಮಾನ್ಸ್ಟರ್(ಮ): ರಾ. 10ಕ್ಕೆ
ಸ್ಕ್ರೀನ್ 3	ಹೆಡ್ ಬುಷ್(ಕ): ಬೆ.8.05ಕ್ಕೆ, ಬ್ಲ್ಯಾಕ್ ಆಡಮ್ (ಇ): ಬೆ.10.45ಕ್ಕೆ, ರಾತ್ರಿ 7.20ಕ್ಕೆ, 9.55ಕ್ಕೆ, ಸರ್ದಾರ್ (ತ): ಮ.1.15ಕ್ಕೆ, ಗಿನ್ನ(ತೆ): ಸಂ.4.30ಕ್ಕೆ,
ಸ್ಕ್ರೀನ್ 4	ಕಾಂತಾರ (ಕ): ಬೆ.10.10ಕ್ಕೆ, ರಾ.10ಕ್ಕೆ ಪ್ರಿನ್ಸ್ (ತ): ಮ.1.10ಕ್ಕೆ, ಸಂ.4.5ಕ್ಕೆ, ಸರ್ದಾರ್ (ತ): ಸಂ 6.55ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಾಂತಾರ (ಕ): ಬೆ.9.10ಕ್ಕೆ, ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಹೆಡ್ ಬುಷ್ (ಕ): ಬೆ.11.30ಕ್ಕೆ, ಸ.5ಕ್ಕೆ, ರಾ.10.30ಕ್ಕೆ ಬ್ಲ್ಯಾಕ್ ಆಡಮ್ (ಇ): ಬೆ.9ಕ್ಕೆ, ಮ.2.20ಕ್ಕೆ, ರಾ.7.50ಕ್ಕೆ
ಸ್ಕ್ರೀನ್ 4	ಪ್ರಿನ್ಸ್ (ತ): ಬೆ.9.55ಕ್ಕೆ, ರಾ.7.10ಕ್ಕೆ ಕಾಂತಾರ (ಕ): ಮ.12.45ಕ್ಕೆ, ಸರ್ದಾರ್ (ತ): ಮ.3.50ಕ್ಕೆ, ರಾ. 10.10ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಭೂ ನಾಟಕ ಮಂಡಳಿ(ಕ): ಬೆ.10.20ಕ್ಕೆ, ಸರ್ದಾರ್ (ತ): ಮ.12.40ಕ್ಕೆ, ಪ್ರಿನ್ಸ್ (ತ): ಮ.3.50ಕ್ಕೆ, ಸಂ. 6.40ಕ್ಕೆ ಮಾನ್ಸ್ಟರ್ (ಮ): ರಾ.9.30ಕ್ಕೆ
ಸ್ಕ್ರೀನ್ 2	ಕಾಂತಾರ (ಕ): ಬೆ.10.15ಕ್ಕೆ, ಸಂ. 4ಕ್ಕೆ, ಹೆಡ್ ಬುಷ್ (ಕ): ಮ.1.10ಕ್ಕೆ, ಸಂ.7ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಹೆಡ್ ಬುಷ್ (ಕ): ಬೆ.10ಕ್ಕೆ, ಮ.3.55ಕ್ಕೆ, ಕಾಂತಾರ (ಕ): ಮ.1ಕ್ಕೆ, ಸ.6.40ಕ್ಕೆ, 9.45ಕ್ಕೆ
ಸ್ಕ್ರೀನ್ 4	ಕಥಾನಾಯಕ (ಕ): ಬೆ.10.15ಕ್ಕೆ, ಪ್ರಿನ್ಸ್ (ತ): ಮ.1ಕ್ಕೆ, ಸರ್ದಾರ್ (ತ): ಮ. 3.55ಕ್ಕೆ, ಮಾನ್ಸ್ಟರ್ (ಮ): ಸಂ.7.05ಕ್ಕೆ, ಸರ್ದಾರ್ (ತ): ರಾ. 9.45ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗುರು ಶಿಷ್ಯರು (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಥ್ಯಾಂಕ್ ಗಾಡ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸರ್ದಾರ್ (ತ)	4 ಪ್ರದರ್ಶನಗಳು
ಸಂಗಂ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ಲಿಡೋ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ಪ್ರಭಾ	
ಪ್ರಿನ್ಸ್ (ತ)	4 ಪ್ರದರ್ಶನಗಳು

ವರುಣಾದಲ್ಲಿ ತಂದೆ ಸ್ಪರ್ಧಿಸದಿದ್ದರೆ ನಾನೇ ಅಭ್ಯರ್ಥಿ

ಶಾಸಕ ಡಾ.ಯತೀಂದ್ರ

ತಿ.ನರಸೀಪುರ, ಅ.24– ನನ್ನ ತಂದೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕೆಂಬುದನ್ನು ಸೂಕ್ತ ಸಮಯದಲ್ಲಿ ನಿರ್ಧರಿಸಲಿದ್ದಾರೆ. ಅವರು ವರುಣಾ ಕ್ಷೇತ್ರದಿಂದ ಸ್ಪರ್ಧಿಸದಿದ್ದರೆ, ನಾನೇ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದೇನೆ ಎಂದು ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.



ವರುಣಾ ವಿಧಾನಸಭಾ ಕ್ಷೇತ್ರದ ಹುನುಗನಹಳ್ಳಿಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ವರುಣಾದಿಂದ ಸಿದ್ದರಾಮಯ್ಯ ಸ್ಪರ್ಧಿಸುತ್ತಾರೋ ಅಥವಾ ನೀವೇ ಸ್ಪರ್ಧೆ ಮಾಡುತ್ತೀರೋ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಕ್ಷೇತ್ರದಲ್ಲಿ ಯಾರು ಸ್ಪರ್ಧಿಸುತ್ತಾರೆ ಎಂಬ ಬಗ್ಗೆ ಮತದಾರರಲ್ಲಿ ಯಾವುದೇ ಗೊಂದಲ ಇಲ್ಲ. ಅಪ್ಪ ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬುದನ್ನು ನಿರ್ಧರಿಸಿಲ್ಲ. ಅವರು ತೀರ್ಮಾನ ಮಾಡದ ಹೊರತು ನಾನೇನು ಹೇಳಲಾಗುವುದಿಲ್ಲ. ಸೂಕ್ತ ಸಮಯದಲ್ಲಿ ಅವರು ನಿರ್ಧಾರ ತೆಗೆದುಕೊಳ್ಳುತ್ತಾರೆ. ಅಲ್ಲಿಯವರೆಗೆ ಶಾಸಕನಾಗಿ ನಾನು ಕ್ಷೇತ್ರದ ಅಭಿವೃದ್ಧಿ ಕೆಲಸ ಮಾಡುತ್ತೇನೆ. ಅಕಸ್ಮಾತ್ ಅಪ್ಪ ವರುಣಾ ಕ್ಷೇತ್ರದಿಂದ ನಿಲ್ಲದಿದ್ದರೆ ನಾನೇ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತೇನೆ ಎಂದು ಸ್ಪಷ್ಟಪಡಿಸಿದರು.

ಪಕ್ಷಕ್ಕೆ ಚೈತನ್ಯ ತುಂಬಲಿದ್ದಾರೆ ಖರ್ಗೆ: ನಿಜಲಿಂಗಪ್ಪನವರ ನಂತರ ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಹೆಮ್ಮೆಯ ವಿಚಾರ. ಮುತ್ಸದ್ದಿ ರಾಜಕಾರಣಿ ಹಾಗೂ ಸಮರ್ಥ ನಾಯಕರಾಗಿರುವ ಅವರ ಅಧ್ಯಕ್ಷತೆಯಲ್ಲಿ ಪಕ್ಷ ಎತ್ತರಕ್ಕೆ ಬೆಳೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಈಗ ಕಾಂಗ್ರೆಸ್ ಪಕ್ಷಕ್ಕೆ ಸ್ವಲ್ಪ ಮಟ್ಟಿನ ಹಿನ್ನಡೆಯುಂಟಾಗಿರುವುದು ನಿಜವಾದರೂ, ಖರ್ಗೆ ಅಧ್ಯಕ್ಷರಾಗಿರುವುದರಿಂದ ಪಕ್ಷಕ್ಕೆ ಹೊಸ ಚೈತನ್ಯ ಬಂದಿದೆ. ಅವರ ಅಧ್ಯಕ್ಷತೆಯಲ್ಲಿ ಪಕ್ಷ ಮತ್ತೆ ಅಧಿಕಾರದ ಗದ್ದುಗೆ ಏರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ಕಲ್ಪನಾ, ಕಾಂಗ್ರೆಸ್ ಮುಖಂಡ ಶಿವಪ್ರಸಾದ್ ಇದ್ದರು.

ಧರ್ಮದ ಸತ್ವವನ್ನು ಆಳವಾಗಿ ತಿಳಿಯಿರಿ



ಬೈಲಕುಪ್ಪೆ, ಅ.24– ಎಲ್ಲಾ ಧರ್ಮಗಳು ಒಂದೇ ಆಗಿದ್ದು, ಸೌಹಾರ್ದತೆಯಿಂದ ಬದುಕುವುದು ಮಾತ್ರ ಮುಖ್ಯ. ಧರ್ಮದ ಸತ್ವವನ್ನು ಆಳವಾಗಿ ತಿಳಿಯಬೇಕು. ತತ್ವ ಸಿದ್ಧಾಂತಗಳು ಬೇರೆ, ಧಾರ್ಮಿಕ ಆಚರಣೆ ಬೇರೆ, ಎಲ್ಲಾ ಧರ್ಮಗಳ ಧಾರ್ಮಿಕ ಹಿನ್ನೆಲೆ ಅರಿತಾಗ ಮಾತ್ರ ಸೌಹಾರ್ದತೆ ಸಾಧ್ಯ ಎಂದು ಮಂಚದೇವನಹಳ್ಳಿ ಡೈರಿ ಅಧ್ಯಕ್ಷ ಎಂ.ಬಿ.ಮಂಜುನಾಥ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಜಾಮಿಯಾ ಮಸೀದಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಈದ್ ಮಿಲಾದ್‌ನಲ್ಲಿ ಅವರು ಮಾತನಾಡಿದರು.

ದೇಶದ ನಾನಾ ಕಡೆ ಹಿಂದೂ ಮುಸ್ಲಿಂ ಗಲಾಟೆ ಸರ್ವೇ ಸಾಮಾನ್ಯವಾಗಿದೆ. ಆದರೆ ಅನಾದಿ ಕಾಲದಿಂದಲೂ ಸ್ನೇಹ, ಪರಸ್ಪರ ಪ್ರೀತಿ, ದಿನೇ ದಿನೇ ಹೊಂದಿಕೊಂಡು ಬರುತ್ತಿರುವುದು ಬೈಲುಕುಪ್ಪೆ ಗ್ರಾಮದ ಭಾಗ್ಯ ಎಂದು ತಿಳಿಸಿದರು. ಈ ವೇಳೆ ಜಾಮಿಯಾ ಮಸೀದಿ ಅಧ್ಯಕ್ಷ ಗಫಾರ್ ಖಾನ್, ಕುಶಾಲನಗರದ ದಾರುಲ್ ಉಲೂಮ್, ಮದರಸಾ ಪ್ರಾಂಶುಪಾಲ ತಮೇಲ್ಕ್ ದಾರೀಮಿ, ಮೈಸೂರು ಜಿಲ್ಲಾ ಕಾಂಗ್ರೆಸ್ ಹಿರಿಯ ಕಾರ್ಯದರ್ಶಿ ಸಮಿಉಲ್ಲಾ ಖಾನ್, ಗ್ರಾಪಂ ಸದಸ್ಯರಾದ ನಿಸಾರ್ ಅಹ್ಮದ್, ದಾವತ್, ರಘು, ಗ್ರಾಮಸ್ಥರಾದ ಶಬ್ಬೀರ್ ಖಾನ್, ರಾಮಣ್ಣ, ಕೇಬಲ್ ದಿನೇಶ್, ಪೋಸ್ಟ್ ಮಾಸ್ಟರ್ ರಮೇಶ್, ಕೇಶವಮೂರ್ತಿ, ರಘು, ಗಣೇಶ್, ಲೋಕೇಶ್, ವೇಣುಗೋಪಾಲ್ ಸೇರಿದಂತೆ ಇತರರಿದ್ದರು.

ಇಂದು ಶ್ರೀಕಾಲಭೈರವೇಶ್ವರಸ್ವಾಮಿ ಉತ್ಸವ

ಹಿರೀಕ್ಯಾತನಹಳ್ಳಿ, ಅ.24– ಇಲ್ಲಿಗೆ ಸಮೀಪದ ಗಾವಡಗೆರೆಯಲ್ಲಿ ಶ್ರೀಕಾಲಭೈರವೇಶ್ವರಸ್ವಾಮಿ ಉತ್ಸವ ಮಂಗಳವಾರ ನಡೆಯಲಿದೆ. ದೀಪಾವಳಿ ಹಬ್ಬದ ಅಮಾವಾಸ್ಯೆ ಪ್ರಯುಕ್ತ 18ನೇ ವರ್ಷದ ವಾರ್ಷಿಕೋತ್ಸವ ಮಂಗಳವಾರ ನಡೆಯಲಿದ್ದು, ಅಂದು ಮಧ್ಯಾಹ್ನ 2.28 ರಿಂದ ಸಂಜೆ 6.32ರವರೆಗೆ ಸೂರ್ಯ ಗ್ರಹಣ ಇರುವುದರಿಂದ ಬೆಳಗ್ಗೆ 8 ಗಂಟೆಗೆ ಕಾಲಭೈರವೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಗ್ರಾಮದ ಕೆರೆಯಲ್ಲಿ ಶುದ್ಧೀಕರಿಸಲಾಗುವುದು. ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುವುದು. ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ನೆರವೇರಿಸಿ, ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು. ಸಂಜೆ 7 ಗಂಟೆ ನಂತರ ಕಾರ್ತಿಕ ಮಾಸದ ಪೂಜಾ ಕಾರ್ಯ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.



ಇತ್ತೀಚೆಗೆ ಸುರಿದ ಭಾರೀ ಮಳೆಗೆ ಹನಗೋಡು ಸಮೀಪದ ಹೊಸಪೆಂಜಹಳ್ಳಿ ಗ್ರಾಮದ ಕೃಷ್ಣ ಅವರ ಮನೆ ಗೋಡೆ ಕುಸಿದಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲಿಸಿ ಸೂಕ್ತ ಪರಿಹಾರ ಕಲ್ಪಿಸುವಂತೆ ಕೃಷ್ಣ ಒತ್ತಾಯಿಸಿದ್ದಾರೆ.

ಕಂಠೇನಹಳ್ಳಿ ಬಳಿ ರೈಲ್ವೆಹಳಿ ಸೇತುವೆ ನಿರ್ಮಾಣಕ್ಕೆ ಚಾಲನೆ



ಕೆ.ಆರ್.ನಗರ, ಅ.24– ನಿರೀಕ್ಷೆಗೂ ಮೀರಿದ ಮಳೆ ಬಿದ್ದಿದ್ದರಿಂದ ರೈತರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಇದನ್ನು ಯಾವ ಸರ್ಕಾರ ಇದ್ದರೂ ಕೂಡ ತಡೆಯಲು ಸಾಧ್ಯವಿಲ್ಲ. ಆದರೆ ತುರ್ತಾಗಿ ಕೆಲಸಗಳನ್ನು ಮಾಡಿಸಲಾಗುವುದು ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಹೊರ ವಲಯದ ಕಂಠೇನಹಳ್ಳಿ ಬಳಿ ಚಾಮರಾಜ ಬಲದಂಡೆ ನಾಲೆಯ 9ನೇ ಬ್ರಾಂಚ್ ಹತ್ತಿರ ಹಳೇ ರೈಲ್ವೆ ಹಳಿ ಸೇತುವೆ (ಅಕ್ವಿಡೆಕ್) ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಬಾರಿ ನಿರೀಕ್ಷೆಗೂ ಮೀರಿ ಅಪಾರ ಮಳೆಯಾಗುತ್ತಿರುವುದರಿಂದ ನಾಲೆಗಳಲ್ಲಿ ನೀರಿನ ಹರಿವಿನ ಪ್ರಮಾಣ ಹೆಚ್ಚಾದ ಕಾರಣ ಕೆಲವು ನಾಲಾ ಏರಿಗಳು ಕುಸಿದಿವೆ.

ಇಲ್ಲಿ ರೈಲ್ವೆ ಹಳಿಯ ಮೇಲ್ಭಾಗದಲ್ಲಿ ಇದ್ದ ಕಾಲುವೆ ಗೋಡೆಗಳು ಕುಸಿದು ಬಿದ್ದಿರುವುದಲ್ಲದೇ ತಾಲೂಕಿನ ಹಲವೆಡೆ ಸಮಸ್ಯೆ ಉಂಟಾಗಿದೆ. ಈಗಾಗಲೇ ನೀರಾವರಿ ಇಲಾಖೆಯ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ಮಾಡಿಸಿದ್ದು 2.30 ಕೋಟಿ ಅಂದಾಜು ವೆಚ್ಚದ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಿಸಿದ್ದೇನೆ ಎಂದು ತಿಳಿಸಿದರು. ಹಾರಂಗಿ ಇಇ ಜಿ.ಜೆ.ಈರಣ್ಣನಾಯಕ, ಎಇಇ ಬಿ.ಜೆ. ಗುರುರಾಜ್, ಎಇ ಅಯಾಜ್, ಪುರಸಭಾ ಸದಸ್ಯ ಉಮೇಶ್, ಮಾಜಿ ಸದಸ್ಯ ಸಿರಾಜ್, ಜೆಡಿಎಸ್ ನಗರ ಪ್ರಧಾನ ಕಾರ್ಯದರ್ಶಿ ರುದ್ರೇಶ್, ಗುತ್ತಿಗೆ ದಾರ ಬಸವರಾಜ್, ಮುಖಂಡರಾದ ಚಿಕ್ಕವೀರು, ಹನಸೋಗೆ ನಾಗರಾಜ್, ವಿಷ್ಣು, ಸತ್ಯ, ವಿಶ್ವನಾಥ್, ರಾಘವೇಂದ್ರ ಭಾಸ್ಕರ್ ಸೇರಿದಂತೆ ಇನ್ನಿತರರಿದ್ದರು.

ಮಹರ್ಷಿ ವಾಲ್ಮೀಕಿ ಒಂದು ಸಮುದಾಯಕ್ಕೆ ಸೀಮಿತರಲ್ಲ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ



ಹನಗೋಡು, ಅ.24– ಮಹರ್ಷಿ ವಾಲ್ಮೀಕಿ ಯಾವುದೇ ಒಂದು ಸಮುದಾಯಕ್ಕೆ ಸೀಮಿತರಲ್ಲ. ಇಡೀ ವಿಶ್ವಕ್ಕೆ ರಾಮರಾಜ್ಯ ಪರಿಚಯಿಸಿದ ಕೀರ್ತಿ ಮಹರ್ಷಿ ವಾಲ್ಮೀಕಿ ಅವರದು. ರಾಮಾಯಣ ಮಹಾಕಾವ್ಯ ಬರೆಯುವ ಮೂಲಕ ಸತತ ಪರಿಶ್ರಮವಿದ್ದಲ್ಲಿ ಸಾಧನೆ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ತಿಳಿಸಿದರು.

ಇಲ್ಲಿನ ಮುತ್ತರಾಯನಹೊಸಹಳ್ಳಿಯಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವಕ್ಕೆ ರಾಮಾಯಣದಂತಹ ಮಹಾನ್ ಗ್ರಂಥ ನೀಡಿದ ಮಹರ್ಷಿ ವಾಲ್ಮೀಕಿ ಅವರು ಮನುಕುಲಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹಾಗೆಯೇ ಮಾನವೀಯತೆಯೇ ಧರ್ಮ ಎಂಬುದನ್ನು ಪ್ರತಿಪಾದಿಸಿದ್ದರು. ರಾಮಾಯಣ ನಿತ್ಯ ನಡೆಯುವ ಘಟನೆಗಳಾಗಿದ್ದು, ಶಾಂತಿ, ಸಹಬಾಳ್ವೆ ಅಹಿಂಸೆ ಪ್ರತಿಪಾದಿಸಿದ ವಾಲ್ಮೀಕಿಯಿಂದ ಪಂಪ, ರನ್ನ, ಪೊನ್ನ, ಹರಿಹರ, ರಾಘವಾಂಕ ಮತ್ತಿತರ ಮಹಾನ್ ಕವಿಗಳಿಂದ ಬೆಳಕಿಗೆ ಬಂದಿದೆ ಎಂದರು.


ಮಾನವ ಕುಲಕ್ಕೆ ಮಹರ್ಷಿ ವಾಲ್ಮೀಕಿ ಅವರ ರಾಮಾಯಣ ಕೃತಿ ಉತ್ತಮ ಕೊಡುಗೆ. ಮಹನೀಯರ ಉತ್ತಮ ವಿಚಾರಗಳನ್ನು ಎಲ್ಲರೂ ತಿಳಿಯಬೇಕು. ನುಡಿದಂತೆ ನಡೆದುಕೊಳ್ಳುವುದು ವಾಲ್ಮೀಕಿ ರಾಮಾಯಣದಿಂದ ತಿಳಿದು ಬರುತ್ತದೆ ಎಂದ ಅವರು, ಸಾಮಾನ್ಯ ವ್ಯಕ್ತಿಯಾಗಿದ್ದ ವಾಲ್ಮೀಕಿ ತನ್ನ ಸಾಧನಾಶೀಲತೆಯಿಂದ ಜಗತ್ತಿಗೆ ರಾಮಾಯಣದಂತಹ ಆದರ್ಶ ಗ್ರಂಥವನ್ನು ನೀಡಿ ಸಂತರಾದರು. ಇದ್ದಕ್ಕೆ ಅವರಲ್ಲಿದ್ದ ಜ್ಞಾನ ಸಂಪನ್ನತೆ ಕಾರಣ ಎಂದು ಮತ್ತೆ ಮತ್ತೆ ಹೇಳಬೇಕಾಗಿಲ್ಲ ಎಂದರು.

ಸಮಾರಂಭದಲ್ಲಿ ಕೆಎಂಎಫ್ ನಿರ್ದೇಶಕ ಕೆ.ಎಸ್.ಕುಮಾರ್, ತಾಲೂಕು ನಾಯಕ ಸಮಾಜದ ಅಧ್ಯಕ್ಷ ಅಣ್ಣಯ್ಯ ನಾಯ್ಕ, ಗ್ರಾಪಂ ಮಾಜಿ ಅಧ್ಯಕ್ಷ ಜಗದೀಶ್ ಮತ್ತು ಗ್ರಾಮಸ್ಥರು ಹಾಜರಿದ್ದರು.



ಹುಣಸೂರಿನ ತಾಲೂಕು ಕಚೇರಿಯಲ್ಲಿ ನಾಡಹಬ್ಬಗಳ ಆಚರಣಾ ಸಮಿತಿಯಿಂದ ಏರ್ಪಡಿಸಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯಲ್ಲಿ ರಾಣಿ ಚೆನ್ನಮ್ಮಳ ಭಾವಚಿತ್ರಕ್ಕೆ ಶಾಸಕ ಹೆಚ್.ಪಿ. ಮಂಜುನಾಥ್ ಪುಷ್ಪನಮನ ಸಲ್ಲಿಸಿದರು. ಈ ವೇಳೆ ಎಸಿ ವರ್ಣಿತ್ ನೇಗಿ, ತಹಸೀಲ್ದಾರ್ ಡಾ.ಕರ್ನಲ್ ಲೋಕೇಶ್, ಉಪ ತಹಸೀಲ್ದಾರ್ ನರಸಿಂಹಯ್ಯ, ಶಕೀಲಾ ಬಾನು, ನಗರಸಭೆ ಉಪಾಧ್ಯಕ್ಷೆ ಆಶಾ, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಸೇರಿದಂತೆ ಇನ್ನಿತರಿದ್ದರು.

ಬೆಟ್ಟದಪುರದಲ್ಲಿ ದೀಪಾವಳಿ ದೀವಟಿಗೆ ಉತ್ಸವಕ್ಕೆ ಸಕಲ ಸಿದ್ಧತೆ



> ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ದೀಪಾವಳಿ ದೀವಟಿಗೆ ಉತ್ಸವವನ್ನು ಸರಳವಾಗಿ ಆಚರಿಸಲಾಗಿತ್ತು. ಈ ಬಾರಿ ಅದ್ದೂರಿಯಾಗಿ ಆಚರಿಸಲು ಎಲ್ಲರೂ ಒಪ್ಪಿದ್ದು, ಎಲ್ಲಾ ರೀತಿಯ ಸಿದ್ಧತೆ ನಡೆದಿದೆ. ಸಾರ್ವಜನಿಕರು ಶಾಂತಿಯುತವಾಗಿ ಹಬ್ಬ ಆಚರಿಸುವ ಮೂಲಕ ಸಹಕರಿಸಬೇಕು. ಯಾವುದೇ ಅಹಿತಕರ ಘಟನೆ ನಡೆಯಲು ಅವಕಾಶ ನೀಡಬಾರದು. ಬೆಟ್ಟಕ್ಕೆ ತೆರಳುವ ಜನರಿಗೆ ಯಾವುದೇ ತೊಂದರೆಯಾಗದಂತೆ ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಕೈಗೊಳ್ಳಲಿದೆ. ಆರೋಗ್ಯ ಇಲಾಖೆಯಿಂದ ಬೆಟ್ಟದ ತಪ್ಪಲಿನಲ್ಲಿ ತುರ್ತು ಚಿಕಿತ್ಸಾ ಕೇಂದ್ರ ತೆರೆಯಲಾಗುವುದು. ಸ್ವಚ್ಛತೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಪಂನಿಂದ ಮಾಡಲಾಗುವುದು. - **ಕೆ.ಚಂದ್ರಮೌಳಿ, ತಹಸೀಲ್ದಾರ್.**
>
> ದೀಪಾವಳಿ ಹಬ್ಬದ 2ನೇ ದಿನವಾದ ಮಂಗಳವಾರ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ ಮುಂಜಾನೆ 5 ರಿಂದ ಮಧ್ಯಾಹ್ನ 1 ಗಂಟೆವರೆಗೆ ಪೂಜೆ, ದೇವರ ದರ್ಶನವಿರುತ್ತದೆ. ಬಳಿಕ ಸೂರ್ಯಗ್ರಹಣ ಇರುವುದರಿಂದ ಮಧ್ಯಾಹ್ನ 2 ರಿಂದ ಸಂಜೆ 6 ಗಂಟೆವರೆಗೆ ದೇವರ ದರ್ಶನವಿರುವುದಿಲ್ಲ. ದೀಪಾವಳಿ ಹಬ್ಬದಂದು ಬುಧವಾರ ಎಂದಿನಂತೆ ದೇವರ ದರ್ಶನವಿರುತ್ತದೆ. - **ಕೃಷ್ಣಪ್ರಸಾದ್, ದೇವಾಲಯದ ಅರ್ಚಕ.**

ಬೆಟ್ಟದಪುರ, ಅ.24– ಐತಿಹಾಸಿಕ ಹಿನ್ನೆಲೆ ಇರುವ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ಬುಧವಾರ ನಡೆಯುವ ದೀವಟಿಗೆ ಉತ್ಸವಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಕೊರೊನಾ ಹಿನ್ನೆಲೆಯಲ್ಲಿ ಪಂಜಿನ (ದೀವಟಿಗೆ) ಉತ್ಸವ ಕಳೆದ 2 ವರ್ಷಗಳ ಕಾಲ ಸರಳವಾಗಿ ನಡೆದಿತ್ತು. ಆದರೆ ಈ ಬಾರಿ ಅದ್ದೂರಿಯಾಗಿ ಆಚರಿಸಲು ತಾಲೂಕು ಆಡಳಿತ ತೀರ್ಮಾನಿಸಿರುವುದರಿಂದ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ದೇವರ ಮೆರವಣಿಗೆ: ಬೆಳ್ಳಿ ಬಸಪ್ಪ, ಗಣಪತಿ ಮತ್ತು ಭ್ರಮರಾಂಬ ಸಮೇತ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ಉತ್ಸವ ಮೂರ್ತಿಗಳನ್ನು ಮಂಗಳವಾರ ರಾತ್ರಿ ಬೆಟ್ಟದ ಮೇಲಿನ ದೇವಾಲಯಕ್ಕೆ ತೆಗೆದುಕೊಂಡು ಹೋಗಲಾಗುವುದು. ಬುಧವಾರ ಬೆಳಗ್ಗೆ ಬೆಟ್ಟದ ದೇವಸ್ಥಾನದಲ್ಲಿ ಉತ್ಸವ ಮೂರ್ತಿಗಳಿಗೆ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಸೇರಿದಂತೆ ವಿಶೇಷ ಪೂಜೆ ಕೈಂಕರ್ಯ ನಡೆಯಲಿವೆ. ನಂತರ ಉತ್ಸವ ಮೂರ್ತಿಗಳ ಪಂಜಿನ ಮೆರವಣಿಗೆ ಆರಂಭವಾಗಲಿದ್ದು, ಈ ವೇಳೆ ಭಕ್ತರು ತಮ್ಮ ಮನೆಯಲ್ಲಿ ಸಿದ್ಧಪಡಿಸಿ ತಂದ ಪಂಜಿನೊಂದಿಗೆ (ದೀವಟಿಗೆ) ಬೆಟ್ಟದಪುರ, ಬೆಟ್ಟದತುಂಗ, ಹರದೂರು, ಡಿ.ಜಿ.ಕೊಪ್ಪಲು, ಬಾರಸೇ, ಕುಡುಕೂರು, ಕೂರಗಲ್ಲು ಸೇರಿದಂತೆ ಬೆಟ್ಟದ ತಪ್ಪಲಿನ ಗ್ರಾಮಗಳಲ್ಲಿ ಮೆರವಣಿಗೆ ಮಾಡಿ ಬಳಿಕ ಮೂಲ ಸ್ಥಾನವಾದ ಬೆಟ್ಟದಪುರದ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಕ್ಕೆ ಉತ್ಸವ ಮೂರ್ತಿ ತಲುಪಲಿದೆ.

ಮೆರವಣಿಗೆ ವೇಳೆ ಬೆಟ್ಟದ ಸುತ್ತಮುತ್ತಲಿನ ಗ್ರಾಮದಲ್ಲಿ ಪ್ರತಿ ಮನೆ ಮುಂದೆ ಹಸಿರು ಚಪ್ಪರ ಹಾಕಿರುತ್ತಾರೆ. ಉಪ್ಪಾರ ಜನಾಂಗದವರು ಶ್ರೀ ಮಲ್ಲಿಕಾರ್ಜುನಸ್ವಾಮಿ ಹಾಗೂ ಬೆಳ್ಳಿ ಬಸಪ್ಪ ಪಲ್ಲಕ್ಕಿ ಉತ್ಸವವನ್ನು ಪ್ರತಿ ಚಪ್ಪರದಲ್ಲೂ ಕೂರಿಸಿದಾಗ ಮನೆಗೆ ಬಂದ ನೆಂಟರು ಸೇರಿದಂತೆ ಜನರು ದೇವರ ದರ್ಶನ ಪಡೆಯುತ್ತಾರೆ. ಬೆಟ್ಟದತುಂಗ ಹಾಗೂ ಕುಡುಕೂರು ಗ್ರಾಮಗಳಲ್ಲಿ ಜಾತ್ರೆಯ ವಾತಾವರಣವಿರಲಿದೆ. ಕಳೆದ 2 ವರ್ಷ ಕೊರೊನಾ ಹಿನ್ನಲೆಯಲ್ಲಿ ದೀವಟಿಗೆ ಉತ್ಸವ ಸರಳವಾಗಿ ನಡೆದರೂ, ಸಾವಿರಾರು ಯುವಕರು, ಭಕ್ತರು ಕೋವಿಡ್ ಮಾರ್ಗಸೂಚಿ ಗಾಳಿಗೆ ತೂರಿ ಬೆಟ್ಟ ಹತ್ತಿದ್ದರು. ಈ ವೇಳೆ ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿರುವುದರಿಂದ ನಿರೀಕ್ಷೆಗಿಂತ ಹೆಚ್ಚಿನ ಭಕ್ತರು ಬೆಟ್ಟ ಹತ್ತಲಿದ್ದಾರೆ ಎಂದು ಅಂದಾಜಿಸಲಾಗಿದೆ.


LG
Life's Good
THE ONE AND ONLY
LG OLED
Diwali full of innovations Life's Good Celebrations
This Diwali, celebrate your success with LG OLED TV.
FESTIVE OFFERS*
5 YEAR ASSURANCE
FREE* Soundbar
Up to 20% CASHBACK ON CREDIT / DEBIT CARDS
FREE LG Smart TV
1 EMI FREE
FIXED EMI Starting from ₹2999*
SPECIAL PRICE
OLED CIRCLE
INTRODUCING THE ALL-NEW RANGE OF LG REFRIGERATORS
STUNNINGLY STYLISH
AND GET UP TO 20%* CASHBACK ON PURCHASE OF LG REFRIGERATORS
GC-X257CSES
Inverter Linear Compressor
InstaView Door-in-Door™
ThinQ (Wi-fi)
Door Cooling+™
Water and Ice Dispenser
with UV Nano
Hygiene Fresh+™
M051RSWC FREE* GET MINI BAR
Capacity: 674 Litres
GL-T412VPZX
LG ThinQ™
Door Cooling+™
Hygiene Fresh
Convertible
3-Star Rating
Smart Inverter Compressor™
Shiny Steel
Capacity: 360Litres
DoorCooling+™
Go Easy Intelligent! with AI DD™
MORE CONVENIENCE & MORE FABRIC CARE
FHD1057STB 10.5 kg / 7 kg
AI Direct Drive™
Steam™
6 Motion DD
TurboWash™360°
LG ThinQ™
Smart Diagnosis™
10-Year Warranty*
Max. 1400 RPM
Colour: Black VCM + Chrome
THD10SWP 10 kg
5-Star Rating
AI Direct Drive™
6 Motion Direct Drive
TurboWash™
LG ThinQ™
In-Built Heater
Turbodrum
Color: Platinum/Black
AND GET UP TO 20%* CASHBACK ON PURCHASE OF LG WASHING MACHINE
LG FRONT LOAD WASHING MACHINE
BIG CAPACITY FOR BIGGER LOADS
FHP1411Z9B 11 kg
AI Direct Drive™
Steam™
6 Motion Direct Drive
TurboWash 360°
LG ThinQ™
New Design with Bigger Capacity in Same Size
Color: Black Steel
FHP1410Z7P 10 kg
AI Direct Drive™
Steam™
6 Motion Direct Drive
TurboWash™
LG ThinQ™
New Design with Bigger Capacity in Same Size
Color: Platinum + Shiny Rose Gold
ABOVE OFFERS AVAIL AT THE FOLLOWING LOCATIONS
ಶ್ರೀಕಂಠೇಶ್ವರ SKTVC SINCE 1994 28 ELECTRONICS | MOBILES | IT | FURNITURE


ಬಿ.ಜೆ.ಪಿ ಯುವ ಮುಖಂಡರು ಮತ್ತು ಸಮಾಜ ಸೇವಕರಾದ
ಸಂತೋಷ್ (ಶಂಭು) ಮತ್ತು ಮನು ಶೈವ್ (ಅಪ್ಪಿ) ರವರಿಗೆ ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು : ಸಂತೋಷ್ (ಶಂಭು) ಮತ್ತು ಮನು ಶೈವ್ (ಅಪ್ಪಿ) ಸ್ನೇಹಿತರು, ಮೈಸೂರು